ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ)

KARNATAKA RENEWABLE ENERGY DEVELOPMENT LIMITED

(A Government of Karnataka Undertaking)

24th

ವಾರ್ಷಿಕ ವರದಿ

Annual Report

2019-20

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ)

ANNUAL REPORT

24ನೇ ವಾರ್ಷಿಕ ವರದಿ 2019 - 20

ನೋಂದಾಯಿತ ಕಛೇರಿ:
ನಂ. 36, "ಶಾಂತಿ ಗೃಹ", ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕಟ್ಟಡ,
ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಆಫೀಸ್ ಹತ್ತಿರ,
ಪ್ಯಾಲೇಸ್ ರಸ್ತೆ, ಬೆಂಗಳೂರು – 560001.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

ಬೆಂಗಳೂರು

ವಿಷಯ ಸೂಚಿ

ಕ್ರಮ ಸಂಖ್ಯೆ	ವಿವರಗಳು	ಪುಟ
1.	ನಿರ್ದೇಶಕರ ಮಂಡಳಿ	1
2.	ವಾರ್ಷಿಕ ಸರ್ವಸದಸ್ಯರ ಸಭೆ ಸೂಚನಾ ಪತ್ರ	2
3.	2019–20 ನೇ ಸಾಲಿನ ಕಾರ್ಯಚಟುವಟಿಕೆಗಳು	3 – 4
4.	ನಿರ್ದೇಶಕರ ವರದಿ	5 – 32
5.	ಭಾರತದ ನಿಯಂತ್ರಕ ಮತ್ತು ಮಹಾಲೇಖಾ ಪರೀಕ್ಷಕರ ವ್ಯಾಖ್ಯಾನ ಪ್ರಮಾಣ ಪತ್ರ – ಸ್ವತಂತ್ರ ಲೆಕ್ಕ ಪತ್ರಗಳು	33
6.	ಲೆಕ್ಕ ಪರಿಶೋಧಕರ ವರದಿ – ಸ್ವತಂತ್ರ ಲೆಕ್ಕ ಪತ್ರಗಳು	34 – 48
7.	ತುಲನಾತ್ಮಕ ಪಟ್ಟಿ – ಸ್ವತಂತ್ರ ಲೆಕ್ಕ ಪತ್ರಗಳು	50 – 51
8.	ಲಾಭ ಮತ್ತು ನಷ್ಟದ ವಿವರಣಾ ಪಟ್ಟಿ – ಸ್ವತಂತ್ರ ಲೆಕ್ಕ ಪತ್ರಗಳು	52 – 53
9.	ನಗದು ಪ್ರವಹನ ವಿವರಣಾ ಪಟ್ಟಿ – ಸ್ವತಂತ್ರ ಲೆಕ್ಕ ಪತ್ರಗಳು	54 – 55
10.	ಈಕ್ವೀಟಿ ಷೇರು ಬಂಡವಾಳ ಬದಲಾವಣೆ ಪಟ್ಟಿ– ಸ್ವತಂತ್ರ ಲೆಕ್ಕ ಪತ್ರಗಳು	56 – 57
11.	ಲೆಕ್ಕ ಪತ್ರಕ್ಕೆ ಟಿಪ್ಪಣಿ – ಸ್ವತಂತ್ರ ಲೆಕ್ಕ ಪತ್ರಗಳು	58 – 119
12.	ಭಾರತದ ನಿಯಂತ್ರಕ ಮತ್ತು ಮಹಾಲೇಖಾ ಪರೀಕ್ಷಕರ ವ್ಯಾಖ್ಯಾನ – ಕ್ರೂಢೀಕೃತ ಲೆಕ್ಕ ಪತ್ರಗಳು	120
13.	ಲೆಕ್ಕ ಪರಿಶೋಧಕರ ವರದಿ – ಕ್ರೋಢಿಕೃತ ಲೆಕ್ಕ ಪತ್ರಗಳು	121 – 135
14.	ತುಲನಾತ್ಮಕ ಪಟ್ಟಿ – ಕ್ರೋಢಿಕೃತ ಲೆಕ್ಕ ಪತ್ರಗಳು	136 – 137
15.	ಲಾಭ ಮತ್ತು ನಷ್ಟದ ವಿವರಣಾ ಪಟ್ಟಿ – ಕ್ರೋಢಿಕೃತ ಲೆಕ್ಕ ಪತ್ರಗಳು	138 – 139
16.	ನಗದು ಪ್ರವಹನ ವಿವರಣಾ ಪಟ್ಟಿ – ಕ್ರೋಢಿಕೃತ ಲೆಕ್ಕ ಪತ್ರಗಳು	140 – 141
17.	ಈಕ್ವೀಟಿ ಷೇರು ಬಂಡವಾಳ ಬದಲಾವಣೆ ಪಟ್ಟಿ – ಕ್ರೋಢಿಕೃತ ಲೆಕ್ಕ ಪತ್ರಗಳು	142 – 143
18.	ಲೆಕ್ಕ ಪತ್ರಕ್ಕೆ ಟಿಪ್ಪಣಿ – ಕ್ರೋಢಿಕೃತ ಲೆಕ್ಕ ಪತ್ರಗಳು	144 –205

ಮಂಡಳಿಯ ನಿರ್ದೇಶಕರು

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
31–03–2020 ರಂತೆ

ಕ್ರಮ ಸಂಖ್ಯೆ	ನಿರ್ದೇಶಕರ ಹೆಸರು ಮತ್ತು ಪದನಾಮ	ಹುದ್ದೆ
1	**ಶ್ರೀ. ಮಹೇಂದ್ರ ಜೈನ್, ಐ.ಎ.ಎಸ್,** ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಧ್ಯಕ್ಷರು, ಕೆ.ಆರ್.ಇ.ಡಿ.ಎಲ್, ಕರ್ನಾಟಕ ಸರ್ಕಾರ, ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು, 560001.	ಅಧ್ಯಕ್ಷರು ಮತ್ತು ನಿರ್ದೇಶಕರು
2	**ಶ್ರೀ. ಎನ್. ಮಂಜುನಾಥ್ ಪ್ರಸಾದ್, ಐ.ಎ.ಎಸ್,** ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಕೊಠಡಿ ಸಂಖ್ಯೆ 505, ಬೆಂಗಳೂರು, 560001	ನಿರ್ದೇಶಕರು
3	**ಶ್ರೀ. ಅಂಜುಮ್ ಪರ್ವೇಜ್, ಐ.ಎ.ಎಸ್,** ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು, 560001.	ನಿರ್ದೇಶಕರು
4	**ಶ್ರೀ. ವಿ. ಪೊನ್ನುರಾಜ್, ಐ.ಎ.ಎಸ್,** ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಸಿ.ಎಲ್. ಶಕ್ತಿ ಭವನ, ಬೆಂಗಳೂರು, 560001	ನಿರ್ದೇಶಕರು
5	**ಡಾ. ಎನ್. ಮಂಜುಳ, ಐ.ಎ.ಎಸ್,** ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಸಿ.ಎಲ್. ಕಾವೇರಿ ಭವನ, ಬೆಂಗಳೂರು, 560001	ನಿರ್ದೇಶಕರು
6	**ಶ್ರೀ. ಎಂ. ಬಿ. ರಾಜೇಶ್ ಗೌಡ, ಐ.ಎ.ಎಸ್,** ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ಕೆ.ಆರ್. ಸರ್ಕಲ್, ಬೆಂಗಳೂರು, 560001	ನಿರ್ದೇಶಕರು
7	**ಶ್ರೀಮತಿ. ಸ್ಮಿತಾ ಬಿಜ್ಜೂರ್, ಐ.ಎಫ್.ಎಸ್,** ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿ,(ಅರಣ್ಯ), ಪರಿಸರ ಮತ್ತು ಪರಿಸರ ವಿಜ್ಞಾನ ಇಲಾಖೆ, 4ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು –560001.	ನಿರ್ದೇಶಕರು
8	**ಡಾ. ಎಚ್. ಬಿ. ಬೂದೆಪ್ಪ, ಕೆ.ಎ.ಎಸ್,** ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್, #39, "ಶಾಂತಿಗೃಹ", ಭಾರತ್ ಸ್ಕೌಟ್ಸ್ & ಬಿಲ್ಡಿಂಗ್, ಅರಮನೆ ರಸ್ತೆ, ಬೆಂಗಳೂರು, 560001.	ನಿರ್ದೇಶಕರು
9	**ಶ್ರೀ. ರಾಜ್‌ಕುಮಾರ್.ಎಸ್. ಬಿರಾದಾರ್,** ಜಂಟಿ ನಿರ್ದೇಶಕರು (ಎನ್.ಸಿ.ಇ), ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು, 560001.	ನಿರ್ದೇಶಕರು

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ)

#39, "ಶಾಂತಿ ಗೃಹ" ಭಾರತ್ ಸ್ಕೌಟ್ಸ್ & ಗೈಡ್ಸ್, ಅರಮನೆ ರಸ್ತೆ, ಬೆಂಗಳೂರು–560001
PH: 080-22282220, website: kredlinfo.in

ಸೂಚನೆ

ಎಲ್ಲ ಪಾಲುದಾರರಿಗೆ,

ಈ ಕೆಳಗಿನ ವ್ಯವಹಾರಗಳನ್ನು ನಡೆಸುವ ಸಲುವಾಗಿ ಕಂಪನಿಯ 24ನೇ ವಾರ್ಷಿಕ ಸರ್ವಸದಸ್ಯರ ಸಭೆಯು ದಿನಾಂಕ: 24ನೇ ಡಿಸೆಂಬರ್, 2020 ರಂದು ಮಧ್ಯಾಹ್ನ 12.00 ಗಂಟೆಗೆ ನೋದಾಯಿತ ಕಂಪನಿ ಕಛೇರಿ ಸಂಖ್ಯೆ 39, "ಶಾಂತಿಗೃಹ" ಭಾರತ್ ಸ್ಕೌಟ್ಸ್ & ಗೈಡ್ಸ್, ಅರಮನೆ ರಸ್ತೆ, ಬೆಂಗಳೂರು – 560 001, ಇಲ್ಲಿ ವೀಡಿಯೊ ಕಾನ್ಫರೆನ್ಸ್ ಮೂಲಕ ನಡೆಯಲಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

ಸಾಮಾನ್ಯ ವ್ಯವಹಾರ:

01. ಸ್ವೀಕರಿಸುವುದು, ಪರಿಗಣಿಸುವುದು ಮತ್ತು ಅಳವಡಿಸಿಕೊಳ್ಳುವುದಕ್ಕಾಗಿ.
    - ಅ) 2013ನೇ ಸಾಲಿನ ಕಂಪನಿಗಳ ಅಧಿನಿಯಮದ ಪ್ರಕರಣ 143(6)(ಬಿ) ಅಡಿಯಲ್ಲಿ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಾಪರೀಕ್ಷಕರಿಂದ ಸ್ವೀಕರಿಸಲಾದ ಟಿಪ್ಪಣಿಗಳೊಂದಿಗೆ 31ನೇ ಮಾರ್ಚ್, 2020ಕ್ಕೆ ಕೊನೆಗೊಂಡ ವರ್ಷಕ್ಕೆ ಕಂಪನಿಯು ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (ಇಂಡ್ ಎಎಸ್) ಪ್ರಕಾರ ತಯಾರಿಸಲ್ಪಟ್ಟ ಸ್ವತಂತ್ರ ಲೆಕ್ಕಪರಿಶೋಧಿತ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧಕರ ಮತ್ತು ನಿರ್ದೇಶಕರ ವರದಿಗಳು.
    - ಆ) 2013 ನೇ ಸಾಲಿನ ಕಂಪನಿಗಳ ಅಧಿನಿಯಮದ ಪ್ರಕರಣ 143(6)(ಬಿ) ಅಡಿಯಲ್ಲಿ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಾಪರೀಕ್ಷಕರಿಂದ ಸ್ವೀಕರಿಸಲಾದ ಟಿಪ್ಪಣಿಗಳೊಂದಿಗೆ 31ನೇ ಮಾರ್ಚ್, 2020ಕ್ಕೆ ಕೊನೆಗೊಂಡ ವರ್ಷಕ್ಕೆ ಕಂಪನಿಯು ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (ಇಂಡ್ ಎಎಸ್) ಪ್ರಕಾರ ತಯಾರಿಸಲ್ಪಟ್ಟ ಕ್ರೋಢೀಕೃತ ಲೆಕ್ಕಪರಿಶೋಧಿತ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧಕರ ಮತ್ತು ನಿರ್ದೇಶಕರ ವರದಿಗಳು.
2. 2020–21 ನೇ ಆರ್ಥಿಕ ವರ್ಷಕ್ಕೆ ಭಾರತದ ನಿಯಂತ್ರಕ ಮತ್ತು ಮಹಾಲೇಖಾಪರೀಕ್ಷಕರು, ನವದೆಹಲಿ ಇವರಿಂದ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಾಗಿ ನೇಮಕಗೊಂಡಿರುವ ಮೆ. ವಿಷ್ಣು ರಾಜೇಂದ್ರನ್ ಮತ್ತು ಕಂ. ಲೆಕ್ಕಪರಿಶೋಧಕರಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ಸಂಭಾವನೆಯನ್ನು ನಿಗದಿಪಡಿಸಲು ನಿರ್ದೇಶಕ ಮಂಡಳಿಗೆ ಅಧಿಕಾರ ನೀಡುವುದು.

ಮಂಡಳಿಯ ಆದೇಶಾನುಸಾರ

ಸಹಿ/–

(ಸಿಎಸ್. ಶಶಿಧರ ಜಿ.ಎಸ್.)

ವೃತ್ತಿನಿರತ ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು

ದಿನಾಂಕ : 19.12.2020

ಟಿಪ್ಪಣಿ:

1. ಸಭೆಗೆ ಹಾಜರಾಗಿ ಮತ ಚಲಾಯಿಸಲು ಹಕ್ಕುಳ್ಳವರಾಗಿರುವ ಸದಸ್ಯರು ತಮ್ಮ ಬದಲಾಗಿ ಹಾಜರಾಗಿ ಮತ ಚಲಾಯಿಸಲುಪ್ರತಿನಿಧಿ (ಪ್ರಾಕ್ಸಿ)ಯನ್ನು ನೇಮಕ ಮಾಡಲು ಹಕ್ಕುಳ್ಳವರಾಗಿದ್ದು ಮತ್ತು ಪ್ರತಿನಿಧಿ (ಪ್ರಾಕ್ಸಿ) ಕಂಪನಿಯ ಸದಸ್ಯರಾಗಿರಲೇಬೇಕೆಂದೇನಿಲ್ಲ.
2. 2013ನೇ ಸಾಲಿನ ಕಂಪನಿಗಳ ಅಧಿನಿಯಮದ ಪ್ರಕರಣ 139(2)ರ ಉಪ ಪ್ರಕರಣ (5)ರ ಉಪಬಂಧದ ಪ್ರಕಾರ 2020–21 ನೇ ಆರ್ಥಿಕ ವರ್ಷಕ್ಕೆ ಭಾರತದ ನಿಯಂತ್ರಕ ಮತ್ತು ಮಹಾಲೇಖಾಪರೀಕ್ಷಕರು, ನವದೆಹಲಿ ಇವರಿಂದ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಾಗಿ ಮೆ. ವಿಷ್ಣು ರಾಜೇಂದ್ರನ್ ಮತ್ತು ಕಂ. ಯವರನ್ನು ಪತ್ರ ದಿನಾಂಕ 28.08.2020 ರನ್ವಯ ನೇಮಕಮಾಡಲಾಗಿದೆ.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

ಬೆಂಗಳೂರು

ಕಾರ್ಯ ಚಟುವಟಿಕೆಗಳು 2019–20

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಅಡಿಯಲ್ಲಿ ಬರುವ ನೋಡಲ್ ಏಜೆನ್ಸಿಯಾಗಿರುತ್ತದೆ.

ಸಂಸ್ಥೆಯ ಧ್ಯೇಯೋದ್ದೇಶಗಳು ಈ ಕೆಳಕಂಡಂತಿರುತ್ತದೆ.

- ಇಂಧನ ಸಂರಕ್ಷಣೆಗಾಗಿ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
- ಭಾರತ ಸರ್ಕಾರದ ಮತ್ತು ರಾಜ್ಯ ಸರ್ಕಾರದ ನಡುವೆ ನವೀಕರಿಸಬಹುದಾದ ಇಂಧನ ಯೋಜನೆಗಳ ಅನುಷ್ಠಾನಗೊಳಿಸಲು ಸಹಭಾಗಿತ್ವ ವಹಿಸುವುದು.
- BEE ಹಾಗೂ ಇತರೆ ನವೀಕರಿಸಬಹುದಾದ ಏಜೆನ್ಸಿಗಳು ಮತ್ತು ಸಂಸ್ಥೆಗಳು ಪ್ರಯೋಜಿಸುವ ಅನೇಕ ಚಟುವಟಿಕೆಗಳನ್ನು ರಾಜ್ಯದಲ್ಲಿ ಹಮ್ಮಿಕೊಳ್ಳುವುದು.
- ನವೀಕರಿಸಬಹುದಾದ ಇಂಧನ ಉಪಕರಣಗಳನ್ನು ಸಾರ್ವಜನಿಕರಿಂದ ಬಳಕೆಯಾಗಲು ಪ್ರಚಾರ ಕಾರ್ಯಕ್ಕಾಗಿ ಪ್ರದರ್ಶನಗಳು, ವಿಚಾರಗೋಷ್ಠಿಗಳು ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಹಾಗೂ ನವೀಕರಿಸಬಹುದಾದ ಇಂಧನ ಉಪಕರಣಗಳನ್ನು ಸಂಚಾರಿ ವಾಹನದಲ್ಲಿ ಪ್ರದರ್ಶನ ಮಾಡುವುದು.
- ನವೀಕರಿಸಬಹುದಾದ ಇಂಧನ ಯೋಜನೆಗಳ ನಿರ್ಮಾಣ ಹಂತದಲ್ಲಿ ಹಾಗೂ ನಿರ್ಮಾಣದ ನಂತರದ ಮಾಹಿತಿಗಳನ್ನು ಕ್ರೋಡಿಕರಿಸಿ ಸರ್ಕಾರಕ್ಕೆ ಮಾಹಿತಿ ನೀಡುವುದು.

2019–20ನೇ ಸಾಲಿನಲ್ಲಿ 895ಮೆ.ವ್ಯಾ ಸಾಮರ್ಥ್ಯದ ಗುರಿ ಇರಿಸಿಕೊಂಡು, 1317.35 ಮೆ.ವ್ಯಾ ಸಾಮರ್ಥ್ಯದ ಯೋಜನೆಗಳನ್ನು ಈ ಕೆಳಗೆ ವಿವರಿಸಿದಂತೆ ಅನುಷ್ಠಾನಗೊಳಿಸಲಾಗಿದೆ.

ಕ್ರಮ ಸಂಖ್ಯೆ	ನವೀಕರಿಸಬಹುದಾದ ಇಂಧನ ಮೂಲಗಳು	ಸಾಮರ್ಥ್ಯ ಮೆ.ವ್ಯಾ.ಗಳಲ್ಲಿ
1	ಪವನ ಶಕ್ತಿ	60.00
2	ಕಿರುಜಲ	50.00
3	ಜೈವಿಕ ಇಂಧನ	5.00
4	ಸಹ ವಿದ್ಯುತ್	28.00
5	ಸೌರಶಕ್ತಿ	1174.35
	ಒಟ್ಟು	**1317.35**

ನವೀಕರಿಸಬಹುದಾದ ಇಂಧನ ಮೂಲಗಳ ಹಾಗೂ ಇಂಧನ ಸಂರಕ್ಷಣೆಯ ಬಗ್ಗೆಜಾಹಿರಾತು ಪಡಿಸಲು ಕ್ರೆಡಲ್ ಸಂಸ್ಥೆಯು ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಲಾಗಿದೆ ಮತ್ತು ಅನೇಕ ಪ್ರದರ್ಶನ ಹಾಗೂ ಉತ್ಪಾದನೆ ಬಗ್ಗೆ ಕಾರ್ಯಾಗಾರವನ್ನು ಕೈಗೂಳಲಾಗಿದೆ. ಇದರ ವಿವರ ಈ ಕೆಳಗಿನಂತಿದೆ.

- ಕರ್ನಾಟಕ ರಾಜ್ಯವು ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ.
- ದೇಶದ ಅತಿ ದೊಡ್ಡ 2050 ಮೆ.ವ್ಯಾ ಸಾಮರ್ಥ್ಯದ ಸೋಲಾರ್‌ಪಾರ್ಕ್‌ನ್ನು ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಸ್ಥಾಪಿಸಲಾಗಿದೆ, ಸದರಿ ಯೋಜನೆಗಳಿಂದ 2019–20ನೇ ಸಾಲಿನಲ್ಲಿ 650 ಮೆ.ವ್ಯಾ ಸಾಮರ್ಥ್ಯವು ಅನುಷ್ಠಾನಗೊಳಿಸಲಾಗಿದೆ.

ಆರ್ಥಿಕ ವರ್ಷ 2020–21ರಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಂದ ಸುಮಾರು 1100 ಮೆ.ವ್ಯಾ ಸಾಮರ್ಥ್ಯದ ವಿದ್ಯುತ್ ಘಟಕಗಳು ಅನುಷ್ಠಾನಗೊಳಿಸುವ ಗುರಿ ಹೊಂದಲಾಗಿದೆ.

ಕ್ರಮ ಸಂಖ್ಯೆ	ನವೀಕರಿಸಬಹುದಾದ ಇಂಧನ ಮೂಲಗಳು	ಸಾಮರ್ಥ್ಯ ಮೆ.ವ್ಯಾ.ಗಳಲ್ಲಿ	ಸಾಧನೆಗಳು 30.11.2020 ಕ್ಕೆ (ಮೆ.ವ್ಯಾ)
1	ಪವನ ಶಕ್ತಿ	525	4,859.54
2	ಕಿರುಜಲ	125	903.46
3	ಜೈವಿಕಇಂಧನ	50	139.03
4	ಸಹ ವಿದ್ಯುತ್		1,731.16
5	ಸೌರಶಕ್ತಿ	400	7,338.24
	ಒಟ್ಟು	**1100**	**14,971.43**

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ)

ಸದಸ್ಯರುಗಳಿಗೆ ನಿರ್ದೇಶಕರ ವರದಿ

31ನೇ ಮಾರ್ಚ್, 2020 ಕ್ಕೆ ಕೊನೆಗೊಂಡ ಲೆಕ್ಕಪರಿಶೋಧಿತ ಹಣಕಾಸು ವಿವರಣ ಪಟ್ಟಿಗಳೊಂದಿಗೆ, 24ನೇ ವಾರ್ಷಿಕ ವರದಿಯನ್ನು ಮಂಡಿಸಲು ಮೆ॥ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ನಿರ್ದೇಶಕ ಮಂಡಳಿಗೆ ತುಂಬಾ ಹರ್ಷವೆನಿಸುತ್ತದೆ.

01 ಹಣಕಾಸು ಕಾರ್ಯಸಾಧನೆ – ಕಂಪನಿಯ ವ್ಯವಹಾರಗಳ ಸ್ಥಿತಿಗತಿ:

ವಿವರಗಳು	ಸ್ವತಂತ್ರ ಲೆಕ್ಕಪತ್ರಗಳು		ಏಕೀಕೃತ ಲೆಕ್ಕಪತ್ರಗಳು	
	ಪ್ರಸಕ್ತ ವರ್ಷ 31.03.2020 (ರೂ.ಲಕ್ಷಗಳಲ್ಲಿ)	ಹಿಂದಿನ ವರ್ಷ 31.03.2019 (ರೂ.ಲಕ್ಷಗಳಲ್ಲಿ)	ಪ್ರಸಕ್ತ ವರ್ಷ 31.03.2020 (ರೂ.ಲಕ್ಷಗಳಲ್ಲಿ)	ಹಿಂದಿನ ವರ್ಷ 31.03.2019 (ರೂ.ಲಕ್ಷಗಳಲ್ಲಿ)
ಕಾರ್ಯಾಚರಣೆಗಳಿಂದ ಆದಾಯ	3,396.98	5,279.24	3,396.98	5,279.24
ಇತರ ಆದಾಯ	3,400.12	2,802.61	2,972.12	2,802.61
ಒಟ್ಟು ಆದಾಯ (ಎ)	**6,797.10**	**8,081.85**	**6,369.10**	**8,081.85**
ನೌಕರರ ಸೌಲಭ್ಯಗಳ ವೆಚ್ಚ	1,138.90	797.04	1,138.90	797.04
ಹಣಕಾಸು ವೆಚ್ಚ	--	--	--	--
ಸವಕಳಿ ಮತ್ತು ಬೋಗ್ಯದ ಹಣ ಕ್ರಮೇಣ ಸಾಲ ತಿರಿಸುವ ವೆಚ್ಚ	807.74	279.06	807.74	279.06
ಆಡಳಿತಾತ್ಮಕ ವೆಚ್ಚಗಳು	440.07	688.42	440.07	688.42
ಇತರ ವೆಚ್ಚಗಳು	1,521.97	374.67	1,521.97	374.67
ಒಟ್ಟು ವೆಚ್ಚಗಳು (ಬಿ)	**3,908.68**	**2,139.19**	**3,908.68**	**2,139.19**
ಸಹಭಾಗಿತ್ವದಿಂದ ಲಾಭ, ವಿಶೇಷ ಬಾಬ್ತುಗಳ ಮತ್ತು ತೆರಿಗೆ ಮೊದಲು ಲಾಭದ ಪಾಲು (ಸಿ)=(ಎ–ಬಿ)	2,888.42	5,942.65	2,460.42	5,942.65
ಸಹಭಾಗಿತ್ವದಿಂದ ಲಾಭ/(ನಷ್ಟ)ದ ಪಾಲು(ಡಿ)	--	--	2,207.89	1,426.63
ವಿಶೇಷ ಬಾಬ್ತುಗಳ ಮತ್ತು ತೆರಿಗೆ ಮೊದಲು ಲಾಭ (ಇ)=(ಸಿ–ಡಿ)				
ವಿಶೇಷ ಬಾಬ್ತುಗಳು (ಎಫ್)	--	--	--	--

ವಿಶೇಷ ಬಾಬ್ತುಗಳ ಮತ್ತು ತೆರಿಗೆ ಮೊದಲು ಲಾಭ	2,888.42	5,942.65	4,668.31	7,369.28
ತೆರಿಗೆ ವೆಚ್ಚಗಳು	814.63	1,601.14	814.62	1601.14
ಆರ್ಥಿಕ ವರ್ಷದ ಲಾಭ	**2,073.79**	**4,341.51**	**3,853.69**	**5,768.14**
ಇತರ ವ್ಯಾಪಕ ಆದಾಯ(ನಷ್ಟ)	(65.37)	(0.51)	(65.37)	(0.51)
ಆರ್ಥಿಕ ವರ್ಷದ ಒಟ್ಟು ವ್ಯಾಪಕ ಆದಾಯ	**2,008.42**	**4,341.00**	**3,788.32**	**5,767.63**

02. ಆದಾಯಗಳು ಮತ್ತು ಲಾಭಗಳು – ಸ್ವತಂತ್ರ ಲೆಕ್ಕಪತ್ರಗಳು:

2019–20ನೇ ಸಾಲಿನ ಸ್ವತಂತ್ರ ಲೆಕ್ಕಪತ್ರಗಳನ್ವಯ ಸಂಸ್ಥೆಯ ಕಾರ್ಯಾಚರಣೆಗಳಿಂದ ರೂ. 3,396.98 ಲಕ್ಷಗಳಷ್ಟು ಆದಾಯ ಗಳಿಸಿದೆ. ಇದು ಕಳೆದ ವರ್ಷಕ್ಕಿಂತ ಶೇಕಡ 35.65 ಕಡಿಮೆಯಾಗಿದೆ. (2018–19 ರಲ್ಲಿ ರೂ. 5,279.24), ಬಡ್ಡಿ ಹಾಗೂ ಸವಕಳಿಗಳ ಮತ್ತು ತೆರಿಗೆಯ ಮುನ್ನ ರೂ. 3696.16 ಲಕ್ಷಗಳಷ್ಟು ಲಾಭ ಗಳಿಸಿದೆ ಇದು ಕಳೆದ ವರ್ಷಕ್ಕಿಂತ ಶೇಕಡ 40.59 ರಷ್ಟು ಕಡಿಮೆಯಾಗಿದೆ. (2018–19 ರಲ್ಲಿ ರೂ. 6,221.7) ಮತ್ತು ತೆರಿಗೆ ನಂತರ ಈ ವರ್ಷದಲ್ಲಿ ರೂ. 2,073.79 ಲಕ್ಷದಷ್ಟು ಗಳಿಸಿದೆ. ಕಳೆದ ವರ್ಷ 2018–19 ರಲ್ಲಿ ತೆರಿಗೆ ನಂತರ ರೂ. 4,393.33 ಲಕ್ಷಗಳಾಗಿರುತ್ತದೆ. ಆರ್ಥಿಕ ವರ್ಷದಲ್ಲಿ ಒಟ್ಟು ರೂ. 2,008.42 ಲಕ್ಷಗಳ ಸಮಗ್ರ ಆದಾಯವಾಗಿದೆ.

03. ಕ್ರೋಡಿಕೃತ ಲೆಕ್ಕಪತ್ರಗಳ ಆದಾಯಗಳು ಮತ್ತು ಲಾಭಗಳು – ಸಬ್ಸಿಡಿಯರಿಗೆ ಕೊಡುಗೆ–ಸಂಘಟನೆ/ ಸಹಭಾಗಿತ್ವದೊಂದಿಗೆ ಸಂಸ್ಥೆಯ ವ್ಯವಹಾರ ಕಾರ್ಯಚಾರಣೆ:

2019–20ನೇ ಸಾಲಿನ ಕ್ರೋಡೀಕೃತ ಲೆಕ್ಕಪತ್ರಗಳನ್ವಯ ಸಂಸ್ಥೆಯ ಕಾರ್ಯಾಚರಣೆಗಳಿಂದ ರೂ. 3,396.98 ಲಕ್ಷಗಳಷ್ಟು ಆದಾಯ ಗಳಿಸಿದೆ ಇದು ಕಳೆದ ವರ್ಷಕ್ಕಿಂತ ಶೇಕಡ 35.65 ಕಡಿಮೆಯಾಗಿದೆ. (2018–19 ರಲ್ಲಿ ರೂ. 5,279.24), ಬಡ್ಡಿ ಹಾಗೂ ಸವಕಳಿಗಳ ಮತ್ತು ತೆರಿಗೆಯ ಮುನ್ನ ರೂ. 3,268.16 ಲಕ್ಷಗಳಷ್ಟು ಲಾಭ ಗಳಿಸಿದೆ (2018–19 ರಲ್ಲಿ ರೂ. 6,221.71) ಮತ್ತು ತೆರಿಗೆ ನಂತರ ಈ ವರ್ಷದಲ್ಲಿ ರೂ. 3,853.69 ಲಕ್ಷದಷ್ಟು ಲಾಭ ಗಳಿಸಿದೆ ಕಳೆದ ವರ್ಷ 2018–19 ರಲ್ಲಿ ತೆರಿಗೆ ನಂತರ ರೂ. 5,788.32 ಲಕ್ಷಗಳಾಗಿರುತ್ತದೆ.

04. ಲಾಭಾಂಶ:

ಮೀಸಲು ಸಂರಕ್ಷಣೆಯ ಅಗತ್ಯತೆಗಳನ್ನು ಪರಿಗಣಿಸಿ, ನಿಮ್ಮ ನಿರ್ದೇಶಕ ಮಂಡಳಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಯಾವುದೇ ಲಾಭಾಂಶಕ್ಕೆ ಶಿಫಾರಸ್ಸು ಮಾಡಿರುವುದಿಲ್ಲ.

05. ಮೀಸಲುಗಳಿಗೆ ವರ್ಗಾವಣೆ:

ನಿಮ್ಮ ನಿರ್ದೇಶಕ ಮಂಡಳಿಯು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಂಪನಿಯ ಯಾವುದೇ ಮೀಸಲುಗಳಿಗೆ ವರ್ಗಾಯಿಸಲು ಪ್ರಸ್ತಾಪಿಸಿರುವುದಿಲ್ಲ.

06. ಒಪ್ಪಂದಗಳ ವಿವರಗಳು ಅಥವಾ ಸಂಬಂಧಿತ ಪಕ್ಷಗಳು ಮಾಡಿದ ವ್ಯವಸ್ಥೆಗಳು

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಂಪನಿಯು ಯಾವುದೇ ಸಂಬಂಧಿತ ಪಕ್ಷಗಳೊಂದಿಗೆ ವ್ಯವಹಾರ ಮಾಡಿರುವುದಿಲ್ಲ.

07. ವರದಿಯ ದಿನಾಂಕ ಮತ್ತು ಆರ್ಥಿಕ ವರ್ಷದ ಕೊನೆಗೊಳ್ಳುವ ನಡುವೆ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರುವ ವಸ್ತುನಿಷ್ಟ ಬದಲಾವಣೆಗಳು ಮತ್ತು ಬದ್ಧತೆಗಳು.

2019–20ನೇ ಆರ್ಥಿಕ ವರ್ಷ ಮತ್ತು ವರದಿ ಮಾಡುವ ದಿನಾಂಕದವರೆಗೆ ಕಂಪನಿಯ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರುವಂತಹ ಯಾವುದೇ ಬದಲಾವಣೆಗಳು ಮತ್ತು ಬದ್ಧತೆಗಳು ಇರುವುದಿಲ್ಲ.

08. ವಾರ್ಷಿಕ ಲೆಕ್ಕಪತ್ರದ ಉದ್ಧರಣ:

ಕಂಪನಿ ಕಾಯ್ದೆ, 2013ರ ಪರಿಚ್ಛೇದ 134(3) (ಎ)ರ ಮೇರೆಗೆ ವಾರ್ಷಿಕ ಲೆಕ್ಕಪತ್ರದ ಉದ್ಧರಣೆಯನ್ನು ನಮೂನೆ ಎಂಜಿಟಿ–9ನ್ನು ಈ ವರದಿಯ ಅನುಬಂಧ–1ರಲ್ಲಿ ಸೇರಿಸಲಾಗಿದೆ.

09. ಮಂಡಳಿಯ ಸಭೆಗಳ ಸಂಖ್ಯೆ:

2019–20 ನೇ ಆರ್ಥಿಕ ವರ್ಷದಲ್ಲಿ ನಿರ್ದೇಶಕ ಮಂಡಳಿಯು 03 ಬಾರಿ ದಿನಾಂಕ: 06.06.2019, 20.08.2019 ಮತ್ತು 26.12.2019 ರಂದು ಸಭೆ ಸೇರಿದೆ. ಎರಡು ನಿರಂತರ ಮಂಡಳಿ ಸಭೆಗಳ (20.08.2019 ಮತ್ತು 26.12.2019) ಮಧ್ಯಂತರ ಅಂತರ ಕಂಪನಿಗಳ ಕಾಯಿದೆ, 2013 ಭಾಗ 173 ರಲ್ಲಿ ನಿಗದಿಪಡಿಸಿರುವ ಪ್ರಾವಧಾನದಂತೆ ಇರುವುದಿಲ್ಲ. ಕಂಪನಿ ಕಾಯಿದೆ 2013ರ ಪರಿಚ್ಛೇದ 118(10) ಉಪವಿಧಿ 9 ಕಾರ್ಯದರ್ಶಿಗಳ ಎಸ್‌ಎಸ್–1 ನಿರ್ದೇಶಕ ಮಂಡಳಿಯ ಸಭೆಗಳ ಬಗ್ಗೆ ಮಾನದಂಡಗಳಂತೆ ಪ್ರತಿ ನಿರ್ದೇಶಕರು ಮಂಡಳಿ ಸಭೆಗಳಿಗೆ ಹಾಜರಾಗಿರುವುದರ ವಿವರ ಈ ಕೆಳಗಿನಂತಿದೆ:

ಕ್ರ. ಸಂ.	ನಿರ್ದೇಶಕರ ಹೆಸರು	ಆರ್ಥಿಕ ವರ್ಷ 2019–20 ರಲ್ಲಿ ಮಂಡಳಿ ಸಭೆಗಳಿಗೆ ಹಾಜರಾಗಿರುವ ಸಂಖ್ಯೆ
1	ಶ್ರೀ. ಪೊನಂಡಲಾ ರವಿ ಕುಮಾರ್, ಐ.ಎ.ಎಸ್.	01
2	ಶ್ರೀ. ಮಹೇಂದ್ರ ಜೈನ್, ಐ.ಎ.ಎಸ್.	02
3	ಶ್ರೀ. ಎ. ಬಿ. ಬಸವರಾಜು, ಕೆ.ಎ.ಎಸ್.	03
4	ಡಾ। ಎಸ್. ಸೆಲ್ವಕುಮಾರ್?, ಐ.ಎ.ಎಸ್.	01
5	ಶ್ರೀಮತಿ ಸ್ಮಿತ ಬಿಜ್ಜೂರ್, ಐ.ಎಫ್.ಎಸ್.	02
6	ಶ್ರೀ. ರಾಜ್‌ಕುಮಾರ್ ಠಾಕೂರ್ ದಾಸ್ ಖಾತ್ರಿ, ಐ.ಎ.ಎಸ್.	–
7	ಶ್ರೀ ಅಂಜುಮ್ ಪರ್ವೆಜ್	02
8	ಶ್ರೀ. ಪೊನ್ನುರಾಜ್ ವೇಲುಸ್ವಾಮಿ, ಐ.ಎ.ಎಸ್.	01
9	ಶ್ರೀಮತಿ. ಶಿಖಾ ಚಂದ್ರ ಮೋಹನ್, ಐ.ಎ.ಎಸ್.	01
10	ಶ್ರೀ. ರಾಜ್‌ಕುಮಾರ್ ಸಿದ್ದರಾಮ್ ಬಿರದಾರ್,	01
11	ಡಾ। ಮಂಜುಳ ನಾರಾಯಣಪ್ಪ ನಾಯಕ್, ಐ.ಎ.ಎಸ್.	–
12	ಶ್ರೀ ರಾಜೇಶ್ ಗೌಡ ಎಂ.ಬಿ.ಐ.ಎ.ಎಸ್.	01
13	ಶ್ರೀ ನಾರಾಯಣ್ ಮಂಜುನಾಥ ಪ್ರಸಾದ್ ಐ.ಎ.ಎಸ್.	–
14	ಡಾ। ಹೆಚ್.ಬಿ. ಬೂದೆಪ್ಪ, ಕೆ.ಎ.ಎಸ್.	–

10. ಪ್ರತಿ ಅರ್ಹತೆ, ಮೀಸಲಾತಿ ಅಥವಾ ಪ್ರತಿಕೂಲ ಷರಾಗಳಿಗೆ ಮಂಡಳಿಯ ವಿವರಣೆ ಅಥವಾ ಟಿಪ್ಪಣಿ

ಎ. ಲೆಕ್ಕಪರಿಶೋಧಕರಿಂದ ತಮ್ಮ ವರದಿಯ ಮೂಲಕ:

ಕ್ರ. ಸಂ.	ಲೆಕ್ಕ ಪರಿಶೋಧಕರಿಂದ ಅರ್ಹತೆ/ಮೀಸಲಾತಿ/ಪ್ರತಿಕೂಲ ಟಿಪ್ಪಣಿ/ ಹಕ್ಕು ನಿರಾಕರಣೆ	ಮಂಡಳಿಯ ವಿವರಣೆಗಳು
1.	ಟಿಪ್ಪಣಿ ಸಂಖ್ಯೆ 37ಸಿ (ಆದಾಯ) ದಲ್ಲಿ ಕಂಪನಿಯು ಸೇವಾ ಶುಲ್ಕಗಳಿಂದ ಬರುವ ಆದಾಯವನ್ನು ಲೆಕ್ಕಹಾಕಲು ತನ್ನ ಲೆಕ್ಕಪತ್ರ ನೀತಿಯನ್ನು ಬಹಿರಂಗಪಡಿಸಿರುವುದಿಲ್ಲ. ಸೇವಾ ಶುಲ್ಕಗಳಿಂದ ಬರುವ ಆದಾಯವು ಆಯಾ ಸಲಹಾ ಒಪ್ಪಂದಗಳ ನಿಯಮಗಳಿಗನುಗುಣವಾಗಿ ಕಾರ್ಯಗತಗೊಂಡ ಕೆಲಸದ ನೈಜ ಪ್ರಗತಿ/ತಾಂತ್ರಿಕ ಮೌಲ್ಯಮಾಪನವನ್ನು ಉಲ್ಲೇಖಿಸಿ ಮೌಲ್ಯಮಾಪನ ಪೂರ್ಣಗೊಂಡ ಹಂತಕ್ಕೆ ಅನುಗುಣವಾಗಿ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾಗುವುದಿಲ್ಲ. ಕಂಪನಿಯು ಸೇವಾ ಶುಲ್ಕಗಳಿಂದ ಸ್ವೀಕರಿಸಿದ ಆದಾಯವನ್ನು ಸ್ವೀಕರಿಸಿದ ಸಂದರ್ಭಗಳಲ್ಲಿ ಮಾತ್ರ ಆದಾಯದ ಲೆಕ್ಕಹಾಕುತ್ತಿದೆ. ಕಂಪನಿಯು ಎಂ.ಎನ್.ಆರ್.ಇ. ಇಂದ ಸೌರ ವಿದ್ಯುತ್ ಪಂಪುಗಳ ಅನುಸ್ಥಾಪನೆಯಿಂದ ಸೇವಾ ಶುಲ್ಕವಾಗಿ 3% ಸೇವಾ ಶುಲ್ಕವಾಗಿ ರೂ.28,85,850 ಅನ್ನು ಸ್ವೀಕರಿಸಬೇಕಾಗಿದೆ, ಆದಾಗ್ಯೂ ಅದನ್ನು ಲೆಕ್ಕಕ್ಕೆ ತೆಗೆದುಕೊಂಡಿರುವುದಿಲ್ಲ. ಇದು ಪ್ರಸ್ತುತ ಸ್ವತ್ತುಗಳನ್ನು ರೂ.28.85,850 ಗಳಷ್ಟು ಕಡಿಮೆ ಮಾಡುವಲ್ಲಿ ಪರಿಣಮಿಸಿದೆ ಮತ್ತು ಅಷ್ಟು ವರ್ಷಕ್ಕೆ ಲಾಭವಾಗಿದೆ.	ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದಿಂದ ಯೋಜನೆಗಳ ಅನುಷ್ಠಾನಕ್ಕಾಗಿ ಕಂಪನಿಯು ಸಾಂದರ್ಭಿಕವಾಗಿ ಸೇವಾ ಶುಲ್ಕವನ್ನು ಪಡೆಯುತ್ತದೆ. ಈ ವಹಿವಾಟು ಪ್ರಕೃತಿಯಲ್ಲಿ ಮರುಕಳಿಸದ ಮತ್ತು ಈ ಮೊತ್ತವನ್ನು ಸ್ವೀಕರಿಸುವ ಬಗ್ಗೆ ಖಚಿತತೆಯಿಲ್ಲ. ರಶೀದಿಯ ಬಗ್ಗೆ ಅನಿಶ್ಚಿತತೆಯ ಹಿನ್ನೆಲೆಯಲ್ಲಿ, ಕೃತಿಗಳನ್ನು ಪೂರ್ಣಗೊಳಿಸುವ ಹಂತಕ್ಕೆ ಅನುಗುಣವಾಗಿ ಮೊತ್ತವನ್ನು ಲೆಕ್ಕಹಾಕಲಾಗುವುದಿಲ್ಲ. ಆದ್ದರಿಂದ, ಈ ವಹಿವಾಟನ್ನು ರಶೀದಿ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ ಮತ್ತು ಯಾವುದೇ ನಿರ್ದಿಷ್ಟ ಲೆಕ್ಕಪತ್ರ ನೀತಿಯನ್ನು ಬಹಿರಂಗಪಡಿಸುವುದಿಲ್ಲ. ಮತ್ತಷ್ಟು ಗಮನಿಸಿದಂತೆ, ಕಂಪನಿಯು ಸೌರ ನೀರಿನ ಪಂಪ್‌ಗಳ ಅಳವಡಿಕೆಗೆ ರೂ. 28,85,850/– ಸ್ವೀಕರಿಸಬೇಕಾಗಿರುತ್ತದೆ. ಆದರೆ, ಎಂಎನ್‌ಆರ್‌ಇ ಆಗಸ್ಟ್, 2020 ರಲ್ಲಿ ಕೇವಲ ರೂ. 22,24,374/– (ಜಿಎಸ್ಟಿ ಸೇರಿದಂತೆ) ಬಿಡುಗಡೆ ಮಾಡಿರುತ್ತದೆ. ಪಾವತಿ ಸ್ವೀಕೃತಿಯ ಬಗ್ಗೆ ಅನಿಶ್ಚಿತತೆಯ ಹಿನ್ನೆಲೆಯಲ್ಲಿ, ಈ ವಹಿವಾಟನ್ನು ರಶೀದಿ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ.
2	ಅಂದಾಜು ಆದಾಯ ತೆರಿಗೆ ವೆಚ್ಚದ ಸಮನ್ವಯವನ್ನು ವಿವರಿಸುವ ಇಂಡ್ ಎಎಸ್ 12ರ ಪ್ರಕಾರ ವಹಿವಾಟು ಬಹಿರಂಗಪಡಿಸುವಿಕೆಯಡಿಯಲ್ಲಿ ತೆರಿಗೆಗೆ ಒಳಪಡುವ ಆದಾಯಕ್ಕೆ ಕಡಿತಗೊಳಿಸಲಾಗದ ಮೊತ್ತದ ತೆರಿಗೆ ಪರಿಣಾಮಗಳನ್ನು ರೂ. (–) 9,91,766 ರ ಬದಲು 9,91,766 ರೂ. ಗಳು ಎಂದು ತಪ್ಪಾಗಿ ಬಹಿರಂಗಪಡಿಸಲಾಗಿದೆ. ಒಟ್ಟು ಆದಾಯ ತೆರಿಗೆ ವೆಚ್ಚವನ್ನು ರೂ. 9,98,25,097ರ ಬದಲಾಗಿ ರೂ. 8,31,19,065 ಎಂದು ತಪ್ಪಾಗಿ ಬಹಿರಂಗಪಡಿಸಲಾಗಿದೆ.	ವೀಕ್ಷಣೆಯು ಮುದ್ರಣದ ದೋಷಕ್ಕೆ ಸಂಬಂಧಿಸಿದೆ. ಹಣಕಾಸಿನ ಅಂಶಗಳಲ್ಲಿ ಯಾವುದೇ ಪರಿಣಾಮವಿಲ್ಲ ಮತ್ತು ಬಹಿರಂಗಪಡಿಸುವ ಟಿಪ್ಪಣಿಗೆ ಸಂಬಂಧಿಸಿದೆ. ಅಂತಹ ಮುದ್ರಣದ ದೋಷಗಳು ಭವಿಷ್ಯದಲ್ಲಿ ಆಗುವುದಿಲ್ಲ.
3	ಕ್ರೋಢೀಕೃತ ಹಣಕಾಸು ಹೇಳಿಕೆಗಳು: ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಕರ್ನಾಟಕ ಸೌರ ವಿದ್ಯುತ್ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ ಜಂಟಿ ಸಹಭಾಗಿತ್ವದ ಉದ್ಯಮೆಯಾಗಿದೆ. ಕೆ.ಎಸ್.ಪಿ.ಡಿ.ಸಿ.ಎಲ್. ಸಂಸ್ಥೆಯು ಸೌರ ವಿದ್ಯುತ್ ಅಭಿವರ್ಧಕರುಗಳಿಂದ ವಿಳಂಭವಾಗಿ ಪಾವತಿಸಲಾದ ಸ್ಥಳೀಯ ಪ್ರದೇಶಾಭಿವೃದ್ಧಿ ಶುಲ್ಕಗಳ ಮೇಲೆ ರೂ.39,77,049 ಗಳನ್ನು ದಂಡವಾಗಿ ಸಂಗ್ರಹಿಸಿದೆ. ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯನ್ನು ಪ್ರತ್ಯೇಕವಾದ ಖಾತೆಯಲ್ಲಿ ಇಡಲಾಗಿದೆ ಮತ್ತು	ಕೆಎಸ್‌ಪಿಡಿಸಿಎಲ್ ಕಂಪನಿಯು ಸ್ಥಳೀಯ ಪ್ರದೇಶ ಅಭಿವೃದ್ಧಿ ಶುಲ್ಕವನ್ನು ಪಾವತಿಸಲು ವಿಳಂಬ ಮಾಡಿದ್ದಕ್ಕಾಗಿ ಸೌರ ವಿದ್ಯುತ್ ಅಭಿವೃದ್ಧಿದಾರರಿಂದ ರೂ. 39,77,049/–ಗಳನ್ನು ದಂಡವನ್ನಾಗಿ ಸಂಗ್ರಹಿಸಿದೆ. ಕೆಎಸ್‌ಪಿಡಿಸಿಎಲ್ ಕಂಪನಿಯು ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿಯನ್ನು ಪ್ರತ್ಯೇಕ ಖಾತೆಯಲ್ಲಿ ಖಾತೆ ಮಾಡಿದೆ, ಈ ಮೊತ್ತವನ್ನು ಬಳಕೆಯ ಇಲಾಖೆಗೆ ವರ್ಗಾಯಿಸುವವರೆಗೆ ಸ್ಥಿರ ಖಾತೆಯಲ್ಲಿ ಜಮಾ ಮಾಡಲಾಗುತ್ತಿದೆ. ಎಲ್‌ಎಡಿಎಫ್ ಸ್ಥಿರ

	ಈ ಮೊತ್ತವನ್ನು ಬಾಧಿತ ಪ್ರದೇಶಾಭಿವೃದ್ಧಿಗೆ ಬಳಸಿಕೊಳ್ಳಲಾಗುವುದು. ಕಂಪನಿ (ಕೆ.ಎಸ್.ಪಿ.ಡಿ.ಸಿ.ಎಲ್.)ಯು ಸಂಗ್ರಹಿಸಲಾದ ದಂಡದ ಮೊತ್ತವನ್ನು ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಗೆ ಸೇರಿಸುವ ಬದಲಾಗಿ ಇತರೆ ಆದಾಯವೆಂದು ಪರಿಗಣಿಸಿದೆ. ಇದರಿಂದಾಗಿ ಕೆ.ಎಸ್.ಪಿ.ಸಿ.ಸಿ.ಎಲ್.ನ ಲಾಭವನ್ನು 39,77,049 ರೂ. ಗಳಷ್ಟು ಹೆಚ್ಚಿಗೆಯಾಗಿದೆ ಎಂದು ಹೇಳಲಾಗಿದೆ ಮತ್ತು ಅದೇ ಪ್ರಮಾಣದಲ್ಲಿ ನಿಧಿಯ ಹೊಣೆಗಾರಿಕೆಗಳನ್ನು ಕಡಿಮೆ ಮಾಡಲಾಗಿದೆ. ಇದರ ಪರಿಣಾಮವಾಗಿ ಕ್ರೋಢೀಕೃತ ಹಣಕಾಸು ವಿವರಣಾಪಟ್ಟಿಯಲ್ಲಿ ಕೆ.ಎಸ್.ಪಿ.ಡಿ.ಸಿ.ಎಲ್. ನೊಂದಿಗಿನ ಜಂಟಿ ಉದ್ಯಮದಿಂದ ಲಾಭದ ಪಾಲನ್ನೂ ಸಹ ರೂ.19,88,525 ರಷ್ಟು (ಲಾಭದ ಪಾಲು–50%) ಹೆಚ್ಚಿಗೆ ಎಂದು ಹೇಳಲಾಗಿದೆ.	ಠೇವಣಿಗಳ ಮೇಲೆ ಗಳಿಸಿದ ಬಡ್ಡಿಯನ್ನು ಎಲ್ಎಡಿಎಫ್ ಖಾತೆಗೆ ಜಮಾ ಮಾಡಲಾಗುತ್ತದೆ, ಇದನ್ನು ಸೌರ ಉದ್ಯಾನದ ಸ್ಥಳೀಯ ಪ್ರದೇಶ ಅಭಿವೃದ್ಧಿಯ ಬಳಕೆಗಾಗಿ ನಿಧಿಯಾಗಿ ಪರಿಗಣಿಸಲಾಗುತ್ತದೆ. ಸೌರ ವಿದ್ಯುತ್ ಅಭಿವೃದ್ಧಿದಾರರೊಂದಿಗೆ ನಮೂದಿಸಲಾದ ಅನುಷ್ಠಾನ ಮತ್ತು ಬೆಂಬಲ ಒಪ್ಪಂದದ ಷರತ್ತು ಸಂಖ್ಯೆ 6.9 ರ ಪ್ರಕಾರ "ವಿಳಂಬ ಪಾವತಿಗೆ ದಂಡ", ಎಸ್ಪಿಡಿಗಳಿಗೆ ಎಲ್ಎಡಿ ಶುಲ್ಕಗಳ ಮೇಲೆ ದಂಡ ವಿಧಿಸಲಾಗುತ್ತದೆ, ಅವರು 2019–20ನೇ ಹಣಕಾಸು ವರ್ಷದಲ್ಲಿ ನಿಗದಿತ ದಿನಾಂಕದೊಳಗೆ ಪಾವತಿ ಮಾಡಲು ವಿಳಂಬ ಮಾಡಿದ್ದಾರೆ. ವಿಳಂಬ ಪಾವತಿಗಾಗಿ ವಿಧಿಸಲಾಗುವ ದಂಡವನ್ನು "ಬಡ್ಡಿ" ಎಂದು ಪರಿಗಣಿಸಲಾಗುವುದಿಲ್ಲ ಏಕೆಂದರೆ ಇದು ಎಲ್ಎಡಿಎಫ್‌ನಲ್ಲಿ ನಿಯಮಿತ ಆದಾಯವಲ್ಲ, ಆದ್ದರಿಂದ ಕೆಎಸ್ಪಿಡಿಸಿಎಲ್‌ನ ಲಾಭ ಮತ್ತು ನಷ್ಟ ಹೇಳಿಕೆಗೆ ವಿಧಿಸಲಾಗುತ್ತದೆ. ದಂಡವನ್ನು ಆದಾಯವೆಂದು ಪರಿಗಣಿಸುವ ಕೆಎಸ್ಪಿಡಿಸಿಎಲ್‌ನ ನಿಲುವು ಸಮರ್ಥನೀಯವಾಗಿದೆ. ಆದ್ದರಿಂದ, ಈ ವಹಿವಾಟಿಗೆ ಸಂಬಂಧಿಸಿದ ಲಾಭದ ಪಾಲು ಸ್ವೀಕಾರಾರ್ಹ.

ಬಿ. ವೃತ್ತಿನಿರತ ಕಂಪನಿ ಕಾರ್ಯದರ್ಶಿಯವರ ತಮ್ಮ ಆಡಳಿತಾತ್ಮಕ ಲೆಕ್ಕಪರಿಶೋಧನಾ ವರದಿ:

ವೃತ್ತಿನಿರತ ಕಂಪನಿ ಕಾರ್ಯದರ್ಶಿಯವರ ಆಡಳಿತಾತ್ಮಕ ಲೆಕ್ಕಪರಿಶೋಧನಾ ವರದಿಯಲ್ಲಿ, ಕಂಪನಿಗಳು ಅಧಿನಿಯಮ, 2013ರ ಪ್ರಕರಣ 204ರ ನಿಬಂಧನೆಗಳು ಕಂಪನಿಗೆ ಅನ್ವಯಿಸುವುದಿಲ್ಲ.

11. ಪ್ರಕರಣ 186ರಡಿ ಸಾಲಗಳು, ಖಾತರಿಗಳು ಅಥವಾ ಹೂಡಿಕೆಗಳ ವಿವರಗಳು:

ಕಂಪನಿಗಳ ಅಧಿನಿಯಮ, 2013ರ ಪ್ರಕರಣ 186ರಡಿಯ ನಿಬಂಧನೆಗಳ ಮೇರೆಗೆ ವರದಿಯ ವರ್ಷದಲ್ಲಿ ಯಾವುದೇ ಸಾಲಗಳು, ಖಾತರಿಗಳು ಅಥವಾ ಹೂಡಿಕೆಗಳು ಇರುವುದಿಲ್ಲ.

12. ಇಂಧನ ಸಂರಕ್ಷಣೆ, ಸಂಶೋಧನೆ ಮತ್ತು ಅಭಿವೃದ್ಧಿ, ತಂತ್ರಜ್ಞಾನ ಅಳವಡಿಕೆ, ವಿದೇಶಿ ವಿನಿಮಯ ಗಳಿಕೆಗಳು ಮತ್ತು ಹೊರ ಹರಿವು.

ಎ. ಇಂಧನ ಸಂರಕ್ಷಣೆ:

ಎ	ಕೈಗೊಂಡ ಕ್ರಮಗಳು ಅಥವಾ ಇಂಧನ ಸಂರಕ್ಷಣೆಯ ಮೇಲೆ ಪರಿಣಾಮ	1. ಕಛೇರಿಯಲ್ಲಿ ಸ್ಟಾರ್ ರೇಟೆಡ್ ಉಪಕರಣಗಳನ್ನು ಅಳವಡಿಸಲಾಗಿದೆ. 2. ಅಧಿಕಾರಿಗಳ ಕೊಠಡಿಗಳಲ್ಲಿ ಇರುವಿಕೆಯ ಸಂವೇದಕಗಳನ್ನು ಒದಗಿಸಲಾಗಿದೆ. 3. ಹವಾ ನಿಯಂತ್ರಕಗಳಿಗೆ ಇಂಧನ ಉಳಿತಾಯ ಘಟಕಗಳನ್ನು ಒದಗಿಸಲಾಗಿದೆ. 4. ಕೆಆರ್ಇಡಿಎಲ್ ನ ರಾಜ್ಯಮಟ್ಟದ ಎನರ್ಜಿ ಪಾರ್ಕುಗಳ ಗುಡಿಸಲುಗಳ ಹಾಲಿ ಇರುವ ಟಿ12 ಎಫ್‌ಟಿಎಲ್ ಜೋಡಣೆಗಳನ್ನು ಎಲ್ಇಡಿ ದೀಪಗಳಿಂದ ಬದಲಾಯಿಸಲಾಗಿದೆ.
ಬಿ	ಪರ್ಯಾಯ ಇಂಧನ ಮೂಲಗಳ ಬಳಕೆಗೆ ಕಂಪನಿಯಿಂದ ತೆಗೆದುಕೊಳ್ಳಲಾದ ಕ್ರಮಗಳು.	ಪರ್ಯಾಯ ಇಂಧನ ಮೂಲದಿಂದ ಇಂಧನ ಸರಬರಾಜಿಗಾಗಿ ಸೌರ ಮೇಲ್ಛಾವಣಿಯನ್ನು ಅಳವಡಿಸಲಾಗಿದೆ.
ಸಿ	ಇಂಧನ ಸಂರಕ್ಷಣಾ ಉಪಕರಣಗಳಿಗಾಗಿ ಬಂಡವಾಳ ಹೂಡಿಕೆ	––

ಬಿ. ತಂತ್ರಜ್ಞಾನ ಅಳವಡಿಕೆ:

ಎ	ತಂತ್ರಜ್ಞಾನ ಅಳವಡಿಕೆಗೆ ಮಾಡಲಾದ ಪ್ರಯತ್ನಗಳು	--
ಬಿ	ಉತ್ಪನ್ನ ಸುಧಾರಣೆ, ವೆಚ್ಚ ಕಡಿತ, ಉತ್ಪನ್ನ ಅಭಿವೃದ್ಧಿ ಅಥವಾ ಪರ್ಯಾಯ ಆಮದು ಮಾಡಿಕೊಳ್ಳುವಿಕೆಗಳಿಂದ ಪಡೆದ ಪ್ರಯೋಜನೆಗಳು.	--
ಸಿ	ಆಮದು ಮಾಡಿಕೊಂಡ ತಂತ್ರಜ್ಞಾನಗಳ ಪ್ರಕರಣದಲ್ಲಿ, ಆರ್ಥಿಕ ವರ್ಷದ ಪ್ರಾರಂಭದಿಂದ ಕಳೆದ ಮೂರು ವರ್ಷಗಳಲ್ಲಿ ಆಮದು ಮಾಡಿಕೊಂಡಿರುವುದನ್ನು ಪರಿಗಣಿತವಾಗಿದೆ. ಎ) ಆಮದು ಮಾಡಿಕೊಳ್ಳಲಾದ ತಂತ್ರಜ್ಞಾನದ ವಿವರಗಳು; ಬಿ) ಆಮದು ಮಾಡಿಕೊಂಡ ವರ್ಷ ಸಿ) ತಂತ್ರಜ್ಞಾನವು ಸಂಪೂರ್ಣವಾಗಿ ಅಳವಡಿಸಿಕೊಳ್ಳಲಾಗಿದೆಯೇ; ಡಿ) ಒಂದು ವೇಳೆ ಸಂಪೂರ್ಣವಾಗಿ ಅಳವಡಿಸಿ ಕೊಳ್ಳದೇ ಇದ್ದರೆ, ಅದಕ್ಕೆ ಕಾರಣಗಳು	--
ಡಿ	ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ತಗಲಿದ ವೆಚ್ಚ	--

ಸಿ. ವಿದೇಶಿ ವಿನಿಮಯ ಗಳಿಕೆಗಳು ಮತ್ತು ಹೊರ ಹರಿವು.

ಎ	ವರದಿಯ ವರ್ಷದಲ್ಲಿ ವಿದೇಶಿ ವಿನಿಮಯ ಗಳಿಕೆ ನೈಜ ಒಳಹರಿವು	--
ಬಿ	ವರದಿಯ ವರ್ಷದಲ್ಲಿ ವಿದೇಶಿ ವಿನಿಮಯ ನೈಜ ಹೊರಹರಿವು	--

13. ನಿರ್ದೇಶಕರ ಜವಾಬ್ದಾರಿ ಹೇಳಿಕೆ:

ಕಂಪನಿಗಳ ಅಧಿನಿಯಮ 2013 ರ ಪರಿಚ್ಛೇದ 134ರ ಉಪವಿಧಿ (5) ಉಪವಾಕ್ಯ (ಸಿ) ಯಲ್ಲಿ ಉಲ್ಲೇಖಿಸಿದ ಉಪಪ್ರಕರಣ (3) ರಲ್ಲಿನ ಉಪಬಂಧಗಳ ಅನುಸಾರ, ಕಂಪನಿಯ ಆರ್ಥಿಕ ವಿವರಣಾ ಪಟ್ಟಿಯ ಮೇಲೆ ನಿರ್ದೇಶಕರ ಜವಾಬ್ದಾರಿ ಹೇಳಿಕೆ ಈ ಮುಂದಿನಂತೆ ಇರುತ್ತದೆ:

ಎ) ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವಲ್ಲಿ, ಸಾಮಗ್ರಿ ನಿರ್ಗಮನಗಳಿಗೆ ಸಂಬಂಧಿಸಿದಂತೆ ಯುಕ್ತ ವಿವರಣೆಯೊಂದಿಗೆ ಅನ್ವಯವಾಗುವ ಲೆಕ್ಕಪತ್ರ ಪ್ರಮಾಣಕಗಳನ್ನು ಅನುಸರಿಸಲಾಗಿದೆ.

ಬಿ) ಹಣಕಾಸು ವರ್ಷದ ಅಂತ್ಯದಲ್ಲಿ, ಕಂಪನಿಯ ವ್ಯವಹಾರಗಳ ಸ್ಥಿತಿಯ ಮತ್ತು ಅವಧಿಗೆ ಕಂಪನಿಯ ನಷ್ಟದ ನಿಜವಾದ ಮತ್ತು ನ್ಯಾಯಯುತವಾದ ದೃಷ್ಟಿಯನ್ನು ನೀಡಲು ಸಾಧ್ಯವಾಗುವಂತೆ ಯುಕ್ತವಾದ ಮತ್ತು ದೂರದೃಷ್ಟಿಯುಳ್ಳಂತಹ ಲೆಕ್ಕಪತ್ರ ಕಾರ್ಯನೀತಿಗಳನ್ನು ಮತ್ತು ಅಂದಾಜುಗಳನ್ನು ನಿರ್ದೇಶಕರುಗಳು ಆಯ್ಕೆ ಮಾಡಿಕೊಂಡು ಅವುಗಳನ್ನು ಸುಸಂಗತವಾಗಿ ಅನ್ವಯಿಸಿ, ನಿರ್ಣಯಗಳನ್ನು ಹಾಗೂ ಅಂದಾಜುಗಳನ್ನು ಮಾಡಿದ್ದಾರೆ.

ಸಿ) ನಿರ್ದೇಶಕರುಗಳು ಕಂಪನಿಯ ಆಸ್ತಿಪಾಸ್ತಿಗಳನ್ನು ರಕ್ಷಿಸಲು, ಮೋಸ ಮತ್ತು ಇತರ ಅವ್ಯವಹಾರಗಳನ್ನು ತಡೆಗಟ್ಟಲು ಮತ್ತು ಕಂಡು ಹಿಡಿಯಲು, ಕಂಪನಿಗಳ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ದಾಖಲೆಗಳನ್ನು ನಿರ್ವಹಿಸಲು ಸಮಂಜಸವಾದ ಸಾಕಷ್ಟು ಎಚ್ಚರಿಕೆಯನ್ನು ತೆಗೆದುಕೊಂಡಿದ್ದಾರೆ.

ಡಿ) ನಿರ್ದೇಶಕರುಗಳು ಮುಂದುವರೆಯುತ್ತಿರುವ ಉದ್ಯಮದ ಆಧಾರದಲ್ಲಿ ವಾರ್ಷಿಕ ಲೆಕ್ಕಪತ್ರ ಗಳನ್ನು ಸಿದ್ಧಪಡಿಸಿದ್ದಾರೆ.

ಇ) ನಿರ್ದೇಶಕರು ಎಲ್ಲ ಅನ್ವಯಿಸುವ ಕಾನೂನುಗಳ ನಿಬಂಧನೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಸರಿಯಾದ ವ್ಯವಸ್ಥೆಯನ್ನು ರೂಪಿಸಿದ್ದಾರೆ ಮತ್ತು ಅಂತಹ ವ್ಯವಸ್ಥೆಗಳು ಸಾಕಷ್ಟು ಸಮರ್ಪಕವಾಗಿವೆ ಮತ್ತು ಅವುಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಲ್ಲಿವೆ.

14. ಕೇಂದ್ರ ಸರ್ಕಾರಕ್ಕೆ ವರದಿ ಮಾಡುವವುಗಳಲ್ಲದೆ, ಕಂಪನಿ ಕಾಯಿದೆ 2013ರ ಪರಿಚ್ಛೇದ 143, ಉಪ ವಿಧಿ (12) ರಡಿಯಲ್ಲಿ ವಂಚನೆ ಕುರಿತಾಗಿ ಲೆಕ್ಕಪರಿಶೋಧಕರು ವರದಿ ಮಾಡಿರುವ ವಿವರಗಳು.

ಕಂಪನಿ ಕಾಯಿದೆ 2013ರ ಪರಿಚ್ಛೇದ 143, ಉಪ ವಿಧಿ (12) ರಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ವರದಿ ಮಾಡುವವುಗಳನ್ನು ಹೊರತು ಪಡಿಸಿ ಬೇರೆ ಯಾವುದೇ ವಂಚನೆಗಳನ್ನು ಲೆಕ್ಕಪರಿಶೋಧಕರು ವರದಿ ಮಾಡಿರುವುದಿಲ್ಲ.

15. ನಿರ್ದೇಶಕರ ವರದಿಯ ದಿನಾಂಕ ಮತ್ತು ಆರ್ಥಿಕ ವರ್ಷದ ಮಧ್ಯದಲ್ಲಿ ಕಂಪನಿಯ ಆರ್ಥಿಕ ಸ್ಥಿತಿಗೆ ಪರಿಣಾಮವನ್ನುಂಟುಮಾಡುವ ದಂಡಗಳು/ಶಿಕ್ಷೆಗಳು/ಬದ್ಧತೆಗಳ ವಿವರಗಳು.

ನಿರ್ದೇಶಕರ ವರದಿಯ ದಿನಾಂಕ ಮತ್ತು ಆರ್ಥಿಕ ವರ್ಷದ ಮಧ್ಯದಲ್ಲಿ ಕಂಪನಿಯ ಆರ್ಥಿಕ ಸ್ಥಿತಿಗೆ ಪರಿಣಾಮವನ್ನುಂಟುಮಾಡುವಂತಹ ಯಾವುದೇ ದಂಡಗಳು/ ಶಿಕ್ಷೆಗಳು/ ಬದ್ಧತೆಗಳು ಇರುವುದಿಲ್ಲ.

16. ಮಂಡಳಿಯ ಅಭಿಪ್ರಾಯದಲ್ಲಿ ಕಂಪನಿಯ ಅಸ್ಥಿತ್ವಕ್ಕೆ ಬೆದರಿಕೆ, ಅಲ್ಲಿನ ಅಪಾಯದ ಅಂಶಗಳು ಯಾವುದಾದರೂ ಇದ್ದಲ್ಲಿ ಅವುಗಳ ಗುರುತಿಸುವಿಕೆ ಸೇರಿದಂತೆ ಕಂಪನಿಗೆ ಅಪಾಯ ನಿರ್ವಹಣಾ ನೀತಿ, ಅಭಿವೃದ್ಧಿ ಮತ್ತು ಅನುಷ್ಠಾನ ಸೂಚಿಸುವ ಹೇಳಿಕೆ.

ಕಂಪನಿಯು ಕಂಪನಿಗಾಗಿ ಅಪಾಯ ನಿರ್ವಹಣಾ ನೀತಿಯನ್ನು ಇನ್ನೂ ಅನುಷ್ಠಾನಗೊಳಿಸಬೇಕಾಗಿದೆ.

17. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನೀತಿ ಕುರಿತು ಕಂಪನಿಯು ಅಭಿವೃದ್ಧಿಪಡಿಸಿದ, ಅನುಷ್ಠಾನಗೊಳಿಸಿದ ಮತ್ತು ವರದಿಯ ವರ್ಷದಲ್ಲಿ ತೆಗೆದುಕೊಂಡ ಉಪಕ್ರಮಗಳ ವಿವರಗಳು.

ಕಂಪನಿ ಕಾಯಿದೆ 2013ರ, ಪರಿಚ್ಛೇದ 135(4) ರಲ್ಲಿ ಉಲ್ಲೇಖಿಸಲಾದ ಸಿ.ಎಸ್.ಆರ್. ನೀತಿ ವಿವರಗಳನ್ನು ಮತ್ತು ಇತರೆ ವಿವರಗಳನ್ನು ನಿಗದಿತ ನಮೂನೆಯಲ್ಲಿ ಈ ವರದಿಯ ಅನುಬಂಧ–2 ರಲ್ಲಿ ಲಗತ್ತಿಸಲಾಗಿದೆ.

18. ಪ್ರಸಕ್ತ ವರ್ಷದಲ್ಲಿ ನೇಮಕಗೊಂಡ ಅಥವಾ ರಾಜಿನಾಮೆ ಸಲ್ಲಿಸಿದ ನಿರ್ದೇಶಕರುಗಳ ವಿವರಗಳು.

ಕರ್ನಾಟಕ ಸರ್ಕಾರದ ನಿರ್ದೇಶನದಂತೆ ನಿರ್ದೇಶಕ ಮಂಡಳಿಯ ಸಂಯೋಜನೆಯಲ್ಲಿ ಈ ಕೆಳಕಂಡ ಬದಲಾವಣೆಗಳನ್ನು ಮಾಡಲಾಗಿದೆ.

- ಶ್ರೀ. ಮಹೇಂದ್ರ ಜೈನ್, ಐ.ಎ.ಎಸ್., ಅಪರ ಮುಖ್ಯಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಇವರನ್ನು ಶ್ರೀ ಪಿ. ರವಿಕುಮಾರ್ ರವರ ವರ್ಗಾವಣೆಯಿಂದ ತೆರವಾದ ಸ್ಥಾನಕ್ಕೆ ದಿನಾಂಕ: 24.06.2019 ರಿಂದ ಜಾರಿಗೆ ಬರುವಂತೆ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ನಾಮನಿರ್ದೇಶನಗೊಳಿಸಲಾಗಿದೆ.
- ಡಾ। ಎನ್ ಮಂಜುಳ, ವ್ಯವಸ್ಥಾಪಕ ನಿರ್ದೇಶಕರು, ಕ.ವಿ.ಪ್ರ.ನಿ.ನಿ ಇವರನ್ನು ಡಾ। ಎಸ್. ಸೆಲ್ವಕುಮಾರ್, ಐ.ಎ.ಎಸ್. ರವರ ತೆರವಾದ ಸ್ಥಾನಕ್ಕೆ ದಿನಾಂಕ: 22.08.2019 ರಿಂದ ಜಾರಿಗೆ ಬರುವಂತೆ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ನಾಮ ನಿರ್ದೇಶನಗೊಳಿಸಲಾಗಿದೆ.
- ಶ್ರೀ ಎಂ. ಬಿ. ರಾಜೇಶ್ ಗೌಡ, ಐ.ಎ.ಎಸ್. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ಶ್ರೀಮತಿ ಸಿ. ಶಿಖಾ, ಐ.ಎ.ಎಸ್. ರವರ ತೆರವಾದ ಸ್ಥಾನಕ್ಕೆ ದಿನಾಂಕ: 18.09.2019 ರಿಂದ ಜಾರಿಗೆ ಬರುವಂತೆ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ನಾಮ ನಿರ್ದೇಶನಗೊಳಿಸಲಾಗಿದೆ.
- ಶ್ರೀ ಎನ್. ಮಂಜುನಾಥ್ ಪ್ರಸಾದ್, ಐ.ಎ.ಎಸ್. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಕರ್ನಾಟಕ ಸರ್ಕಾರ ಇವರನ್ನು ಡಾ। ರಾಜ್ ಕುಮಾರ್ ಖಾತ್ರಿ, ಐ.ಎ.ಎಸ್.? ರವರ ತೆರವಾದ ಸ್ಥಾನಕ್ಕೆ ದಿನಾಂಕ: 18.09.2019 ರಿಂದ ಜಾರಿಗೆ ಬರುವಂತೆ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ನಾಮ ನಿರ್ದೇಶನಗೊಳಿಸಲಾಗಿದೆ.
- ಶ್ರೀಯುತ ಎ. ಬಿ. ಬಸವರಾಜು, ಕೆ.ಎ.ಎಸ್, ಇವರ ವರ್ಗಾವಣೆಯಿಂದ ತೆರವಾದ ಸ್ಥಾನಕ್ಕೆ ಡಾ। ಹೆಚ್.ಬಿ. ಬೂದೆಪ್ಪ, ಕೆ.ಎ.ಎಸ್. ಇವರನ್ನು ದಿನಾಂಕ: 31.12.2019 ರಿಂದ ಜಾರಿಗೆ ಬರುವಂತೆ ವ್ಯವಸ್ಥಾಪಕ ನಿರ್ದೇಶಕ ಸ್ಥಾನಕ್ಕೆ ನಾಮನಿರ್ದೇಶನಗೊಳಿಸಲಾಗಿದೆ.

19. ಮಂಡಳಿಯ ಸಮಿತಿಗಳು:

2019–20ನೇ ಆರ್ಥಿಕ ವರ್ಷದಲ್ಲಿ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (CSR) ಸಮಿತಿಯ ಸದಸ್ಯರುಗಳು ಈ ಕೆಳಕಂಡಂತೆ ಇರುತ್ತಾರೆ.

ಶ್ರೀಮತಿ ಸ್ಮಿತ ಬಿಜ್ಜೂರ್, ಐ.ಎಫ್.ಎಸ್.	:	ಸಮಿತಿಯ ಅಧ್ಯಕ್ಷರು
ಡಾ। ಹೆಚ್.ಬಿ. ಬೂದೆಪ್ಪ, ಕೆ.ಎ.ಎಸ್.	:	ಸಮಿತಿಯ ಸದಸ್ಯರು
ಶ್ರೀ ರಾಜ್‌ಕುಮಾರ್ ಎಸ್ ಬಿರದರ್	:	ಸಮಿತಿಯ ಸದಸ್ಯರು

ಸಾಮಾಜಿಕ ಜವಾಬ್ದಾರಿ (CSR) ಕಾರ್ಯಗಳನ್ನು ನಿರ್ವಹಣೆಗಾಗಿ ಸಾಮಾಜಿಕ ಜವಾಬ್ದಾರಿ (CSR) ನಿಧಿ ಸ್ವಿಕರಿಸಲು ಪಡೆಯಲಾಗಿರುವ ಅರ್ಜಿ/ಪತ್ರಗಳನ್ನು ಅನುಮೋದಿಸಲು ಸಾಮಾಜಿಕ ಜವಾಬ್ದಾರಿ (CSR) ಸಮಿತಿಯು ದಿನಾಂಕ 29.02.2020 ರಂದು ಸಭೆ ನಡೆಸಿದೆ.

20. ವರ್ಷದ ಅವಧಿಯಲ್ಲಿ ಇದರ ಅಂಗಸಂಸ್ಥೆಗಳು, ಜಂಟಿ ಸಹಭಾಗಿತ್ವದ ಅಥವಾ ಸಂಘಟಿತ ಸಂಸ್ಥೆಯಾಗಿರುವ ಕಂಪನಿಯ ಹೆಸರುಗಳು.

ವರದಿಯ ವರ್ಷದ ಅವಧಿಯಲ್ಲಿ ಯಾವುದೇ ಅಂಗಸಂಸ್ಥೆಗಳು, ಜಂಟಿ ಸಹಭಾಗಿತ್ವದ ಅಥವಾ ಸಂಘಟಿತ ಸಂಸ್ಥೆಯಾಗಿರುವ ಕಂಪನಿಗಳು ತೆರೆದಿರುವುದಿಲ್ಲವೆಂದು ವರದಿ ಮಾಡಿದೆ.

21. ಸಂಸ್ಥೆಯ ಸ್ಥಿತಿ ಮತ್ತು ಭವಿಷ್ಯದಲ್ಲಿ ಕಂಪನಿಯ ಕಾರ್ಯಾಚರಣೆಯ ಮೇಲೆ ಪ್ರಭಾವ ಬೀರುವ ನಿಯಂತ್ರಕರು ಅಥವಾ ನ್ಯಾಯಾಲಯಗಳು ಅಥವಾ ನ್ಯಾಯಾಧೀಕರಣಗಳು ಹೊರಡಿಸಿರುವ ಗಮನಾರ್ಹ ಮತ್ತು ವಸ್ತುನಿಷ್ಠ ಆದೇಶಗಳ ವಿವರಗಳು.

ಸಂಸ್ಥೆಯ ಸ್ಥಿತಿ ಮತ್ತು ಭವಿಷ್ಯದಲ್ಲಿ ಕಂಪನಿಯ ಕಾರ್ಯಾಚರಣೆಯ ಮೇಲೆ ಪ್ರಭಾವ ಬೀರುವ ನಿಯಂತ್ರಕರು ಅಥವಾ ನ್ಯಾಯಾಲಯಗಳು ಅಥವಾ ನ್ಯಾಯಾಧೀಕರಣಗಳು ಹೊರಡಿಸಿರುವ ಗಮನಾರ್ಹ ಮತ್ತು ವಸ್ತುನಿಷ್ಠ ಆದೇಶಗಳನ್ನು ಹೋರಡಿಸಿರುವುದಿಲ್ಲ.

22. ಉದ್ಯೋಗ ಸ್ಥಳದಲ್ಲಿ ಉದ್ಯೋಗಸ್ಥ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ತಡೆಗಟ್ಟಲು 'ಉದ್ಯೋಗಸ್ಥ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ತಡೆಗಟ್ಟುವ ಕಾಯ್ದೆ, (ತಡೆಗಟ್ಟುವಿಕೆ, ನಿಷೇಧ ಮತ್ತು ನಿವಾರಣೆ) 2013'ರ ಅಡಿಯಲ್ಲಿ ಅಗತ್ಯವಿರುವ ಪ್ರತಿ ಕ್ಯಾಲೆಂಡರ್ ವರ್ಷದ ಅವಧಿಯಲ್ಲಿ ಸ್ವೀಕರಿಸಲಾದ ಮತ್ತು ವಿಲೇವಾರಿ ಮಾಡಲಾದ ದೂರುಗಳ ಸಾರಾಂಶ ಮತ್ತು ಕಾಯಿದೆಯ ಅಗತ್ಯತೆಗಳ ಸಾಲಿನಲ್ಲಿ ಕಂಪನಿಯು ಲೈಂಗಿಕ ಕುರುಕುಳ ವಿರೋಧಿ ನೀತಿಯನ್ನು ಹೊಂದಿದೆ ಮತ್ತು ಪರಿಹಾರಕ್ಕಾಗಿ ಒಂದು ಆಂತರಿಕ ದೂರು ಸಮಿತಿಯನ್ನು ಸ್ಥಾಪಿಸಲಾಗಿ, ಇದರಡಿಯಲ್ಲಿ ಕಂಪನಿಯ ಎಲ್ಲ ಸಿಬ್ಬಂಧಿಗಳಿಗೂ (ಖಾಯಂ, ಗುತ್ತಿಗೆ, ಹಂಗಾಮಿ, ತರಬೇತಿ ಪಡೆಯುತ್ತಿರುವ) ಈ ನೀತಿಯನ್ನು ವಿಸ್ತರಿಸಲಾಗಿದೆ ಎಂಬುದನ್ನು ಬಹಿರಂಗಪಡಿಸುವಿಕೆ.

ವರ್ಷದ ಅವಧಿಯಲ್ಲಿ ಉದ್ಯೋಗ ಸ್ಥಳದಲ್ಲಿ ಲೈಂಗಿಕ ಕಿರುಕುಳ ವಿರೋಧಿ ನೀತಿಯನ್ನು, (ತಡೆಗಟ್ಟುವಿಕೆ, ನಿಷೇಧ ಮತ್ತು ನಿವಾರಣೆ) 2013, ನೀತಿಯಿದ್ದು, ಇದರ ಅಗತ್ಯತೆಯ ಸಾಲಿನಲ್ಲಿ ನೌಕರರು ಈ ಕಾಯಿದೆಯಡಿಯಲ್ಲಿ ಅವರ ದೂರುಗಳನ್ನು ಪರಿಹರಿಸಿಕೊಳ್ಳಲು ಸಲಹೆ ನೀಡಲಾಗಿದೆ ಎಂದು ನಿಮ್ಮ ನಿರ್ದೇಶಕ ಮಂಡಳಿಯು ವರದಿ ಮಾಡುತ್ತದೆ.

23. ಕಂಪನಿಗಳ ಕಾಯಿದೆ, 2013ರ ಉಪವಿಧಿ 177, ಉಪ ಪ್ರಕರಣ (10)ರ ಅನುಸಾರವಾಗಿ ಕಂಪನಿಯ ನಿರ್ದೇಶಕರು ಮತ್ತು ನೌಕರರಿಗೆ ಕಂಪನಿಯ ಬಗ್ಗೆ ನಿಜವಾದ ಕಾಳಜಿ ವರದಿ ಮಾಡಲು ಅನುಕೂಲವಾಗಲು ಸ್ಥಾಪಿಸಲಾದ ಜಾಗೃತಿ ಕಾರ್ಯವಿಧಾನದ ವಿವರಗಳು

ಕಂಪನಿಗಳ ಅಧಿನಿಯಮ 2013ರ ಪ್ರಕರಣ 177, ಉಪ ಪ್ರಕರಣ (10)ರ ಅನುಸಾರವಾಗಿ ಕಂಪನಿಯ ನಿರ್ದೇಶಕರು ಮತ್ತು ನೌಕರರಿಗೆ ಕಂಪನಿಯ ಬಗ್ಗೆ ನೈಜ ಕಾಳಜಿ ವರದಿ ಮಾಡಲು ಅನುಕೂಲವಾಗಲು ಜಾಗೃತಿ ಕಾರ್ಯವಿಧಾನ ಸ್ಥಾಪಿಸುವುದು ಕಂಪನಿಗೆ ಅನ್ವಯಿಸುವುದಿಲ್ಲ.

24. ವರದಿಯ ವರ್ಷದಲ್ಲಿ ಕಂಪನಿಯಿಂದ ಹೊರಡಿಸಲಾದ ಬೇಧಾತ್ಮಕ ಹಕ್ಕುಗಳ ಇಕ್ವಿಟಿ ಶೇರುಗಳ ವಿವರಗಳು.

ಕಂಪನಿಗಳ ಕಾಯಿದೆ 2013ರ ನಿಯಮ ಉಪ ನಿಯಮ 4ರಲ್ಲಿ ಓದಲಾದ (ಶೇರು ಬಂಡವಾಳ ಮತ್ತು ಸಾಲಪತ್ರಗಳು) ಕಂಪನಿಗಳ ನಿಯಮಾವಳಿ, 2014 ರ ಅನುಸಾರವಾಗಿ ವರದಿಯ ವರ್ಷಾವಧಿಯಲ್ಲಿ ಕಂಪನಿಯಿಂದ ಯಾವುದೇ ಬೇಧಾತ್ಮಕ ಹಕ್ಕುಗಳ ಇಕ್ವಿಟಿ ಶೇರುಗಳನ್ನು ಹೊರಡಿಸಿರುವುದಿಲ್ಲವೆಂದು ತಮ್ಮ ನಿರ್ದೇಶಕ ಮಂಡಳಿಯು ವರದಿ ಮಾಡುತ್ತದೆ.

25. ವರದಿಯ ವರ್ಷದಲ್ಲಿ ಕಂಪನಿಯಿಂದ ಹೊರಡಿಸಲಾದ ಸ್ವೆಟ್ ಇಕ್ವಿಟಿಯ ವಿವರಗಳು

ಕಂಪನಿಗಳ ಕಾಯಿದೆ 2013ರ ಪರಿಚ್ಛೇದ 54, ಉಪ–ಪ್ರಕರಣ (13)ರ ನಿಯಮ 4ರಲ್ಲಿ ಓದಲಾದ (ಶೇರು ಬಂಡವಾಳ ಮತ್ತು ಸಾಲಪತ್ರಗಳು) ಕಂಪನಿಗಳ ನಿಯಮಾವಳಿ, 2014 ರ ಅನುಸಾರವಾಗಿ ವರದಿಯ ವರ್ಷದ ಅವಧಿಯಲ್ಲಿ ಕಂಪನಿಯಿಂದ ಯಾವುದೇ ಸ್ವೆಟ್ ಇಕ್ವಿಟಿ ಶೇರುಗಳನ್ನು ಹೊರಡಿಸಿರುವುದಿಲ್ಲವೆಂದು ತಮ್ಮ ನಿರ್ದೇಶಕ ಮಂಡಳಿಯು ವರದಿ ಮಾಡುತ್ತದೆ.

26. ಇಎಸ್‌ಒಪಿ (ESOP Scheme)ಸ್ಕೀಮ್‌ನ ವಿವರಗಳು:

ಕಂಪನಿಗಳ ಕಾಯಿದೆ 2013ರ ಪರಿಚ್ಛೇಧ 54, ಉಪವಿಧಿ 62(1)(ಬಿ)ರ ಕಂಪನಿಗಳ ನಿಯಮ 12ರ ಉಪನಿಯಮ (9) ರಲ್ಲಿ ಓದಲಾದ (ಶೇರು ಬಂಡವಾಳ ಮತ್ತು ಸಾಲಪತ್ರಗಳು) ನಿಯಮ 2014 ರ ಅನುಸಾರವಾಗಿ ವರದಿಯ ವರ್ಷದ ಅವಧಿಯಲ್ಲಿ ಕಂಪನಿಯು ಇ.ಎಸ್.ಒ.ಪಿ ಸ್ಕೀಂ (ESOP Scheme) ಅಡಿಯಲ್ಲಿ ನೌಕರರಿಗೆ ಯಾವುದೇ ಸ್ವೆಟ್ ಇಕ್ವಿಟಿ ಶೇರುಗಳನ್ನು ಹೊರಡಿಸಿರುವುದಿಲ್ಲವೆಂದು ತಮ್ಮ ನಿರ್ದೇಶಕ ಮಂಡಳಿಯು ವರದಿ ಮಾಡುತ್ತದೆ.

27. ನಿರ್ದೇಶಕರು ಅಥವಾ ನಿರ್ದೇಶಕರ ಸಂಬಂಧಿಗಳಿಂದ ಪಡೆಯಲಾದ ಮೊತ್ತಗಳ ವಿವರಗಳು :

ಕಂಪನಿಗಳ ನಿಯಮಾವಳಿ, 2014 ರ ನಿಯಮ 2(1)(ಸಿ)(viii) (ಠೇವಣಿಗಳ ಸ್ವೀಕಾರ) ಅನುಸಾರವಾಗಿ ವರದಿಯ ವರ್ಷದ ಅವಧಿಯಲ್ಲಿ ಕಂಪನಿಯಿಂದ ಯಾವುದೇ ಮೊತ್ತಗಳನ್ನು ಪಡೆದಿರುವುದಿಲ್ಲವೆಂದು ತಮ್ಮ ನಿರ್ದೇಶಕ ಮಂಡಳಿಯು ವರದಿ ಮಾಡುತ್ತದೆ.

28. ಕಂಪನಿಯ ನಿಯಮಾವಳಿಗಳು 2014ರ ನಿಯಮ 5(2)ರಡಿಯಲ್ಲಿ ಅಗತ್ಯವಿರುವ ನೌಕರರ (ವ್ಯವಸ್ಥಾಪನಾ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ವಿವರಗಳು:

ವರದಿಯ ವರ್ಷಾವಧಿಯಲ್ಲಿ 2014ನೇ ಸಾಲಿನ ಕಂಪನಿಗಳ ನಿಯಮಾವಳಿಯ ನಿಯಮ 5(2) ರ ಅಡಿಯಲ್ಲಿ (ವ್ಯವಸ್ಥಾಪನಾ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ವಿವರಗಳನ್ನು ಒದಗಿಸಬೇಕಾಗಿರುವಂತಹ ಯಾವುದೇ ನೌಕರರಿಲ್ಲ.

29. ಸಿಬ್ಬಂಧಿ – ಆಡಳಿತ ಮಂಡಳಿಯ ಸಂಬಂಧ

ಪರಿಶೀಲನಾ ವರ್ಷಾವಧಿಯಲ್ಲಿ ಸಿಬ್ಬಂಧಿ–ಆಡಳಿತಮಂಡಳಿಯ ನಡುವಿನ ಸಂಬಂಧವು ಸಾಕಷ್ಟು ಸೌಹಾರ್ದಯುತ ಮತ್ತು ಸಾಮರಸ್ಯದಿಂದ ಕೂಡಿದೆ.

30. ಕಂಪನಿಯಿಂದ ಅನ್ವಯವಾಗುವ ಪ್ರಮಾಣಿತ ಕಾರ್ಯದರ್ಶಿಯ ಅನುಸರಣೆ

ನಿರ್ದೇಶಕರ ವರದಿಯ ಪ್ರಕಾರ, ಕಂಪನಿಯು ಕಂಪನಿಯ ಕಾರ್ಯದರ್ಶಿ ಸಂಸ್ಥೆಯು ಹೊರಡಿಸಿರುವ ಪ್ರಮಾಣಿತ ಕಾರ್ಯದರ್ಶಿ ಷರತ್ತುಗಳೊಂದಿಗೆ ಅನುಸರಿಸಿದೆ ಹಾಗೂ ಕಂಪನಿ ಕಾಯಿದೆ 2013, 118 ನೇ ವಿಭಾಗದ ಅಧಿ ನಿಯಮ (10) ರ ಅಡಿಯಲ್ಲಿ ಭಾರತ ಸರ್ಕಾರದ ಅನುಮೋಧನೆ ನೀಡಿದೆ ಎಂದು ನಿರ್ದೇಶಕರು ವರದಿ ಮಾಡಿದ್ದಾರೆ.

31. ಕಂಪನಿ ಕಾಯಿದೆ ನಿಯಮ ವಿಭಾಗ 5ರಡಿಯಲ್ಲಿ ಠೇವಣಿಗೆ ಸಂಬಂಧಿಸಿದ ವಿವರಗಳು:

ಅ)	ಪ್ರಸ್ತುತ ವರ್ಷದಲ್ಲಿ ಸ್ವೀಕರಿಸಲಾದ ಮೊತ್ತ	ಇಲ್ಲ
ಆ)	ವರ್ಷಾಂತ್ಯದಲ್ಲಿ ಕೊಡದೇ ಬಾಕಿ ಇರುವ ಅಥವಾ ಪಡೆಯದೇ ಇರುವ ಮೊತ್ತ	ಇಲ್ಲ
ಇ)	ಠೇವಣಿ ಮರು ಪಾವತಿಯಲ್ಲಿ ಅಡಚಣೆ ಅಥವಾ ವಾರ್ಷಿಕ ಬಡ್ಡಿ, ಇತರ ಅಡಚಣೆ	ಇಲ್ಲ
	(1) ವರ್ಷದ ಆರಂಭದಲ್ಲಿ	ಇಲ್ಲ
	(2) ಪ್ರಸ್ತುತ ವರ್ಷದಲ್ಲಿ	ಇಲ್ಲ
	(3) ವರ್ಷಾಂತ್ಯದಲ್ಲಿ	ಇಲ್ಲ.

32. ಕಂಪನಿ ಕಾಯಿದೆ ವಿಭಾಗ 5 ಅಧ್ಯಾಯದ ಅವಶ್ಯಕತೆಗಳಿಗೆ ಅನುಗುಣವಾಗಿರದ ಠೇವಣಿಗಳ ವಿವರಗಳು:

ಕಂಪನಿ ಕಾಯಿದೆ ವಿಭಾಗ 5 ಅಧ್ಯಾಯದ ಅವಶ್ಯಕತೆಗಳಿಗೆ ಅನುಗುಣವಾಗಿ ಪ್ರಸ್ತುತ ವರ್ಷದಲ್ಲಿ ಯಾವುದೇ ಠೇವಣಿಗಳು ಸ್ವೀಕೃತವಾಗಿಲ್ಲ.

33. ಹಣಕಾಸಿನ ಉಲ್ಲೇಖದೊಂದಿಗೆ ಆಂತರಿಕ ಹಣಕಾಸು ನಿಯಂತ್ರಣಗಳ ಹೊಂದಾಣಿಕೆಗೆ ಸಂಬಂಧಿಸಿದ ವಿವರಗಳು:

ತಮ್ಮ ನಿರ್ದೇಶಕರ ಮಂಡಳಿಯ ವರದಿಯಲ್ಲಿ ಕಂಪನಿಯು ಹಣಕಾಸಿನ ಹೇಳಿಕೆಗೆ ಸಂಬಂಧಿಸಿದಂತೆ ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣಗಳನ್ನು ಹೊಂದಿದೆ ಎಂದು ವರದಿ ನೀಡಿದೆ.

34. ಶಾಸನಬದ್ಧ ಲೆಕ್ಕಪರಿಶೋಧಕರು:

ಕಂಪನಿ ಕಾಯಿದೆ 2013, ಪರಿಚ್ಛೇದ 139ರ (5) ನೇ ಉಪ–ಪ್ರಕರಣದ ನಿಬಂಧನೆಗಳ ಪ್ರಕಾರ ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೇಖಾಪರೀಕ್ಷಕರು, ನವದೆಹಲಿ ಇವರಿಂದ 2019–20ನೇ ಆರ್ಥಿಕ ವರ್ಷದ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಲು ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಕ ಮಾಡಲು ಪತ್ರವನ್ನು ಸ್ವೀಕರಿಸಬೇಕಾಗಿರುತ್ತದೆ.

35. ವೆಚ್ಚದ ದಾಖಲೆಗಳ ನಿರ್ವಹಣೆ

ಕಂಪನಿ ಕಾಯಿದೆ 2013 ರ ವಿಭಾಗ 148 ಅಧಿವಿಭಾಗ (1) ರ ಕೇಂದ್ರೀಯ ಸರ್ಕಾರ ಸೂಚಿಸಿರುವ ವೆಚ್ಚ ದಾಖಲೆಗಳ ನಿರ್ವಹಣೆಯು ಸಂಸ್ಥೆಗೆ ಅನ್ವಯಿಸುವುದಿಲ್ಲ ಎಂದು ನಿರ್ದೇಶಕರು ವರದಿ ಮಾಡಿರುತ್ತಾರೆ.

36. ಸಹಬಾಗಿತ್ವ ಕಂಪನಿಯ ಹೆಸರು, ಶೇಕಡವಾರು ಹಾಗೂ ಹಿಡುವಳಿ ಮೊತ್ತ

	ಕಂಪನಿಯ ಹೆಸರು	ಶೇಕಡವಾರು ಹಾಗೂ ಹಿಡುವಳಿ ಮೊತ್ತ
ಸಹಭಾಗಿತ್ವ	ಮೆ. ಕರ್ನಾಟಕ ಸೌರ ವಿದ್ಯುತ್ ಅಭಿವೃದ್ಧಿ ನಿಗಮ ನಿಯಮಿತ	ಶೇ, 50.00 ರೂ. 49,99,970/–

37. ಕೃತಜ್ಞತೆಗಳು:

ಬ್ಯಾಂಕರುಗಳು, ವಿವಿಧ ಸರ್ಕಾರಿ ಪ್ರಾಧಿಕಾರಗಳು, ಕಂಪನಿಯ ಸಿಬ್ಬಂಧಿ ವರ್ಗ ನೀಡಲಾದ ಉಪಯುಕ್ತ ಸೇವೆಗಳು, ಬೆಂಬಲ, ಸಹಕಾರ ಮತ್ತು ಮಾರ್ಗದರ್ಶನಕ್ಕೆ ತಮ್ಮ ನಿರ್ದೇಶಕ ಮಂಡಳಿಯು ತನ್ನ ಪ್ರಶಂಸೆಯನ್ನು ದಾಖಲಿಸಲು ಇಚ್ಚಿಸುತ್ತಾ, ಮುಂದೆಯೂ ಇದೇ ರೀತಿಯ ಬೆಂಬಲ ದೊರೆಯುವುದೆಂದು ಆಶಿಸುತ್ತದೆ.

ಮಂಡಳಿಗಾಗಿ ಮತ್ತು ಮಂಡಳಿ ಪರವಾಗಿ

ಸಹಿ/–

(ಚಂದ್ರಕಾಂತ್ ಬಸವರಾಜ್ ಪಾಟೀಲ್)

ಅಧ್ಯಕ್ಷರು

(ಡಿಐನ್ : 02304375)

ಸ್ಥಳ : ಬೆಂಗಳೂರು

ದಿನಾಂಕ : 15.12.2020

ಅನುಬಂಧ–1

ನಮೂನೆ ಸಂಖ್ಯೆ ಎಂಜಿಟಿ–9

ವಾರ್ಷಿಕ ಲೆಕ್ಕಪತ್ರದ ಆಯ್ದ ಭಾಗ

31.03.2020ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ

[ಕಂಪನಿ ಕಾಯಿದೆ 2013 ಪರಿಚ್ಛೇದ 92(3) ಮತ್ತು ಕಂಪನಿಯ ನಿಯಮಾವಳಿ 2014ರ (ಆಡಳಿತ ಮಂಡಳಿ ಮತ್ತು ಆಡಳಿತ) ನಿಯಮ 12(1)ರ ಅನುಸಾರವಾಗಿ]

I. ನೋಂದಣಿ ಮತ್ತು ಇತರೆ ವಿವರಗಳು:

01	ಸಿಐಎನ್	ಯು75112ಕೆಎ1996ಎಸ್‌ಜಿಸಿ020020
02	ನೋಂದಣಿಯ ದಿನಾಂಕ	08.03.1996
03	ಕಂಪನಿಯ ಹೆಸರು	ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
04	ಕಂಪನಿಯ ವರ್ಗ/ಉಪ–ವರ್ಗ	ನಿಯಮಿತ ಕಂಪನಿ, ಶೇರುಗಳಿಂದ ನಿಯಮಿತ
05	ನೋಂದಾಯಿತ ಕಛೇರಿಯ ವಿಳಾಸ ಮತ್ತು ಸಂಪರ್ಕ ಸಂಖ್ಯೆ	ನಂ: 39, "ಶಾಂತಿ ಗೃಹ" ಭಾರತ ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಬೆಂಗಳೂರು–560 001 ಇಮೇಲ್ ಐಡಿ: kredlmd@md.com ದೂರವಾಣಿ ಸಂಖ್ಯೆ: 080–2220 8109
06	ಪಟ್ಟಿಮಾಡಲಾದ ಕಂಪನಿಯೇ	ಅಲ್ಲ
07	ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಪ್ರತಿನಿಧಿಯ ಹೆಸರು, ವಿಳಾಸ ಮತ್ತು ಸಂಪರ್ಕ ವಿವರಗಳು, ಯಾವುದಾದರೂ ಇದ್ದರೆ	ಅನ್ವಯಿಸುವುದಿಲ್ಲ
08	ವಾರ್ಷಿಕ ಸಾಮಾನ್ಯ ಸಭೆ ನಡೆದ ದಿನಾಂಕ	30.09.2019

II. ಕಂಪನಿಯ ಪ್ರಮುಖ ವ್ಯವಹಾರ ಚಟುವಟಿಕೆ

(ಕಂಪನಿಯ ವಹಿವಾಟಿನ 10% ಅಥವಾ ಅದಕ್ಕೂ ಮೇಲ್ಪಟ್ಟ ಕೊಡುಗೆ ಸಲ್ಲಿಸುವ ಎಲ್ಲಾ ವ್ಯವಹಾರ ಚಟುವಟಿಕೆಗಳ ಹೇಳಿಕೆಗಳನ್ನು ದಾಖಲಿಸತಕ್ಕದ್ದು)

ಕ್ರ. ಸಂ.	ಮುಖ್ಯ ಉತ್ಪನ್ನಗಳ /ಸೇವೆಗಳ ಹೆಸರು ಮತ್ತು ವಿವರಣೆ	ಉತ್ಪನ್ನದ/ಸೇವೆಯ ಎನ್.ಐ.ಸಿ. ಸಂಕೇತ	ಕಂಪನಿಯ ಒಟ್ಟು ವಹಿವಾಟಿನ ಪ್ರತಿಶತ
1	ಮೂಲಸೌಕರ್ಯ ಅಭಿವೃದ್ಧಿ ಸುಲಭಗೊಳಿಸುವ ಶುಲ್ಕ	–	52.83%
2.	ವಿದ್ಯುತ್ ಉತ್ಪಾದನೆಯಿಂದ ಆದಾಯ	–	47.17%

III. ಹಿಡುವಳಿ, ಅಂಗಸಂಸ್ಥೆ ಮತ್ತು ಸಂಘಟಿತ ಸಂಸ್ಥೆಯ ವಿವರಗಳು

ಕ್ರ. ಸಂ	ಕಂಪನಿಯ ಹೆಸರು ಮತ್ತು ವಿಳಾಸ	ಸಿಐಎನ್/ಜಿಎಲ್ಎನ್	ಹಿಡುವಳಿ ಅಂಗಸಂಸ್ಥೆ/ ಸಂಘಟಿತ ಸಂಸ್ಥೆ	ಶೇರುಗಳ ಪ್ರತಿಶತ	ಅನ್ವಯಿಸುವ ಸೆಕ್ಷನ್
1	ಕರ್ನಾಟಕ ಸೌರ ವಿದ್ಯುತ್ ಅಭಿವೃದ್ಧಿ ನಿಗಮ ನಿಯಮಿತ, 2ನೇ ಮಹಡಿ, ಬೀಜರಾಜ ಸೀಡ್ ಕಾಂಪ್ಲೇಕ್ಸ್, ಹೆಬ್ಬಾಳ, ಬಳ್ಳಾರಿ ರಸ್ತೆ, ಬೆಂಗಳೂರು–560 024.	ಯು40107ಕೆಎ2015 ಪಿಟಿಸಿ079223	ಅಂಗಸಂಸ್ಥೆ	ಶೇ. 50	ಕಂಪನಿ ಕಾಯಿದೆ 2013ರ ಭಾಗ 2(6)

IV. ಶೇರು ಹೊಂದಿರುವಿಕೆಯ ಮಾದರಿ (ಒಟ್ಟು ಶೇರುಗಳ ಶೇಕಡಾವಾರು ಇಕ್ವಿಟಿ ಶೇರು ಬಂಡವಾಳದ ವಿಘಟನೆ)

i) ವರ್ಗವಾರು ಶೇರು ಹೊಂದುವಿಕೆ:

ಪಾಲುದಾರರ ವರ್ಗ	ವರ್ಷಾರಂಭದಲ್ಲಿ ಹಿಡಿಯಲಾದ ಶೇರುಗಳ ಸಂಖ್ಯೆ				ವರ್ಷಾಂತ್ಯದಲ್ಲಿ ಹಿಡಿಯಲಾದ ಶೇರುಗಳ ಸಂಖ್ಯೆ				ವರ್ಷದ ಅವಧಿಯಲ್ಲಿ % ವಾರು ಬದಲಾವಣೆ
	ಡಿಮ್ಯಾಟ್	ಭೌತಿಕ	ಒಟ್ಟು	ಒಟ್ಟು ಶೇರುಗಳ %	ಡಿಮ್ಯಾಟ್	ಭೌತಿಕ	ಒಟ್ಟು	ಒಟ್ಟು ಶೇರುಗಳ %	
ಎ. ಪ್ರವರ್ತಕರು									
1) ಭಾರತೀಯ									
ಎ) ವೈಯಕ್ತಿಕ/ಹಿಂಅಕು (HUF)	–	–	–	–	–	–	–	–	–
ಬಿ) ಕೇಂದ್ರ ಸರ್ಕಾರ	–	–	–	–	–	–	–	–	–
ಸಿ) ರಾಜ್ಯ ಸರ್ಕಾರ(ಗಳು)	––	5,00,030	5,00,030	100%	––	5,00,030	5,00,030	100%	–
ಡಿ) ಸಂಸ್ಥೆಗಳು ಕಾರ್ಪೋರೇಟ್‌ಗಳು	–	–	–	–	–	–	–	–	–
ಇ) ಬ್ಯಾಂಕ್/ಹ.ಸಂ.	–	–	–	–	–	–	–	–	–
ಎಫ್) ಬೇರೆ ಇತರೆ	–	–	–	–	–	–	–	–	–
ಉಪ ಒಟ್ಟು: (ಎ) (1)	––	5,00,030	5,00,030	100%	––	5,00,030	5,00,030	100%	–
2) ವಿದೇಶಿ	–	–	–	–	–	–	–	–	–
ಎ) ಎನ್.ಆರ್.ಐ.ಗಳು/ವೈಯಕ್ತಿಕ	–	–	–	–	–	–	–	–	–
ಬಿ) ಇತರೆ ವೈಯಕ್ತಿಕ	–	–	–	–	–	–	–	–	–
ಸಿ) ಸಂಸ್ಥೆಗಳು ಕಾರ್ಪೋರೇಟ್‌ಗಳು	–	–	–	–	–	–	–	–	–

ಡಿ)ಬ್ಯಾಂಕ್/ಹ.ಸಂ.	–	–	–	–	–	–	–	–	–
ಎಫ್) ಬೇರೆ ಇತರೆ. . . .	–	–	–	–	–	–	–	–	–
ಉಪಮೊತ್ತ (ಎ) (2)	–	–	–	–	–	–	–	–	–
ಪ್ರವರ್ತಕರು ಹೊಂದಿರುವ ಒಟ್ಟು ಶೇರುಗಳು (ಎ)=(ಎ)(1)+(ಎ)(2)	––	**5,00,030**	**5,00,030**	**100%**	–	**5,00,030**	**5,00,030**	**100%**	––
ಸಾರ್ವಜನಿಕ ಶೇರು ಹಿಡುವಳಿ									
1) ಸಂಸ್ಥೆಗಳು									
ಎ) ಮ್ಯೂಚುವಲ್ ಫಂಡ್ಸ್	–	–	–	–	–	–	–	–	–
ಬಿ) ಬ್ಯಾಂಕುಗಳು/ಹ.ಸಂ.	–	–	–	–	–	–	–	–	–
ಸಿ) ಕೇಂದ್ರ ಸರ್ಕಾರ	–	–	–	–	–	–	–	–	–
ಡಿ) ರಾಜ್ಯ ಸರ್ಕಾರ(ಗಳು)	–	–	–	–	–	–	–	–	–
ಇ) ಸಹಭಾಗಿತ್ವ ಬಂಡವಾಳ ನಿಧಿ	–	–	–	–	–	–	–	–	–
ಎಫ್) ವಿಮಾ ಕಂಪನಿಗಳು	–	–	–	–	–	–	–	–	–
ಜಿ) ಎಫ್ಐಐಎಸ್	–	–	–	–	–	–	–	–	–
ಎಚ್) ವಿದೇಶಿ ಸಹಭಾಗಿತ್ವದ ಬಂಡವಾಳ ನಿಧಿ	–	–	–	–	–	–	–	–	–
ಐ) ಇತರೆ (ಸೂಚಿಸುವುದು)	–	–	–	–	–	–	–	–	–
ಉಪಮೊತ್ತ (ಬಿ)(1) :–	–	–	–	–	–	–	–	–	–

2) ಅ–ಸಂಸ್ಥೆಗಳು	–	–	–	–	–	–	–	–	–
ಎ) ಕಾರ್ಪೋರೇಟ್ ಸಂಸ್ಥೆಗಳು	–	–	–	–	–	–	–	–	–
i) ಭಾರತೀಯ	–	–	–	–	–	–	–	–	–
ii) ಸಾಗರೋತ್ತರ	–	–	–	–	–	–	–	–	–
ಬಿ) ವೈಯಕ್ತಿಕ	–	–	–	–	–	–	–	–	–
i) ರೂ.1 ಲಕ್ಷ ದವರೆಗೆ ಅತ್ಯಲ್ಪ ಶೇರು ಬಂಡವಾಳ ಹೊಂದಿರುವ ವೈಯಕ್ತಿಕ ಶೇರುದಾರರು	–	–	–	–	–	–	–	–	–
ii) ರೂ.1 ಲಕ್ಷ ಮೀರಿದ ಅತ್ಯಲ್ಪ ಶೇರು ಬಂಡವಾಳ ಹೊಂದಿರುವ ವೈಯಕ್ತಿಕ ಶೇರುದಾರರು	–	–	–	–	–	–	–	–	–
ಸಿ) ಇತರೆ (ಸೂಚಿಸುವುದು)	–	–	–	–	–	–	–	–	–
ಉಪಮೊತ್ತ (ಬಿ)(2):	–	–	–	–	–	–	–	–	–
ಒಟ್ಟು ಸಾರ್ವಜನಿಕ ಶೇರುಹೊಂದುವಿಕೆ (ಬಿ)=(ಬಿ)(1)+(ಬಿ)(2)	–	–	–	–	–	–	–	–	–
ಸಿ.ಜಿಡಿಆರ್‌ಗಳು ಮತ್ತು ಎಡಿಆರ್ ಗಳಿಗಾಗಿ ಮೇಲ್ವಿಚಾರಕರು ಹೊಂದಿರುವ ಶೇರುಗಳು	–	–	–	–	–	–	–	–	–
ಒಟ್ಟು ಮೊತ್ತ (ಎ+ಬಿ+ಸಿ)	––	**5,00,030**	**5,00,030**	**100%**	––	**5,00,030**	**5,00,030**	**100%**	––

ii) ಪ್ರವರ್ತಕ ಶೇರು ಹೊಂದುವಿಕೆ:

ಕ್ರ. ಸಂ.	ಷೇರು ಹೊಂದಿರುವವರ ಹೆಸರು	ವರ್ಷಾರಂಭದಲ್ಲಿ ಹಿಡಿಯಲಾದ ಶೇರುಗಳ ಸಂಖ್ಯೆ			ವರ್ಷಾಂತ್ಯದಲ್ಲಿ ಹಿಡಿಯಲಾದ ಶೇರುಗಳ ಸಂಖ್ಯೆ			ವರ್ಷದ ಅವಧಿಯಲ್ಲಿ %ವಾರು ಬದಲಾವಣೆ
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಪ್ರತಿಶತ	ಅಡವಿಟ್ಟ ಷೇರುಗಳ ಪ್ರತಿಶತ/ಒಟ್ಟು ಷೇರುಗಳಿಗೆ ಹೊರೆ ಹೇರಲಾದುದು	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ %	ಅಡವಿಟ್ಟ ಷೇರುಗಳ ಪ್ರತಿಶತ/ಒಟ್ಟು ಷೇರುಗಳಿಗೆ ಹೊರೆ ಹೇರಲಾದುದು	
01	ಕರ್ನಾಟಕ ಸರ್ಕಾರದ ಕಾರ್ಯದರ್ಶಿ, ಇಂಧನ ಇಲಾಖೆ	10	0.002%	--	10	0.002%	--	--
02	ಕರ್ನಾಟಕ ಸರ್ಕಾರದ ರಾಜ್ಯಪಾಲರು	5,00,010	99.996%	--	5,00,010	99.996%	--	--
03	ವ್ಯವಸ್ಥಾಪಕ ನಿರ್ದೇಶಕರು, ಕ್ರೆಡೆಲ್	10	0.002%	--	10	0.002%	--	--

iii) ಪ್ರವರ್ತಕರ ಷೇರು ಹಿಡುವಳಿಗಳಲ್ಲಿ ಬದಲಾವಣೆ:

ಕ್ರ. ಸಂ.	ವಿವರಗಳು	ವರ್ಷಾರಂಭದಲ್ಲಿ ಹಿಡಿಯಲಾದ ಶೇರುಗಳ ಸಂಖ್ಯೆ		ವರ್ಷಾಂತ್ಯದಲ್ಲಿ ಹಿಡಿಯಲಾದ ಶೇರುಗಳ ಸಂಖ್ಯೆ	
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಪ್ರತಿಶತ	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಪ್ರತಿಶತ
1.	ವರ್ಷಾರಂಭದಲ್ಲಿ	ಪ್ರಸ್ತುತ ವರ್ಷದ ವರದಿಯಲ್ಲಿ ಪ್ರವರ್ತಕರ ಷೇರು ಹಿಡುವಳಿಗಳಲ್ಲಿ ಯಾವುದೇ ಬದಲಾವಣೆಗಳಿಲ್ಲ			
	ವರ್ಷಾವಧಿಯಲ್ಲಿ ದಿನಾಂಕವಾರು ಪ್ರವರ್ತಕರ ಷೇರುಗಳಲ್ಲಿ ಹೆಚ್ಚಳ/ಕಡಿತ, ಹೆಚ್ಚಳವಾಗುವಿಕೆ/ಕಡಿತಗೊಳ್ಳುವಿಕೆಗೆ ಕಾರಣಗಳನ್ನು ಸೂಚಿಸುವುದು (ಉದಾ: ಹಂಚಿಕೆ/ ವರ್ಗಾವಣೆ/ಬೋನಸ್/ಸ್ವೆಟ್ ಇಕ್ವಿಟಿ ಇತ್ಯಾದಿ)				
	ವರ್ಷಾಂತ್ಯದಲ್ಲಿ				

vi) ಅಗ್ರ ಹತ್ತು ಷೇರುದಾರರ ಷೇರು ಇಡುವಳಿ ಮಾದರಿ (ನಿರ್ದೇಶಕರು, ಪ್ರವರ್ತಕರು ಮತ್ತು ಜಿಡಿಆರ್ ಮತ್ತು ಎಡಿಆರ್ ಗಳನ್ನು ಹೊಂದಿರುವವರು ಹೊರತುಪಡಿಸಿ): ಇಲ್ಲ

ಕ್ರ. ಸಂ.	ವಿವರಗಳು	ವರ್ಷಾರಂಭದಲ್ಲಿ ಹಿಡಿಯಲಾದ ಶೇರುಗಳ ಸಂಖ್ಯೆ		ವರ್ಷಾಂತ್ಯದಲ್ಲಿ ಹಿಡಿಯಲಾದ ಶೇರುಗಳ ಸಂಖ್ಯೆ	
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಪ್ರತಿಶತ	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಪ್ರತಿಶತ
1.	ವರ್ಷಾರಂಭದಲ್ಲಿ	ಇಲ್ಲ			
	ವರ್ಷಾವಧಿಯಲ್ಲಿ ದಿನಾಂಕವಾರು ಪ್ರವರ್ತಕರ ಷೇರುಗಳಲ್ಲಿ ಹೆಚ್ಚಳ/ಕಡಿತ, ಹೆಚ್ಚಳವಾಗುವಿಕೆ/ಕಡಿತಗೊಳ್ಳುವಿಕೆಗೆ ಕಾರಣಗಳನ್ನು ಸೂಚಿಸುವುದು(ಉದಾ: ಹಂಚಿಕೆ/ ವರ್ಗಾವಣೆ/ಬೋನಸ್/ಸ್ವೆಟ್ ಇಕ್ವಿಟಿ ಇತ್ಯಾದಿ)				
	ವರ್ಷಾಂತ್ಯದಲ್ಲಿ (ಅಥವಾ ಬೇರ್ಪಟ್ಟ ದಿನಾಂಕದಂದು, ವರ್ಷದಲ್ಲಿ ಬೇರ್ಪಟ್ಟರೆ)				

v) ನಿರ್ದೇಶಕರು ಮತ್ತು ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಗಳ ಷೇರುದಾರ:

ಕ್ರ. ಸಂ.	ವಿವರಗಳು	ವರ್ಷಾರಂಭದಲ್ಲಿ ಹಿಡಿಯಲಾದ ಶೇರುಗಳ ಸಂಖ್ಯೆ		ವರ್ಷಾಂತ್ಯದಲ್ಲಿ ಹಿಡಿಯಲಾದ ಶೇರುಗಳ ಸಂಖ್ಯೆ	
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಪ್ರತಿಶತ	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಪ್ರತಿಶತ
01	ವ್ಯವಸ್ಥಾಪಕ ನಿರ್ದೇಶಕರು, ಕ್ರೆಡೆಲ್				
	ವರ್ಷಾರಂಭದಲ್ಲಿ	10	0.002%	10	0.002%
	ವರ್ಷಾವಧಿಯಲ್ಲಿ ದಿನಾಂಕವಾರು ಪ್ರವರ್ತಕರ ಷೇರುಗಳಲ್ಲಿ ಹೆಚ್ಚಳ/ಕಡಿತ, ಹೆಚ್ಚಳವಾಗುವಿಕೆ/ಕಡಿತಗೊಳ್ಳುವಿಕೆಗೆ ಕಾರಣಗಳನ್ನು ಸೂಚಿಸುವುದು(ಉದಾ: ಹಂಚಿಕೆ/ ವರ್ಗಾವಣೆ/ಬೋನಸ್/ಸ್ವೆಟ್ ಇಕ್ವಿಟಿ ಇತ್ಯಾದಿ)	–	–	–	–
	ವರ್ಷಾಂತ್ಯದಲ್ಲಿ	10	0.002%	10	0.002%

V. ಬಾಕಿ ಇರುವ ಸಾಲ:– ಇರುವುದಿಲ್ಲ.

ಬಡ್ಡಿ ಸೇರಿದಂತೆ ಕಂಪನಿಯ ಸಾಲ ಬಾಕಿ/ ಸಂಚಿತ ಆದರೇ ಪಾವತಿಗೆ ಕಾರಣ ಅಲ್ಲ

	ಠೇವಣಿಗಲನ್ನೊಳಗೊಂಡ ಸುರಕ್ಷಿತ ಸಾಲಗಳು	ಅಸುರಕ್ಷಿತ ಸಾಲಗಳು	ಠೇವಣಿಗಳು	ಒಟ್ಟು ಋಣ (ಸಾಲ) ಬಾರ
ವರ್ಷದ ಆರಂಭದಲ್ಲಿನ ಸಾಲ	–	–	–	–
ಅ) ಪ್ರಧಾನ ಮೊತ್ತ	–	–	–	–
ಆ) ಬಾಕಿ ಬಡ್ಡಿ ಆದರೇ ಪಾವತಿಸುವುದಿಲ್ಲ.	–	–	–	–
ಇ) ಸಂಚಿತ ಬಡ್ಡಿ ಆದರೇ ಬಾಕಿ ಇರುವುದಿಲ್ಲ	–	–	–	–
ಒಟ್ಟು (ಅ+ಆ+ಇ)	–	–	–	–
ಆರ್ಥಿಕ ವರ್ಷದ ಆರಂಭಿಕ ಸಾಲದ ಬದಲಾವಣೆ	–	–	–	–
* ಕೂಡುವುದು	–	–	–	–
* ಕಳೆಯುವುದು	–	–	–	–
ನಿವ್ವಳ ಬದಲಾವಣೆ	–	–	–	–
ಆರ್ಥಿಕ ವರ್ಷಾಂತ್ಯದಲ್ಲಿನ ಸಾಲ	–	–	–	–
ಅ) ಪ್ರಧಾನ ಮೊತ್ತ	–	–	–	–
ಆ) ಬಾಕಿ ಬಡ್ಡಿ ಆದರೇ ಪಾವತಿಸುವುದಿಲ್ಲ.	–	–	–	–
ಇ) ಸಂಚಿತ ಬಡ್ಡಿ ಆದರೇ ಬಾಕಿ ಇರುವುದಿಲ್ಲ	–	–	–	–
ಒಟ್ಟು (ಅ+ಆ+ಇ)	–	–	–	–

VI. ನಿರ್ದೇಶಕರ ಹಾಗೂ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯವರ ಸಂಭಾವನೆ:

ಅ. ವ್ಯವಸ್ಥಾಪಕ ನಿರ್ದೇಶಕರು, ವ್ಯವಸ್ಥಾಪಕರು, ನಿರ್ದೇಶಕರು ಮತ್ತು ಪ್ರಮುಖ ವ್ಯವಸ್ಥಾಪನಾ ಸಿಬ್ಬಂಧಿಗಳ ಸಂಭಾವನೆ

ಕ್ರ. ಸಂ.	ಸಂಭಾವನೆಯ ವಿವರಗಳು	ಹೆಸರು		ಒಟ್ಟು ಮೊತ್ತ
		ಶ್ರೀ. ಎ. ಬಿ. ಬಸವರಾಜು, ವ್ಯವಸ್ಥಾಪಕ ನಿರ್ದೇಶಕರು (31.12.2019 ವರೆಗೆ)	ಡಾ। ಹೆಚ್.ಬಿ.ಬೂದೆಪ್ಪ ವ್ಯವಸ್ಥಾಪಕ ನಿರ್ದೇಶಕರು (31.12.2019 ರಿಂದ)	
1	**ನಿವ್ವಳ ವೇತನ**	ರೂ. 10,00,631/–	ರೂ. 3,27,405/–	ರೂ. 13,28,036/–
	ಎ) ಆದಾಯ ತೆರಿಗೆ ಅಧಿನಿಯಮ, 1961 ರ ಪ್ರಕರಣ 17(1)ರ ನಿಬಂಧನೆಗಳಡಿಯಲ್ಲಿರುವಂತೆ ವೇತನ	–	–	
	ಬಿ) ಆದಾಯ ತೆರಿಗೆ ಅಧಿನಿಯಮ, 1961ರ ಪ್ರಕರಣ 17(2)ರಡಿಯಲ್ಲಿ ಮೇಲ್ಗಳಿಕೆ (perquisites)ಗಳ ಮೌಲ್ಯ			
	ಸಿ) ಆದಾಯತೆರಿಗೆ ಅದಿನಿಯಮ 1961ರ ಪ್ರಕರಣ 17(3) ರಡಿಯಲ್ಲಿ ವೇತನದ ಬದಲಾಗಿ ವೇತನ ಬದಲಾಗಿ ಲಾಭ			
2	ದಾಸ್ತಾನು ಆಯ್ಕೆ			
3	ಸ್ವೆಟ್ ಇಕ್ವಿಟಿ			
4	ಕಮಿಷನ್ – ಲಾಭದ ಪ್ರತಿಶತ – ಇತರೆ, ಸೂಚಿಸುವುದು			
05	ಇತರೆ, ದಯವಿಟ್ಟು ಸೂಚಿಸುವುದು	––		
	ಒಟ್ಟು (ಎ)	**ರೂ. 10,00,631/–**	**ರೂ. 3,27,405/–**	**ರೂ. 13,28,036/–**
	ಅಧಿನಿಯಮದ ಪ್ರಕಾರ ಮಿತಿ	**ಅನ್ವಯಿಸುವುದಿಲ್ಲ**		

ಆ). ಇತರ ನಿರ್ದೇಶಕರ ಸಂಭಾವನೆ: ಇಲ್ಲ

ಕ್ರ. ಸಂ.	ಸಂಭಾವನೆಯ ವಿವರಗಳು	ನಿರ್ದೇಶಕರ ಹೆಸರು	ಒಟ್ಟು ಮೊತ್ತ
01	ಸ್ವತಂತ್ರ ನಿರ್ದೇಶಕರು	ಇಲ್ಲ	
	ಮಂಡಳಿ ಸಮಿತಿ ಸಭೆಗಳಿಗೆ ಹಾಜರಾಗಲು ಶುಲ್ಕ		
	ಅಧಿಕಾರ ಪಡೆದ ಮಂದಿ		
	ಇತರೆ, ದಯವಿಟ್ಟು ಸೂಚಿಸುವುದು		
	ಒಟ್ಟು (1)		
02	ಇತರ ಕಾರ್ಯನಿರ್ವಾಹಕ ನಿರ್ದೇಶಕರು		
	ಮಂಡಳಿ ಸಮಿತಿ ಸಭೆಗಳಿಗೆ ಹಾಜರಾಗಲು ಶುಲ್ಕ		
	ಅಧಿಕಾರ ಪಡೆದ ಮಂದಿ		
	ಇತರೆ, ದಯವಿಟ್ಟು ಸೂಚಿಸುವುದು		
	ಒಟ್ಟು (2)		
	ಒಟ್ಟು (ಆ)=(1+2)		
	ಒಟ್ಟು ವ್ಯವಸ್ಥಾಪಕ ಸಂಭಾವನೆ		
	ಅಧಿನಿಯಮದ ಪ್ರಕಾರ ಮಿತಿ	ಅನ್ವಯಿಸುವುದಿಲ್ಲ	

ಸಿ. ವ್ಯ.ನಿ/ವ್ಯವಸ್ಥಾಪಕರು/ಡಬ್ಲೂಟಿಡಿ ಬಿಟ್ಟು ಬೇರೆ ಪ್ರಮುಖ ವ್ಯವಸ್ಥಾಪನಾ ಸಿಬ್ಬಂಧಿಗಳ ಸಂಭಾವನೆ ಅನ್ವಯಿಸುವುದಿಲ್ಲ.

ಕ್ರ. ಸಂ.	ಸಂಭಾವನೆಯ ವಿವರಗಳು	ನಿರ್ದೇಶಕರ ಹೆಸರು			
		ಸಿಇಒ	ಸಿಎಸ್	ಸಿಎಫ್ಒ	ಒಟ್ಟು
1	ನಿವ್ವಳ ವೇತನ	ಅನ್ವಯಿಸುವುದಿಲ್ಲ			
	ಎ) ಆದಾಯ ತೆರಿಗೆ ಅಧಿನಿಯಮ, 1961ರ ಪ್ರಕರಣ 17(1)ರ ನಿಬಂಧನೆಗಳಡಿಯಲ್ಲಿರುವಂತೆ ವೇತನ				
	ಬಿ) ಆದಾಯ ತೆರಿಗೆ ಅಧಿನಿಯಮ, 1961ರ ಪ್ರಕರಣ 17(2)ರಡಿಯಲ್ಲಿ ಮೇಲ್ಗಳಿಕೆ (perquisites)ಗಳ ಮೌಲ್ಯ				
	ಸಿ) ಆದಾಯತೆರಿಗೆ ಅದಿನಿಯಮ 1961ರ ಪ್ರಕರಣ 17(3) ರಡಿಯಲ್ಲಿ ವೇತನದ ಬದಲಾಗಿ ವೇತನ ಬದಲಾಗಿ ಲಾಭ				
2	ದಾಸ್ತಾನು ಆಯ್ಕೆ				
3	ಸ್ವೆಟ್ ಇಕ್ವಿಟಿ				
4	ಕಮಿಷನ್ – ಲಾಭದ ಪ್ರತಿಶತ ಎಂದು – ಇತರೆ, ಸೂಚಿಸುವುದು				
5	ಇತರೆ, ದಯವಿಟ್ಟು ಸೂಚಿಸುವುದು				
	ಒಟ್ಟು				

VII. ದಂಡಗಳು/ಶಿಕ್ಷೆ/ಅಪರಾಧಗಳ ಸಂಯೋಜನೆ: ಇಲ್ಲ

ವಿಧ	ಕಂಪನಿಗಳ ಅಧಿನಿಯಮದ ಆಯ್ಕೆ	ಸಂಕ್ಷಿಪ್ತ ವಿವರಣೆ	ದಂಡದ ವಿವರಗಳು/ ಶಿಕ್ಷೆ/ ವಿಧಿಸಲಾದ ಸಂಯೋಜಿತ ಶುಲ್ಕ	ಪ್ರಾಧಿಕಾರ (ಆರ್‌ಡಿ/ ಎನ್‌ಸಿಎಲ್‌ಟಿ/ ನ್ಯಾಯಾಲಯ	ಯಾವುದಾದರೂ ಮೇಲ್ಮನವಿ ಮಾಡಿದ್ದರೆ (ವಿವರಗಳನ್ನು ಒದಗಿಸಿ)
ಎ. ಕಂಪನಿ	ಇಲ್ಲ				
ದಂಡ					
ಶಿಕ್ಷೆ					
ಸಂಯೋಜನೆ					
ಬಿ. ನಿರ್ದೇಶಕರು	ಇಲ್ಲ				
ದಂಡ					
ಶಿಕ್ಷೆ					
ಸಂಯೋಜನೆ					
ಸಿ. ಕರ್ತವ್ಯಲೋಪವೆಸಗಿರುವ ಇತರೆ ಅಧಿಕಾರಿಗಳು	ಇಲ್ಲ				
ದಂಡ					
ಶಿಕ್ಷೆ					
ಸಂಯೋಜನೆ					

ಮಂಡಳಿಗಾಗಿ ಮತ್ತು ಮಂಡಳಿ ಪರವಾಗಿ

ಸಹಿ/–
(ಚಂದ್ರಕಾಂತ್ ಬಸವರಾಜ್ ಪಾಟೀಲ್)
ಅಧ್ಯಕ್ಷರು
(ಡಿಐನ್ : 02304375)

ದಿನಾಂಕ: 15ನೇ ಡಿಸೆಂಬರ್, 2020.

ಅನುಬಂಧ – II

ಮಂಡಳಿಯ ವರದಿಯಲ್ಲಿ ಸೇರಿಸಬೇಕಾದ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಮೇಲಿನ ವಾರ್ಷಿಕ ವರದಿಯ ನಮೂನೆ

1. ಕಂಪನಿಯಿಂದ ಕೈಗೆತ್ತಿಕೊಳ್ಳಲು ಉದ್ದೇಶಿಸಲಾದ ಯೋಜನೆಗಳ ಅಥವಾ ಕಾರ್ಯಕ್ರಮಗಳ ಅವಲೋಕನವನ್ನೊಳಗೊಂಡ ಕಂಪನಿಯ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (ಸಿ.ಎಸ್.ಆರ್.ಪಾಲಿಸಿ) ನೀತಿಯ ಸಂಕ್ಷಿಪ್ತ ರೂಪರೇಖೆ ಮತ್ತು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ (ಸಿ.ಎಸ್.ಆರ್.ಪಾಲಿಸಿ) ನೀತಿ ಮತ್ತು ಯೋಜನೆ ಅಥವಾ ಕಾರ್ಯಕ್ರಮಗಳ ವೆಬ್ ಜೋಡಣೆಗೆ ಆದ್ಯತೆ.

ಅ) ಕಂಪನಿಯು ಹಮ್ಮಿಕೊಳ್ಳಲಾದ ಚಟುವಟಿಕೆಗಳಿಗೆ ಕಂಪನಿಯು ತನ್ನದೇ ಆದ ಹೆಚ್ಚು ಪ್ರಸ್ತುತವೆನಿಸುವ ಒಂದು ನೀತಿಯನ್ನು ಹೊಂದಿರತಕ್ಕದ್ದು.

ಆ) ಕಂಪನಿಯ ಕಾರ್ಯ ಚಟುವಟಿಕೆಗಳು ರಾಜ್ಯದಾದ್ಯಂತ ಹರಡಿರುವುದರಿಂದ ಈ ಯೋಜನೆಯನ್ನು ರಾಜ್ಯದಾದ್ಯಂತ ಫಲಾನುಭವಿಗಳಿಗೆ ವಿಸ್ತರಿಸತಕ್ಕದ್ದು.

ಇ) ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (ಸಿ.ಎಸ್.ಆರ್.) ಅಡಿಯಲ್ಲಿ ನೀಡಲಾದ ನಿಧಿಗಳ ಸರಿಯಾದ ಬಳಕೆಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ಮತ್ತು ಫಲಾನುಭವಿ ಸಂಸ್ಥೆಯ ನಡುವೆ ಒಂದು ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.

ಈ) ಫಲಾನುಭವಿಗಳಿಂದ ಚಾರ್ಟರ್ಡ್ ಅಕೌಂಟಂಟ್ ಒಬ್ಬರಿಂದ ದೃಢೀಕರಿಸಲ್ಪಟ್ಟ ಬಳಕೆ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

ಉ) ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನೀತಿಯಡಿ ಹಸಿವು ನಿರ್ಮೂಲನೆಯನ್ನು ಸೇರ್ಪಡೆಗೊಳಿಸತಕ್ಕದ್ದು ಮತ್ತು ಕಾಲಕಾಲಕ್ಕೆ ಕಂಪನಿಯ ಅಧಿನಿಯಮ, 2013ರ ಅನುಸೂಚಿ–VII ರಲ್ಲಿ ಬದಲಾವಣೆಯಾದಾಗ ಇದನ್ನು ಸದ್ಯೋಚಿತ (update) ಗೊಳಿಸತಕ್ಕದ್ದು.

2. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿ (CSR Committee) ಯ ಸಂಯೋಜನೆ:

2019–20ನೇ ಆರ್ಥಿಕ ವರ್ಷದಲ್ಲಿ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (CSR) ಸಮಿತಿಯ ಸದಸ್ಯರುಗಳು ಈ ಕೆಳಕಂಡಂತೆ ಇರುತ್ತಾರೆ.

ಶ್ರೀಮತಿ ಸ್ಮಿತ ಬಿಜ್ಜೂರ್, ಐ.ಎಫ್.ಎಸ್.	:	ಸಮಿತಿಯ ಅಧ್ಯಕ್ಷರು
ಡಾ। ಹೆಚ್.ಬಿ. ಬೂದೆಪ್ಪ, ಕೆ.ಎ.ಎಸ್.	:	ಸಮಿತಿಯ ಸದಸ್ಯರು
ಶ್ರೀ ರಾಜ್‌ಕುಮಾರ್ ಎಸ್ ಬಿರದರ್	:	ಸಮಿತಿಯ ಸದಸ್ಯರು

3. ಕಳೆದ ಮೂರು ಆರ್ಥಿಕ ವರ್ಷಗಳ ಕಂಪನಿಯ ಸರಾಸರಿ ನಿವ್ವಳ ಲಾಭ

(ರೂ. ಲಕ್ಷಗಳಲ್ಲಿ)

ವರ್ಷ	ನಿವ್ವಳ ಆದಾಯ	3 ವರ್ಷದ ಸರಾಸರಿ	ಶೇ 2ಕ್ಕೆ ಸಿಎಸ್‌ಆರ್ ಯೋಜನೆಗೆ ಲಭ್ಯವಿರುವ ಮೊತ್ತ
2016–17	6858.78		
2017–18	6905.63		
2018–19	5941.94		
ಒಟ್ಟು	**19706.35**	**6568.78**	**131.38**

4. **ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ ನಿಗದಿತ ಖರ್ಚು (ಮೇಲಿನ ಐಟಂ ನಂ.(3) ರಲ್ಲಿರುವಂತೆ ಒಟ್ಟು ನಿವ್ವಳ ಲಾಭ ಮೊತ್ತದ 2% ಪ್ರತಿಶತ)**
   ರೂ. 131.38 ಲಕ್ಷಗಳು

5. **ಸಾಂ.ಸಾ.ಜ (ಸಿಎಎಸ್‌ಆರ್) ಅಡಿ ಆರ್ಥಿಕ ವರ್ಷದಲ್ಲಿ ಮಾಡಲಾದ ಖರ್ಚಿನ ವಿವರಗಳು**
   ಎ) ಆರ್ಥಿಕ ವರ್ಷದಲ್ಲಿ ವ್ಯಯಿಸಬೇಕಾದ ಒಟ್ಟು ಮೊತ್ತ : ರೂ. 131.38 ಲಕ್ಷಗಳು
   ಬಿ) ಖರ್ಚಾಗದೇ ಇರುವ ಮೊತ್ತ: ಇಲ್ಲ.
   ಸಿ) ಆರ್ಥಿಕ ವರ್ಷದಲ್ಲಿ ಯಾವ ರೀತಿ ಹಣವನ್ನು ಖರ್ಚು ಮಾಡಲಾಗಿದೆ ಎಂಬುದನ್ನು ಅನುಬಂಧ– III ರಲ್ಲಿ ಒದಗಿಸಲಾಗಿದೆ.

(1)	(2)	(3)	(4)	(5)	(6)	(7)	(8)
ಕ್ರ. ಸಂ.	ಗುರುತಿಸಲಾದ ಸಿಎಸ್‌ಆರ್ ಯೋಜನೆ ಅಥವಾ ಚಟುವಟಿಕೆ	ಯೋಜನೆಯನ್ನೊಳಗೊಂಡ ವಲಯ	ಯೋಜನೆ ಅಥವಾ ಕಾರ್ಯಕ್ರಮಗಳು (1)ಸ್ಥಳೀಯ ಪ್ರದೇಶ ಅಥವಾ (2)ಯೋಜನೆಯನ್ನು ಕೈಗೆತ್ತಿಕೊಂಡ ರಾಜ್ಯ ಮತ್ತು ಜಿಲ್ಲೆ ಯನ್ನು ಸೂಚಿಸುವುದು.	ಹೂಡಲಾದ ಹಣದ ಮೊತ್ತ (ಬಜೆಟ್) ಯೋಜನೆ ಅಥವಾ ಕಾರ್ಯಕ್ರಮವಾರು	ಯೋಜನೆ ಅಥವಾ ಕಾರ್ಯಕ್ರಮದ ಮೇಲೆ ಖರ್ಚು ಮಾಡಲಾದ ಹಣದ ಮೊತ್ತ ಉಪ ಶೀರ್ಷಿಕೆ: (1)ಯೋಜನೆ ಅಥವಾ ಕಾರ್ಯಕ್ರಮದ ಮೇಲೆ ನೇರ ಖರ್ಚು (2)ಲೆಕ್ಕಕ್ಕೆ ತೆಗೆದುಕೊಳ್ಳದ ಅನಿವಾರ್ಯ ವೆಚ್ಚ (overhead)	ವರದಿಯ ಅವಧಿಯವರೆಗೆ ಸಂಚಿತ ಖರ್ಚು	ಖರ್ಚು ಮಾಡಲಾದ ಮೊತ್ತ : ನೇರ ಅಥವಾ ಅನುಷ್ಠಾನಗೊಳಿಸುವ ಸಂಸ್ಥೆಯ ಮೂಲಕ
ವಿವರಗಳು ಅನುಬಂಧ– III ರಲ್ಲಿ ಒದಗಿಸಲಾಗಿದೆ							

6. **ಕಂಪನಿಯು ಕಳೆದ ಮೂರು ಹಣಕಾಸು ವರ್ಷಗಳಲ್ಲಿನ ಸರಾಸರಿ ನಿವ್ವಳ ಲಾಭದ ಶೇಕಡ 2 ರಷ್ಟು ಅಥವಾ ಯಾವುದೇ ಭಾಗದ ಮೊತ್ತವನ್ನು ಬಳಸಿಕೊಳ್ಳಲು (ಖರ್ಚು ಮಾಡಲು) ವಿಫಲವಾದಲ್ಲಿ ಕಂಪನಿಗಳ ಕಾಯಿದೆ 2013ರ ಪರಿಚ್ಛೇದ 135(5) ರಂತೆ ತನ್ನ ಮಂಡಳಿ ವರದಿಗಳಲ್ಲಿ ಕಾರಣಗಳನ್ನು ನೀಡುವುದು.**

   ಕಳೆದ ಮೂರು ಹಣಕಾಸು ವರ್ಷದಲ್ಲಿ ಸಿಎಸ್‌ಆರ್ ಕಾರ್ಯಗಳಿಗಾಗಿ ಬಿಡುಗಡೆ ಮಾಡಿದ ಮೊತ್ತದಲ್ಲಿ ಬಳಸದೆ ಉಳಿದಿರುವ ಮೊತ್ತದೊಂದಿಗೆ ರೂ. 131.38 ಲಕ್ಷಗಳ ವಿರುದ್ಧದ ಸರಾಸರಿ ನಿವ್ವಳ ಲಾಭದ ಶೇಕಡ 2 ರ ಮೊತ್ತ ರೂ. 169.50 ಲಕ್ಷಗಳನ್ನು ಸಂಸ್ಥೆಯು ಸಿಎಸ್‌ಆರ್ ಕಾರ್ಯಗಳಿಗಾಗಿ ಖರ್ಚು ಮಾಡಿದೆ . ಆದ್ದರಿಂದ ಕಂಪೆನಿಯ ಕಾಯ್ದೆ, 2013 ರ ಸೆಕ್ಷನ್ 135 ರ ನಿಬಂಧನೆಗಳ ಅನುಸಾರವಾಗಿ ಕಂಪನಿಯು ಕಳೆದ ಮೂರು ಹಣಕಾಸು ವರ್ಷಗಳಲ್ಲಿ ಸರಾಸರಿ ನಿವ್ವಳ ಲಾಭದ ಎರಡು ಶೇಕಡಾವನ್ನು ವರದಿಯ ಅಡಿಯಲ್ಲಿ ಖರ್ಚು ಮಾಡಿದೆ.

7. **ಸಿಎಸ್‌ಆರ್ ಸಮಿತಿಯ ಅನುಷ್ಠಾನ ಹಾಗೂ ಅದರ ಕಾರ್ಯನೀತಿ ಮೇಲ್ವಿಚಾರಣೆಯು ಸಿಎಸ್‌ಆರ್ ಸಮಿತಿಯ ಉದ್ದೇಶಗಳು ಹಾಗೂ ಕಂಪನಿಯ ಕಾರ್ಯ ನೀತಿಯನ್ನು ಅನುಸರಿಸುವುದು ಒಂದು ಜವಬ್ದಾರಿ ಹೇಳಿಕೆ.**

   ಸಂಸ್ಥೆಯ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ ಉದ್ದೇಶ ಹಾಗೂ ನೀತಿಯಂತೆ ಸಿಎಸ್‌ಆರ್ ಕಾರ್ಯಗಳನ್ನು ಸಂಸ್ಥೆಯಿಂದ ಕೈಗೊಂಡಿರುವುದಾಗಿ ಈ ಮೂಲಕ ಘೋಷಿಸಲಾಗಿದೆ.

ಮಂಡಳಿಗಾಗಿ ಮತ್ತು ಮಂಡಳಿ ಪರವಾಗಿ

ಸಹಿ/–

(ಚಂದ್ರಕಾಂತ್ ಬಸವರಾಜ್ ಪಾಟೀಲ್)

ಅಧ್ಯಕ್ಷರು

ದಿನಾಂಕ: 15ನೇ ಡಿಸೆಂಬರ್, 2020. **(ಡಿಐನ್ : 02304375)**

ಅನುಬಂಧ – III

1	2	3	4	5	6	7
ಕ್ರ. ಸಂ.	ಗುರುತಿಸಲಾದ ಸಿಎಸ್‌ಆರ್ ಯೋಜನೆ ಅಥವಾ ಚಟುವಟಿಕೆ	ಯೋಜನೆಯ ನ್ನೊಳಗೊಂಡ ವಲಯ	ಯೋಜನೆ ಅಥವಾ ಕಾರ್ಯಕ್ರಮಗಳು (1) ಸ್ಥಳೀಯ ಪ್ರದೇಶ ಅಥವಾ (2) ಯೋಜನೆಯನ್ನು ಕೈಗೆತ್ತಿಕೊಂಡ ರಾಜ್ಯ ಮತ್ತು ಜಿಲ್ಲೆ ಯನ್ನು ಸೂಚಿಸುವುದು.	ಹೂಡಲಾದ ಹಣದ ಮೊತ್ತ (ಬಜೆಟ್) ಯೋಜನೆ ಅಥವಾ ಕಾರ್ಯಕ್ರಮ ವಾರು	ವರದಿಯ ಅವಧಿಯವರೆಗೆ ಸಂಚಿತ ಖರ್ಚು	ಖರ್ಚು ಮಾಡಲಾದ ಮೊತ್ತ : ನೇರ ಅಥವಾ ಅನುಷ್ಠಾನ ಗೊಳಿಸುವ ಸಂಸ್ಥೆಯ ಮೂಲಕ
1	ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್, ಶಾಂತಿನಗರ ಬೆಂಗಳೂರು	1. ನೆಲವಾಗಿಲು, ನೆಲವಾಗಿಲು ಗ್ರಾಮಪಂಚಾಯತಿ ಶಿಕಾರಿಪುರ ತಾಲೂಕು, ಶಿವಮೊಗ್ಗ ಜಿಲ್ಲೆ.	ಕುಡಿಯಲು ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಲು	4,500,000	4,500,000	4,500,000
		2. ಮುಚುಡಿ ಹಳ್ಳಿ, ಅಗ್ರಹಾರ ಇನಮುತ್ತಳ್ಳಿ, ಶಿಕಾರಿಪುರ ತಾಲೂಕು, ಶಿವಮೊಗ್ಗ ಜಿಲ್ಲೆ.				
		3. ಅಡಗಂತಿ ಗ್ರಾಮ ಚಿಕ್ಕಜಾಂಬೂರು ಗ್ರಾಮಪಂಚಾಯತಿ, ಶಿಕಾರಿಪುರ ತಾಲೂಕು, ಶಿವಮೊಗ್ಗ ಜಿಲ್ಲೆ.				
		4. ಕೊಲ್ಲುಗಣಸಿ, ಬೆಲ್ವಾಣಿ ಗ್ರಾಮಪಂಚಾಯತಿ, ಸೊರಬ ತಾಲೂಕು, ಶಿವಮೊಗ್ಗ ಜಿಲ್ಲೆ.				
2	ನಿರ್ಮಿತಿ ಕೇಂದ್ರ, ಶಿವಮೊಗ್ಗ	ಸುಣ್ಣದಕೊಪ್ಪ ಗ್ರಾಮಪಂಚಾಯತಿ, ಶಿಕಾರಿಪುರ ತಾಲೂಕು, ಶಿವಮೊಗ್ಗ ಜಿಲ್ಲೆ	ಗ್ರಾಮದ ಸಮುದಾಯ ಕಲ್ಯಾಣಕ್ಕಾಗಿ ಸಾಂಪ್ರದಾಯಿಕ ಸಭಾಂಗಣವನ್ನು ನಿರ್ಮಿಸಲು ರೂ. 20. ಲಕ್ಷಗಳು	20,00,000	2,000,000	2,000,000

3	ಮುಖ್ಯ ಅಧಿಕಾರಿ ಪುರಸಭೆ ಕಛೇರಿ (ಟಿಎಂಸಿ) ಪಾವಗಡ	ವಾರ್ಡ್ ಸಂಖ್ಯೆ–5, ಪುರಸಭೆ ಕಛೇರಿ, ಪಾವಗಡ–561202 ತುಮಕೂರು ಜಿಲ್ಲೆ.	ವಾರ್ಡ್ ಸಂಖ್ಯೆ–5 ಕ್ರೀಡಾಂಗಣ ದ ಹಿಂಬದಿ ವಲಯದಲ್ಲಿ ಸಿಸಿ ಡ್ರೈನೇಜ್ ಮತ್ತು ಕವರಿಂಗ್ ಸ್ಲ್ಯಾಬ್ ಒದಗಿಸಲು ರೂ. 12.00 ಲಕ್ಷಗಳು.	12,00,000	12,00,000	12,00,000
4	ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್, ಶಾಂತಿನಗರ ಬೆಂಗಳೂರು	ವಿದ್ಯಾಪೀಠ ಡೋಂಗಾವ್, ಕಮಲನಗರ ತಾಲ್ಲೂಕು ಬೀದರ್ ಜಿಲ್ಲೆ.	ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹವಾಗಿ ಸ್ವಾಮಿ ಗುರುಕುಲದಲ್ಲಿ ಸೌರ ಮೇಲ್ಛಾವಣಿ ಮತ್ತು ಪೀಠೋಪಕರಣಗಳನ್ನು ಸ್ಥಾಪಿಸಲು.	4,72,000	4,72,000	4,72,000
5	ಯೋಜನಾ ಅಭಿಯಂತರರು, ನಿರ್ಮಿತಿ ಕೇಂದರ, ಕಾಲದೊಡ್ಡಿ, ಇಂಡಕಲ್ ಪೋಸ್ಟ್ ಚಿಕ್ಕಮಗಳೂರು	ಗಿರಿಯಪುರ –577550, ಚಿಕ್ಕಮಗಳೂರು ಜಿಲ್ಲೆ	ಈಗಿರುವ ಶರ್ಟೀ ಮಲ್ಲಿಕಾಂಬಾ ಸಮುದಾಯ ಭವನಕ್ಕೆ ನೈರ್ಮಲ್ಯ ನೀರು ಮತ್ತು ಶೌಚಾಲಯಗಳನ್ನು ನಿರ್ಮಿಸಲು	8,00,000	8,00,000	8,00,000
6	ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್, ಶಾಂತಿನಗರ ಬೆಂಗಳೂರು	ನವಲಘಟ್ಟಿ, ಬೈಲಹೊಂಗಾಳ ತಾಲ್ಲೂಕು, ಬೆಳಗಾವಿ ಜಿಲ್ಲೆ.	ಪ್ರೊಜೆಕ್ಟರ್ ಅನ್ನು ಸ್ಕ್ರೀನ್, ಕಂಪ್ಯೂಟರ್, ಪ್ರಿಂಟರ್, ಮೈಕ್ ಸೆಟ್ನೊಂದಿಗೆ ಆಂಪ್ಲಿಫಯರ್, ಇನ್ವರ್ಟರ್, ವಾಟರ್ ಪ್ಯೂರಿಫೈಯರ್, ಲ್ಯಾಪ್ಟಾಪ್, ಕಂಪ್ಯೂಟರ್ ಟೇಬಲ್ ಅನ್ನು ಶಾಲೆಗೆ ಒದಗಿಸಲು.	4,99,140	4,99,140	4,99,140
7	ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್, ಶಾತಿನಗರ ಬೆಂಗಳೂರು	ಬಂಬಲ್ವಾಡ–591226, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ	ಕಂಪ್ಯೂಟರ್, ಪ್ರಿಂಟರ್, ಮೈಕ್ ಸೆಟ್ನೊಂದಿಗೆ ಆಂಪ್ಲಿಫಯರ್, ವಾಟರ್ ಪ್ಯೂರಿಫೈಯರ್, ಲ್ಯಾಪ್ಟಾಪ್, ಪ್ರೊಜೆಕ್ಟರ್ ಅನ್ನು ಪರದೆಯೊಂದಿಗೆ ಶಾಲೆಗೆ ಒದಗಿಸಲು.	4,99,140	4,99,140	4,99,140
8	ಪಂಚಾಯತ್ ಅಭಿವೃದ್ಧಿ ಅಧಿಕಾರಿ, (ಪಿಡಿಒ), ವಿಜಾಪುರ ಪಂಚಾಯತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.	ಗ್ರಾಮಪಂಚಾಯತಿ ಕಛೇರಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.	ವಿಜಾಪುರ ಪಾಂಚಾಯತಿ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ದುರಸ್ಥಿಗೊಳಿಸಲು ಹಾಗೂ ಗಣಕಯಂತ್ರಗಳನ್ನು ಒದಗಿಸಲು ರೂ. 15.00 ಲಕ್ಷಗಳು.	15,00,000	15,00,000	15,00,000

9	ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್, ಶಾಂತಿನಗರ ಬೆಂಗಳೂರು	ಭದ್ರ ಮೇಲ್ದಂಡೆ ಯೋಜನಾ ಸಮಿತಿ ದಾವಣಗೆರೆ ಜಿಲ್ಲೆ.	ಜಗಳೂರು ತಾಲ್ಲೂಕು, ಮೆಡಿಕೇರನಹಳ್ಳಿ ಮತ್ತು ಗ್ರಾಮಗಳ ಸರ್ಕಾರಿ ಶಾಲೆಗಳಿಗೆ ಉತ್ತಮ ಶಿಕ್ಷಣ ಒದಗಿಸಲು	9,79,400	9,79,400	9,79,400
10	ಯೋಜನಾ ಅಭಿಯಂತರರು, ನಿರ್ಮಿತಿ ಕೇಂದ್ರ, ಮೇದಹಳ್ಳಿ, ಚಿತ್ರದುರ್ಗ	ನೇರಳಕೆರೆ, ಹೊಸದುರ್ಗ ತಾಲ್ಲೂಕು. ಚಿತ್ರದುರ್ಗ ಜಿಲ್ಲೆ.	ಸರ್ಕಾರಿ ಶಾಲೆಗಳಿಗೆ ಉನ್ನತ ಪ್ರಾಥಮಿಕ ನವೀಕರಣ ಮತ್ತು ಮೂಲ ಸೌಕರ್ಯ ಅಭಿವೃದ್ಧಿಗಳಿಗಾಗಿ	10,00,000	10,00,000	10,00,000
11	ಯೋಜನಾ ಅಭಿಯಂತರರು, ನಿರ್ಮಿತಿ ಕೇಂದರ, ಕಾಲದೊಡ್ಡಿ, ಇಂಡಕಲ್ ಪೋಸ್ಟ್ ಚಿಕ್ಕಮಗಳೂರು	ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.	ಸರ್ಕಾರಿ ಶಾಲೆಗಳಿಗೆ ಉನ್ನತ ಪ್ರಾಥಮಿಕ ನವೀಕರಣ ಮತ್ತು ಮೂಲ ಸೌಕರ್ಯ ಅಭಿವೃದ್ಧಿಗಳಿಗಾಗಿ	10,00,000	10,00,000	10,00,000
12	ನಿರ್ಮಿತಿ ಕೇಂದ್ರ, ಶಿವಮೊಗ್ಗ	ಶುಗರ್ ಲೋವರ್ ವಿಲ್ಲಾ, ಶಿವಮೊಗ್ಗ ತಾಲ್ಲೂಕು	ಸರ್ಕಾರಿ ಶಾಲೆಗಳಿಗೆ ಉನ್ನತ ಪ್ರಾಥಮಿಕ ನವೀಕರಣ ಮತ್ತು ಮೂಲ ಸೌಕರ್ಯ ಅಭಿವೃದ್ಧಿಗಳಿಗಾಗಿ	10,00,000	10,00,000	10,00,000
13	ಅಧ್ಯಕ್ಷರು, ನಿರ್ಮಿತಿ ಕೇಂದ್ರ, ಹಿರೆಹಳ್ಳಿ, ಕೈಗಾರಿಕ ವಲಯ ತುಮಕೂರು.	ಚಿಕ್ಕ ನಾಗಮಂಗಲ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ.	ಸರ್ಕಾರಿ ಶಾಲೆಗಳಿಗೆ ಉನ್ನತ ಪ್ರಾಥಮಿಕ ನವೀಕರಣ ಮತ್ತು ಮೂಲ ಸೌಕರ್ಯ ಅಭಿವೃದ್ಧಿಗಳಿಗಾಗಿ	15,00,000	15,00,000	15,00,000
			ಒಟ್ಟು ರೂ.	**1,69,49,680**	**1,69,49,680**	**16,949,680**

ಭಾರತದ ನಿಯಂತ್ರಕ ಮತ್ತು ಮಹಾಲೇಖಾ ಪರೀಕ್ಷಕರ ವ್ಯಾಖ್ಯಾನ

ಸ್ವತಂತ್ರ ಹಣಕಾಸಿನ ವಿವರಗಳು

31ನೇ ಮಾರ್ಚ್ 2020ಕ್ಕೆ ಕೊನೆಗೊಂಡ ವರ್ಷಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು, ಇದರ ಹಣಕಾಸು ವಿವರಣೆಗಳ ಲೆಕ್ಕ ಪರಿಶೋಧನೆಯ ಕಂಪನಿಗಳ ಅಧಿನಿಯಮದ ಪ್ರಕರಣ 143(6)(ಬಿ)ರ ಅಡಿಯಲ್ಲಿ, ಭಾರತದ ನಿಯಂತ್ರಕ ಮತ್ತು ಮಹಾಲೇಖಾ ಪರೀಕ್ಷಕರ ವ್ಯಾಖ್ಯಾನ.

2013ನೇ ಸಾಲಿನ ಕಂಪನಿಗಳ ಅಧಿನಿಯಮದಲ್ಲಿ ಗೊತ್ತುಪಡಿಸಲಾದ ಹಣಕಾಸು ವರದಿ ಮಾಡುವಿಕೆ ಚೌಕಟ್ಟಿನ ಅನುಸಾರವಾಗಿ 31ನೇ ಮಾರ್ಚ್, 2020ಕ್ಕೆ ಕೊನೆಗೊಂಡ ವರ್ಷಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇದರ ಹಣಕಾಸು ವಿವರ ಪತ್ರವನ್ನು ಸಿದ್ಧಪಡಿಸುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ಅಧಿನಿಯಮದ ಪ್ರಕರಣ 129(4) ರೊಂದಿಗೆ ಈದಲಾದ ಪ್ರಕರಣ 139(5) ರಡಿಯಲ್ಲಿ ಭಾರತದ ನಿಯಂತ್ರಕ ಮತ್ತು ಮಹಾಲೇಖಾ ಪರೀಕ್ಷಕರಿಂದ ನೇಮಕ ಮಾಡಲಾದ ಶಾಸನಬದ್ಧ ಲೆಕ್ಕಪರಿಶೋಧಕರ ಹಣಕಾಸು ವಿವರಣ ಪತ್ರದ ಮೇಲೆ ಅಧಿನಿಯಮದ ಪ್ರಕರಣ 143ರ ಅಡಿಯಲ್ಲಿ ಸ್ವತಂತ್ರ ಲೆಕ್ಕಪರಿಶೋಧನೆ ಆಧಾರದ ಮೇಲೆ ಲೆಕ್ಕಪರಿಶೋಧನಾ ಗುಣಮಟ್ಟವನ್ನು ಅಧಿನಿಯಮದ ಪ್ರಕರಣ 143(10) ರಡಿಯಲ್ಲಿ ನಿಗದಿಪಡಿಸಿರುವಂತೆ ಅಭಿಪ್ರಾಯ ವ್ಯಕ್ತಪಡಿಸಲು ಜವಾಬ್ದಾರರಾಗಿರುತ್ತಾರೆ. ದಿನಾಂಕ 30 ಸೆಪ್ಟೆಂಬರ್ 2020ರ ಲೆಕ್ಕಪರಿಶೋಧನಾ ವರದಿಯನ್ನು ರದ್ದು ಪಡಿಸಿ 25ನೇ ನವೆಂಬರ್ 2020 ರಂದು ಪರಿಷ್ಕೃತ ಲೆಕ್ಕಪರಿಶೋಧನಾ ವರದಿಯನ್ನು ಮಾಡಲಾಗಿದೆಯೆಂದು ಹೇಳಲಾಗಿದೆ.

ಭಾರತದ ನಿಯಂತ್ರಕರು ಮತ್ತು ಮಹಾಲೇಖಾ ಪರೀಕ್ಷಕರ ಪರವಾಗಿ ನಾನು 2013ನೇ ಸಾಲಿನ ಕಂಪನಿಗಳ ಅಧಿನಿಯಮದ ಪ್ರಕರಣ 143(6)(ಬಿ) ಅಡಿಯಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ 31 ಮಾರ್ಚ್ 2020 ಕ್ಕೆ ಕೊನೆಗೊಂಡ ವರ್ಷದ ಹಣಕಾಸು ವಿವರಣೆಗಳ ಪೂರಕ ಲೆಕ್ಕ ಪರಿಶೋಧನೆಯನ್ನು ನಡೆಸಿರುತ್ತೇನೆ.

ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರ ದಾಖಲೆಗಳನ್ನು ಬಳಸದೆ ಸ್ವತಂತ್ರವಾಗಿ ಮಾಡಲಾಗಿದೆ ಮತ್ತು ಪ್ರಾಥಮಿಕವಾಗಿ ಶಾಸನಬದ್ಧ ಲೆಕ್ಕ ಪರಿಶೋಧಕರ ವಿಚಾರಣೆಗೆ, ಕಂಪನಿಯ ಸಿಬ್ಬಂಧಿಗೆ ಮತ್ತು ಆಯ್ದ ಲೆಕ್ಕಪತ್ರ ದಾಖಲೆಗಳ ಪರೀಕ್ಷೆಗೆ ಸೀಮಿತವಾಗಿದೆ. ನನ್ನ ಪೂರಕ ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ ನಾನೂ ಅವಲೋಕಿಸಿ ಎತ್ತಿ ತೋರಿಸಿದ ಪರಿಣಾಮವಾಗಿ ಲೆಕ್ಕ ಪರಿಶೋಧಕರ ವರದಿಯನ್ನು ಪರಿಷ್ಕರಿಸಲಾಗಿದೆ. ಇದರ ಮೇಲೆ ನನ್ನ ಮುಂದುವರೆದ ಯಾವುದೇ ಆಕ್ಷೇಪಣೆ ಅಥವಾ ಅಧಿನಿಯಮದ ಪ್ರಕರಣ 143(6)(ಬಿ) ಅಡಿಯಲ್ಲಿ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಗೆ ಯಾವುದೇ ಅನುಬಂಧವಿರುವುದಿಲ್ಲ.

ಭಾರತದ ನಿಯಂತ್ರಕ ಮತ್ತು ಮಹಾಲೇಖಾ ಪರೀಕ್ಷಕರ ಪರವಾಗಿ

ಸಹಿ/–

(ಅನುಪ್ ಪ್ರಾನ್ಸಿಸ್ ಡಂಗ್ ಡಂಗ್)

ಪ್ರಧಾನ ಮಹಾಲೇಖಾಪಾಲಕರು

(ಲೆಕ್ಕಪರಿಶೋಧನೆ–II)

ಕರ್ನಾಟಕ, ಬೆಂಗಳೂರು

ಸ್ಥಳ : ಬೆಂಗಳೂರು

ದಿನಾಂಕ : 02.12.2020

ವಿಷ್ಣು ರಾಜೇಂದ್ರನ್ & ಕಂ

ಚಾರ್ಟರ್ಡ್ ಅಕೌಂಟಂಟ್ಸ್

ನಂ. 515, ಮೂರನೇ ಮಹಡಿ, ಜೀವನ್ ಭೀಮಾ ನಗರ,
ಬೆಂಗಳೂರು – 560008. ಟೆಲಿ : 080-43750504
E- mail : tom@vrc.co.in

ಸ್ವತಂತ್ರ ಲೆಕ್ಕಪರಿಶೋಧಕರ ಪರಿಷ್ಕೃತ ವರದಿ

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಸದಸ್ಯರಿಗೆ

ಸ್ವತಂತ್ರ ಆರ್ಥಿಕ ವಿವರಪಟ್ಟಿಗಳ ಮೇಲೆ ವರದಿ

ಅರ್ಹ ಅಭಿಪ್ರಾಯ

ನಾವು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ 31ನೇ ಮಾರ್ಚ್, 2020 ರಂದು ಇದ್ದಂತೆ, ಅಂತ್ಯಗೊಂಡ ಆ ವರ್ಷಕ್ಕೆ, ಆಯವ್ಯಯ ಪಟ್ಟಿ, ಲಾಭ ಮತ್ತು ನಷ್ಟ ತ:ಖ್ತೆ (ಇತರೆ ಸಮಗ್ರ ಆದಾಯವನ್ನೊಳಗೊಂಡು), ಈಕ್ವಿಟಿಯಲ್ಲಿ ಬದಲಾವಣೆಗಳು ಮತ್ತು ನಗದು ಹರಿವಿನ ತ:ಖ್ತೆ ಮತ್ತು ಆರ್ಥಿಕ ವಿವರಪಟ್ಟಿಗಳಿಗೆ ಟಿಪ್ಪಣಿಗಳು ಮತ್ತು ಆರ್ಥಿಕ ವಿವರಪಟ್ಟಿಗಳ ಪ್ರಮುಖ ಲೆಕ್ಕಾಚಾರ ನೀತಿಗಳು ಮತ್ತು ಇತರೆ ವಿವರಣಾತ್ಮಕ ಮಾಹಿತಿಗಳ ಸಾರಾಂಶವನ್ನು ಒಳಗೊಂಡ (ಇನ್ನು ಮುಂದೆ ಒಟ್ಟಾಗಿ (**"ಸ್ವತಂತ್ರ ಆರ್ಥಿಕ ವಿವರಪಟ್ಟಿಗಳು"**) ಎಂದು ಸಾಮೂಹಿಕವಾಗಿ ಉಲ್ಲೇಖಿಸಲ್ಪಟ್ಟ) ಲಗತ್ತಿಸಲಾಗಿರುವ ಸ್ವತಂತ್ರ ಆರ್ಥಿಕ ವಿವರಪಟ್ಟಿಗಳ ಲೆಕ್ಕ ಪರಿಶೋಧನೆ ಮಾಡಿದ್ದೇವೆ ಮತ್ತು ದಿನಾಂಕ 30ನೇ ಸೆಪ್ಟೆಂಬರ್, 2020ರಂದು ವರದಿ ಸಲ್ಲಿಸಿರುತ್ತೇವೆ. ತದನಂತರ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪಾಲರು ಅವಲೋಕಿಸಿದ ಹಿನ್ನೆಲೆಯಲ್ಲಿ ಲೆಕ್ಕಪರಿಶೋಧನಾ ವರದಿಯು ಪರಿಷ್ಕರಣೆಗೊಂಡಿದೆ ಮತ್ತು ಸೆಪ್ಟೆಂಬರ್ 30, 2020ರಂದು ಸಲ್ಲಿಸಿರುವ ವರದಿಯನ್ನು ರದ್ದುಗೊಳಿಸಿ ಪರಿಷ್ಕೃತ ವರದಿಯನ್ನು ಸಲ್ಲಿಸಲಾಗಿದೆ.

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ನಮ್ಮ ವರದಿಯ ಪರಿಮಿತ ಅಭಿಪ್ರಾಯಕ್ಕೆ ಆಧಾರ ವಿಭಾಗದಲ್ಲಿ ವಿವರಿಸಿದ ವಿಷಯಗಳ ಸಂಭವನೀಯ ಪರಿಣಾಮಗಳನ್ನು ಹೊರತುಪಡಿಸಿ ಮೇಲೆ ಹೇಳಲಾದ ಸ್ವತಂತ್ರ ಆರ್ಥಿಕ ವಿವರಪಟ್ಟಿಗಳು ಕಂಪನಿಗಳ ಕಾಯಿದೆ, 2013 (**"ಕಾಯಿದೆ"**) ಪ್ರಕಾರ ಅಗತ್ಯವಾದ ರೀತಿಯಲ್ಲಿ ಮಾಹಿತಿಯನ್ನು ನೀಡುತ್ತವೆ ಮತ್ತು ತಿದ್ದುಪಡಿಯಾದಂತೆ ಕಂಪನಿಗಳ (ಭಾರತೀಯ ಲೆಕ್ಕಾಚಾರದ ಗುಣಮಟ್ಟಗಳು) ನಿಯಮಗಳು, 2015 ರ (**ಇಂಡ್‌ಎಎಸ್**) ಜೊತೆ ಓದಿಕೊಂಡಂತೆ ಕಾಯಿದೆಯ ಕಲಂ 133 ರಡಿ ನಿಗದಿಪಡಿಲಾದ ಭಾರತೀಯ ಲೆಕ್ಕಾಚಾರದ ಗುಣಮಟ್ಟಗಳಿಗೆ ಅನುಸಾರವಾಗಿ ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಲಾದ ಇತರೆ ಲೆಕ್ಕದ ನೀತಿಗಳಿಗೆ 31ನೇ ಮಾರ್ಚ್, 2020ರಂದು ಕಂಪನಿಯ ವ್ಯವಹಾರಗಳ ಸ್ಥಿತಿಗತಿ ಮತ್ತು ಆ ದಿವಸಕ್ಕೆ ಮುಕ್ತಾಯಗೊಂಡಂತೆ, ಅದರ ಲಾಭ ಮತ್ತು ನಷ್ಟ, ಸಮಗ್ರ ಆದಾಯ, ಈಕ್ವಿಟಿಯಲ್ಲಿ ಬದಲಾವಣೆಗಳು ಮತ್ತು ಅದರ ನಗದು ಹರಿವುಗಳ ನೈಜ ಮತ್ತು ಯುಕ್ತ ಚಿತ್ರಣವನ್ನು ನೀಡುತ್ತವೆ.

ಪರಿಮಿತ ಅಭಿಪ್ರಾಯಕ್ಕೆ ಆಧಾರ

1. ಟಿಪ್ಪಣಿ ಸಂಖ್ಯೆ 37ಸಿ (ಆದಾಯ) ದಲ್ಲಿ ಕಂಪನಿಯು ಸೇವಾ ಶುಲ್ಕಗಳಿಂದ ಬರುವ ಆದಾಯವನ್ನು ಲೆಕ್ಕಹಾಕಲು ತನ್ನ ಲೆಕ್ಕಪತ್ರ ನೀತಿಯನ್ನು ಬಹಿರಂಗಪಡಿಸಿರುವುದಿಲ್ಲ. ಸೇವಾ ಶುಲ್ಕಗಳಿಂದ ಬರುವ ಆದಾಯವು ಆಯಾ ಸಲಹಾ ಒಪ್ಪಂದಗಳ ನಿಯಮಗಳಿಗನುಗುಣವಾಗಿ ಕಾರ್ಯಗತಗೊಂಡ ಕೆಲಸದ ನೈಜ ಪ್ರಗತಿ/ತಾಂತ್ರಿಕ ಮೌಲ್ಯಮಾಪನವನ್ನು ಉಲ್ಲೇಖಿಸಿ ಮೌಲ್ಯಮಾಪನ ಪೂರ್ಣಗೊಂಡ ಹಂತಕ್ಕೆ ಅನುಗುಣವಾಗಿ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ

ಗುರುತಿಸಲಾಗುವುದಿಲ್ಲ. ಕಂಪನಿಯು ಸೇವಾ ಶುಲ್ಕಗಳಿಂದ ಸ್ವೀಕರಿಸಿದ ಆದಾಯವನ್ನು ಸ್ವೀಕರಿಸಿದ ಸಂದರ್ಭಗಳಲ್ಲಿ ಮಾತ್ರ ಆದಾಯದ ಲೆಕ್ಕಹಾಕುತ್ತಿದೆ. ಕಂಪನಿಯು ಎಂ.ಎನ್.ಆರ್.ಇ. ಇಂದ ಸೌರ ವಿದ್ಯುತ್ ಪಂಪುಗಳ ಅನುಸ್ಥಾಪನೆಯಿಂದ ಸೇವಾ ಶುಲ್ಕವಾಗಿ 3% ಸೇವಾ ಶುಲ್ಕವಾಗಿ ರೂ.28,85,850 ಅನ್ನು ಸ್ವೀಕರಿಸಬೇಕಾಗಿದೆ, ಆದಾಗ್ಯೂ ಅದನ್ನು ಲೆಕ್ಕಕ್ಕೆ ತೆಗೆದುಕೊಂಡಿರುವುದಿಲ್ಲ. ಇದು ಪ್ರಸ್ತುತ ಸ್ವತ್ತುಗಳನ್ನು ರೂ.28.85,850 ಗಳಷ್ಟು ಕಡಿಮೆ ಮಾಡುವಲ್ಲಿ ಪರಿಣಮಿಸಿದೆ ಮತ್ತು ಅಷ್ಟು ವರ್ಷಕ್ಕೆ ಲಾಭವಾಗಿದೆ.

2. ಅಂದಾಜು ಆದಾಯ ತೆರಿಗೆ ವೆಚ್ಚದ ಸಮನ್ವಯವನ್ನು ವಿವರಿಸುವ ಇಂಡ್ ಎಎಸ್ 12ರ ಪ್ರಕಾರ ವಹಿವಾಟು ಬಹಿರಂಗಪಡಿಸುವಿಕೆಯಡಿಯಲ್ಲಿ ತೆರಿಗೆಗೆ ಒಳಪಡುವ ಆದಾಯಕ್ಕೆ ಕಡಿತಗೊಳಿಸಲಾಗದ ಮೊತ್ತದ ತೆರಿಗೆ ಪರಿಣಾಮಗಳನ್ನು ರೂ.(–)9,91,766 ರ ಬದಲು 9,91,766 ರೂ.ಗಳು ಎಂದು ತಪ್ಪಾಗಿ ಬಹಿರಂಗಪಡಿಸಲಾಗಿದೆ. ಒಟ್ಟು ಆದಾಯ ತೆರಿಗೆ ವೆಚ್ಚವನ್ನು ರೂ.9,98,25,097 ರ ಬದಲಾಗಿ ರೂ.8,31,19,065 ಎಂದು ತಪ್ಪಾಗಿ ಬಹಿರಂಗಪಡಿಸಲಾಗಿದೆ.

ನಾವು ಕಾಯಿದೆಯ ಕಲಂ 143(10) ರಡಿಯಲ್ಲಿ ನಿಗದಿಪಡಿಸಲಾದ ಲೆಕ್ಕ ಪರಿಶೋಧನೆಯ ಗುಣಮಟ್ಟ (ಎಸ್ಎಎಸ್)ಗಳನ್ವಯ ಸ್ವತಂತ್ರ ಆರ್ಥಿಕ ವಿವರಪಟ್ಟಿಗಳ ಲೆಕ್ಕ ಪರಿಶೋಧನೆ ನಡೆಸಿದ್ದೇವೆ. ಆ ಎಸ್ಎಎಸ್‌ಗಳ ಅಡಿಯಲ್ಲಿ ನಮ್ಮ ಜವಾಬ್ದಾರಿಯನ್ನು ನಮ್ಮ ವರದಿಯ ಸ್ವತಂತ್ರ ಆರ್ಥಿಕ ವಿವರಪಟ್ಟಿಗಳ ಲೆಕ್ಕ ಪರಿಶೋಧನೆಗೆ ಲೆಕ್ಕ ಪರಿಶೋಧಕರ ಜವಾಬ್ದಾರಿಗಳ ವಿಭಾಗದಲ್ಲಿ ಇನ್ನೂ ಹೆಚ್ಚಾಗಿ ವಿವರಿಸಿದ್ದೇವೆ. ಕಾಯಿದೆಯ ಉಪಬಂಧಗಳ ಅಡಿ ಮತ್ತು ಅದರಡಿಯಲ್ಲಿನ ನಿಯಮಗಳ ಅಡಿ ಸ್ವತಂತ್ರ ಆರ್ಥಿಕ ವಿವರಪಟ್ಟಿಗಳ ಲೆಕ್ಕ ಪರಿಶೋಧನೆ, ಸುಸಂಬದ್ಧ ನೈತಿಕ ಅಗತ್ಯತೆಗಳ ಜೊತೆ ಭಾರತೀಯ ಲೆಕ್ಕ ಪರಿಶೋಧಕರ ಸಂಸ್ಥೆ ("ಐಸಿಎಐ") ಹೊರಡಿಸಿದ ನೀತಿ ಸಂಹಿತೆಗನುಸಾರವಾಗಿ ನಾವು ಕಂಪನಿಯಿಂದ ಸ್ವತಂತ್ರವಾಗಿದ್ದೇವೆ ಮತ್ತು ಅಗತ್ಯತೆಗಳಿಗನುಸಾರವಾಗಿ ಮತ್ತು ನೀತಿ ಸಂಹಿತೆಗನುಸಾರವಾಗಿ ನಾವು ಇತರೆ ನೈತಿಕ ಜವಾಬ್ದಾರಿಯನ್ನು ಪೂರೈಸಿದ್ದೇವೆ. ನಾವು ಪಡೆದ ಲೆಕ್ಕ ಪರಿಶೋಧನೆಯ ಸಾಕ್ಷ್ಯ, ನಮ್ಮ ಅಭಿಪ್ರಾಯದ ಅಧಾರಕ್ಕೆ ತಕ್ಕುದಾಗಿದೆ ಮತ್ತು ಯುಕ್ತವಾಗಿದೆ ಎಂದು ನಾವು ನಂಬುತ್ತೇವೆ.

ವಿಷಯದ ಒತ್ತು

1) ದೃಢೀಕರಣ ಮತ್ತು ಹೊಂದಾಣಿಕೆಗೊಳಪಟ್ಟ ಪಕ್ಷಕಾರರ ಲೆಕ್ಕದಲ್ಲಿರುವ ಉಳಿಕೆ ಮೊತ್ತದ ಬಗ್ಗೆ ಸ್ವತಂತ್ರ ಆರ್ಥಿಕ ವಿವರಪಟ್ಟಿಗಳಿಗೆ ಟಿಪ್ಪಣಿ ಸಂ.:16

   ಮೇಲೆ ಹೇಳಲಾದ ಉಳಿಕೆ ಮೊತ್ತಗಳ ದೃಢೀಕರಣದ ಅಲಭ್ಯತೆಯಿಂದಾಗಿ ಸ್ವತಂತ್ರ ಆರ್ಥಿಕ ವಿವರಪಟ್ಟಿಗಳ ಮೇಲೆ ಹೊಂದಾಣಿಕೆ ಮತ್ತು ಲೆಕ್ಕದ ಉಳಿಕೆ ಮೊತ್ತದ ಇತ್ಯರ್ಥದಿಂದಾಗಿ, ಹೊಂದಾಣಿಕೆಯ ಪ್ರಭಾವ ಯಾವುದಾದರೂ ಇದ್ದರೆ, ಅದನ್ನು ಪ್ರಮಾಣಿಕರಿಸಲು ನಮಗೆ ಸಾಧ್ಯವಿಲ್ಲ.

2) ನಾವು ಸ್ವತಂತ್ರ ಆರ್ಥಿಕ ವಿವರಪಟ್ಟಿಗಳ ಟಿಪ್ಪಣಿ ಸಂ.:17 ಕ್ಕೆ ಗಮನ ಸೆಳೆಯುತ್ತೇವೆ. ಕಂಪನಿಯು ಬಳಸಿಕೊಳ್ಳದ ನಿಧಿಯನ್ನು ಹೊಂದಿದೆ ಮತ್ತು ಆಡಳಿತವರ್ಗ ಅದನ್ನು ಬಳಸಿಕೊಳ್ಳುವ ಪ್ರಕ್ರಿಯೆಯಲ್ಲಿದೆ ಎಂದು ನಮಗೆ ತಿಳಿಸಲಾಗಿದೆ. ಭವಿಷ್ಯದ ಯೋಜನೆಗಳ ಮತ್ತು ಬಳಕೆಯ ಯೋಜನೆಗಳ ದಾಖಲೆಗಳ ಗೈರುಹಾಜರಿಯಿಂದಾಗಿ, ಸ್ವತಂತ್ರ ಆರ್ಥಿಕ ವಿವರಪಟ್ಟಿಗಳ ಮೇಲೆ ಅದರ ಪ್ರಭಾವವೇನಾದರೂ ಇದ್ದರೆ, ನಾವು ಅದರ ಮೇಲೆ ವ್ಯಾಖ್ಯಾನ ಮಾಡಲಾಗುವುದಿಲ್ಲ.

   ಮೇಲಿನ ವಿಷಯಗಳ ಬಗ್ಗೆ ನಮ್ಮ ಅಭಿಪ್ರಾಯ ಮಾರ್ಪಾಡಾಗಿರುವುದಿಲ್ಲ.

ಲೆಕ್ಕ ಪರಿಶೋಧನೆಯ ಮುಖ್ಯ ವಿಷಯಗಳು

ಕಂಪನಿಯು, ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಚಟುವಟಿಕೆಗಳು, ನವೀಕರಿಸಬಹುದಾದ ಇಂಧನ ಮೂಲಗಳ ಪ್ರಸಾರ ಹಾಗೂ ವಿದ್ಯುಚ್ಛಕ್ತಿ ಉತ್ಪಾದನೆ ಎಂಬಮೂರು ವ್ಯವಹಾರಿಕ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತದೆ.ವ್ಯವಹಾರ ವಿಭಾಗಗಳನ್ನು, ಸಾಂಸ್ಥಿಕ ಮತ್ತು ಆಂತರಿಕ ವರದಿ ರಚನೆ ಹಾಗೂ ಈ ವಿಭಾಗಗಳಿಂದ ಉಂಟಾಗುವ ನಷ್ಟಗಳು ಮತ್ತು ಆದಾಯಗಳನ್ನು ಗಮನದಲ್ಲಿಟ್ಟುಕೊಂಡು ಕಂಪನಿ (ಭಾರತೀಯ ಲೆಕ್ಕಪತ್ರನಿರ್ವಹಣಾ ಮಾನದಂಡಗಳು) ನಿಯಮಗಳು, 2015ರ ಜೊತೆ ಓದಲಾದ ಕಂಪನಿಗಳ ಕಾಯ್ದೆ, 2013ರ 133ನೇ ಪ್ರಕರಣದಡಿ ನಿಗದಿಪಡಿಸಲಾದಂತೆ ಲೆಕ್ಕಪತ್ರ ನಿರ್ವಹಣಾ ಮಾನದಂಡ–17 ವಿಭಾಗ ವರದಿಗೆ ಅನುಸಾರವಾಗಿ ವರದಿ ಮಾಡಬಲ್ಲ ಪ್ರಾಥಮಿಕ ವಿಭಾಗಗಳೆಂಬುದಾಗಿ ಗುರುತಿಸಲಾಗಿದೆ. ಅಂತರ್ ವಿಭಾಗ ಬೆಲೆ ನಿಗದಿಯು ವೆಚ್ಚದ ಮೇಲೆ ಪರಿಣಾಮ ಬೀರುತ್ತದೆ. ವಿಭಾಗ ಲೆಕ್ಕನಿರ್ವಹಣಾ ನೀತಿಗಳು ಕಂಪನಿಯ ಲೆಕ್ಕನಿರ್ವಹಣಾ ನೀತಿಗಳಿಗನುಸಾರವಾಗಿಯೇ ಇರುತ್ತವೆ.

ಭೌಗೋಳಿಕ ವಿಭಾಗಗಳು:

ಕಂಪನಿ ಕಾರ್ಯಾಚರಣೆಗಳು ಮುಖ್ಯವಾಗಿ ಭಾರತಕ್ಕೆ ಸೀಮಿತವಾಗಿವೆ. ಕಂಪನಿಯು ಭಾರತದ ಆಚೆಗಿನ ವ್ಯವಹಾರಿಕ ವಿಭಾಗಗಳಿಂದ ಯಾವುದೇ ಭೌತಿಕ ಗಳಿಕೆಗಳನ್ನು ಪಡೆಯುತ್ತಿಲ್ಲ. ಹಾಗಾಗಿ, ಯಾವುದೇ ವರದಿ ಮಾಡಬಲ್ಲ ಭೌಗೋಳಿಕ ವಿಭಾಗಗಳಿರುವುದಿಲ್ಲ.

ಟಿಪ್ಪಣಿ: 38 ಸಾಮಾನ್ಯ:

ಆರ್ಥಿಕ ವಿವರ ಪಟ್ಟಿಗಳಲ್ಲಿ ಮತ್ತು ಟಿಪ್ಪಣಿಗಳಲ್ಲಿ ತಿಳಿಸಿರುವ ಎಲ್ಲ ಮೊತ್ತವು ರೂಪಾಯಿಗಳಲ್ಲಿರುತ್ತದೆ.

ಹಿಂದಿನ ಸಾಲಿನ ಅಂಕಿಗಳನ್ನು, ಪ್ರಸ್ತುತ ಸಾಲಿನ ಅಂಕಿಅಂಶಗಳೊಂದಿಗೆ ಹೊಲಿಕೆಮಾಡಲು ಅವಶ್ಯವಿರುವ ಕಡೆಗಳಲ್ಲಿ ಪುನರ್ ವರ್ಗೀಕರಣ ಅಥವಾ ಪುನರ್ ವಿಂಗಡಣೆ ಮಾಡಲಾಗಿದೆ.

ಮಹತ್ವದ ಲೆಕ್ಕಪತ್ರ ನಿರ್ವಹಣಾ ನೀತಿಗಳು:

ಟಿಪ್ಪಣಿ ಸಂಖ್ಯೆ: 1 ರಿಂದ 38 ಆರ್ಥಿಕ ವಿವರಪಟ್ಟಿಗಳ ಅವಿಭಾಜ್ಯ ಅಂಗವಾಗಿರುತ್ತವೆ.

ಲಗತ್ತಿಸಿದ ನಮ್ಮ ಸಮ ಸಂಖ್ಯೆಯ ವರದಿಯಂತೆ

ವಿಷ್ಣು ರಾಜೇಂದ್ರನ್ & ಕಂಪನಿ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ನಂ. 004741S

ಕರ್ನಾಟಕ ನವೀಕರಿಸಬಹುದಾದ
ಇಂಧನ ಅಭಿವೃದ್ಧಿ ನಿಗಮ

ಸಹಿ/–
(ಡಾ। ಹೆಚ್. ಬಿ. ಬೂದೆಪ್ಪ)
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 08661664

ಸಹಿ/–
(ಮಹೇಂದ್ರ ಜೈನ್)
ಅಧ್ಯಕ್ಷರು
ಡಿಐಎನ್: 01660388

ಸಹಿ/–
(ಥಾಮ್ ಜೋಸೆಫ್)
ಪಾಲುದಾರ
ಸದಸ್ಯತ್ವ ಸಂಖ್ಯೆ: 201502

ಸ್ಥಳ : ಬೆಂಗಳೂರು
ದಿನಾಂಕ : 28.09.2020

ಭಾರತದ ನಿಯಂತ್ರಕ ಮತ್ತು ಮಹಾಲೇಖಾ ಪರೀಕ್ಷಕರ ವ್ಯಾಖ್ಯಾನ

ಕ್ರೋಢಿಕೃತ ಹಣಕಾಸಿನ ವಿವರಗಳು

31ನೇ ಮಾರ್ಚ್, 2020ಕ್ಕೆ ಕೊನೆಗೊಂಡ ವರ್ಷಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇದರ ಕ್ರೋಢಿಕೃತ ಲೆಕ್ಕ ಪತ್ರದ ಮೇಲೆ 2013ನೇ ಸಾಲಿನ ಕಂಪನಿಗಳ ಅಧಿನಿಯಮದ ಪ್ರಕರಣ 129(4) ರೊಂದಿಗೆ ಓದಲಾದ ಪ್ರಕರಣ 143(6)(ಬಿ) ರ ಅಡಿಯಲ್ಲಿ, ಭಾರತದ ನಿಯಂತ್ರಕ ಮತ್ತು ಮಹಾಲೇಖಾ ಪರೀಕ್ಷಕರ ವ್ಯಾಖ್ಯಾನ.

2013ನೇ ಸಾಲಿನ ಕಂಪನಿಗಳ ಅಧಿನಿಯಮದಲ್ಲಿ ಗೊತ್ತುಪಡಿಸಲಾದ ಕ್ರೋಢಿಕೃತ ಹಣಕಾಸು ವರದಿ ಮಾಡುವಿಕೆ ಚೌಕಟ್ಟಿನ ಅನುಸಾರವಾಗಿ 31ನೇ ಮಾರ್ಚ್, 2020ಕ್ಕೆ ಕೊನೆಗೊಂಡ ವರ್ಷಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇದರ ಹಣಕಾಸು ವಿವರ ಪತ್ರವನ್ನು ಸಿದ್ಧಪಡಿಸುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ಅಧಿನಿಯಮದ ಪ್ರಕರಣ 129(4) ರೊಂದಿಗೆ ಈದಲಾದ ಪ್ರಕರಣ 139(5) ರಡಿಯಲ್ಲಿ ಭಾರತದ ನಿಯಂತ್ರಕ ಮತ್ತು ಮಹಾಲೇಖಾ ಪರೀಕ್ಷಕರಿಂದ ನೇಮಕ ಮಾಡಲಾದ ಶಾಸನಬದ್ಧ ಲೆಕ್ಕಪರಿಶೋಧಕರ ಹಣಕಾಸು ವಿವರಣ ಪತ್ರದ ಮೇಲೆ ಅಧಿನಿಯಮದ ಪ್ರಕರಣ 143ರ ಅಡಿಯಲ್ಲಿ ಸ್ವತಂತ್ರ ಲೆಕ್ಕಪರಿಶೋಧನೆ ಆಧಾರದ ಮೇಲೆ ಲೆಕ್ಕಪರಿಶೋಧನಾ ಗುಣಮಟ್ಟವನ್ನು ಅಧಿನಿಯಮದ ಪ್ರಕರಣ 143(10) ರಡಿಯಲ್ಲಿ ನಿಗದಿಪಡಿಸಿರುವಂತೆ ಅಭಿಪ್ರಾಯ ವ್ಯಕ್ತಪಡಿಸಲು ಜವಾಬ್ದಾರರಾಗಿರುತ್ತಾರೆ. ದಿನಾಂಕ 30 ಸೆಪ್ಟೆಂಬರ್ 2020ರ ಲೆಕ್ಕಪರಿಶೋಧನಾ ವರದಿಯನ್ನು ರದ್ದು ಪಡಿಸಿ 25ನೇ ನವೆಂಬರ್ 2020 ರಂದು ಪರಿಷ್ಕೃತ ಲೆಕ್ಕಪರಿಶೋಧನಾ ವರದಿಯನ್ನು ಮಾಡಲಾಗಿದೆಯೆಂದು ಹೇಳಲಾಗಿದೆ.

ಭಾರತದ ನಿಯಂತ್ರಕರು ಮತ್ತು ಮಹಾಲೇಖಾ ಪರೀಕ್ಷಕರ ಪರವಾಗಿ ನಾನು 2013ನೇ ಸಾಲಿನ ಕಂಪನಿಗಳ ಅಧಿನಿಯಮದ ಪ್ರಕರಣ129(4) ರೊಂದಿಗೆ ಓದಲಾದ ಪ್ರಕರಣ143(6)(ಬಿ) ಅಡಿಯಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ 31 ಮಾರ್ಚ್2020 ಕ್ಕೆ ಕೊನೆಗೊಂಡ ವರ್ಷದ ಕ್ರೋಢೀಕೃತ ಹಣಕಾಸು ವಿವರಣೆಗಳ ಪೂರಕ ಲೆಕ್ಕ ಪರಿಶೋಧನೆಯನ್ನು ನಡೆಸಿರುತ್ತೇನೆ.

ನಾವು, 31ನೇ ಮಾರ್ಚ್ 2020 ಕ್ಕೆ ಕೊನೆಗೊಂಡ ವರ್ಷದ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಕ್ರೋಢೀಕೃತ ಹಣಕಾಸು ವಿವರಣೆಗಳ ಲೆಕ್ಕ ಪರಿಶೋಧನೆಯನ್ನು ನಡೆಸಿರುತ್ತೇವೆ. ಆದರೆ, ಆ ದಿನಾಂಕದಂದು ಕೊನೆಗೊಂಡ ವರ್ಷಕ್ಕೆ ಕರ್ನಾಟಕ ಸೌರ ವಿದ್ಯುತ್ಅಭಿವೃದ್ಧಿ ನಿಗಮ ನಿಯಮಿತದ ಹಣಕಾಸು ವಿವರಣೆಗಳ ಪೂರಕ ಲೆಕ್ಕಪರಿಶೋಧನೆಯನ್ನು ನಡೆಸಿರುವುದಿಲ್ಲ. ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರ ದಾಖಲೆಗಳನ್ನು ಬಳಸದೆ ಸ್ವತಂತ್ರವಾಗಿ ಮಾಡಲಾಗಿದೆ ಮತ್ತು ಪ್ರಾಥಮಿಕವಾಗಿ ಶಾಸನಬದ್ಧ ಲೆಕ್ಕ ಪರಿಶೋಧಕರ ವಿಚಾರಣೆಗೆ, ಕಂಪನಿಯ ಸಿಬ್ಬಂಧಿಗೆ ಮತ್ತು ಆಯ್ದ ಲೆಕ್ಕಪತ್ರ ದಾಖಲೆಗಳ ಪರೀಕ್ಷೆಗೆ ಸೀಮಿತವಾಗಿದೆ.

ನನ್ನ ಪೂರಕ ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ ನಾನೂ ಅವಲೋಕಿಸಿ ಎತ್ತಿ ತೋರಿಸಿದ ಪರಿಣಾಮವಾಗಿ ಲೆಕ್ಕ ಪರಿಶೋಧಕರ ವರದಿಯನ್ನು ಪರಿಷ್ಕೃರಿಸಲಾಗಿದೆ. ಇದರ ಮೇಲೆ ನನ್ನ ಮುಂದುವರೆದ ಯಾವುದೇ ಆಕ್ಷೇಪಣೆ ಅಥವಾ ಅಧಿನಿಯಮದ ಪ್ರಕರಣ 129(4) ರೊಂದಿಗೆ ಓದಲಾದ ಪ್ರಕರಣ 143(6)(ಬಿ) ಅಡಿಯಲ್ಲಿ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಗೆ ಯಾವುದೇ ಅನುಬಂಧವಿರುವುದಿಲ್ಲ.

ಭಾರತದ ನಿಯಂತ್ರಕ ಮತ್ತು ಮಹಾಲೇಖಾ ಪರೀಕ್ಷಕರ ಪರವಾಗಿ

ಸಹಿ/–

(ಅನುಪ್ ಫ್ರಾನ್ಸಿಸ್ ಡಂಗ್ ಡಂಗ್)

ಪ್ರಧಾನ ಮಹಾಲೇಖಾಪಾಲಕರು (ಲೆಕ್ಕಪರಿಶೋಧನೆ–II)

ಕರ್ನಾಟಕ, ಬೆಂಗಳೂರು

ಸ್ಥಳ : ಬೆಂಗಳೂರು

ದಿನಾಂಕ : 02.12.2020

ವಿಷ್ಣು ರಾಜೇಂದ್ರನ್ & ಕಂ

ಚಾರ್ಟರ್ಡ್ ಅಕೌಂಟಂಟ್ಸ್

ನಂ. 515, ಮೂರನೇ ಮಹಡಿ, ಜೀವನ್ ಭೀಮಾ ನಗರ,
ಬೆಂಗಳೂರು – 560008. ಟೆಲಿ : 080-43750504
E- mail : tom@vrc.co.in

ಪರಿಷ್ಕೃತ ಸ್ವತಂತ್ರ ಲೆಕ್ಕಪರಿಶೋಧಕರ ವರದಿ

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಎಲ್ಲ ಸದಸ್ಯರುಗಳಿಗೆ

ಕ್ರೋಢೀಕೃತ ಆರ್ಥಿಕ ವಿವರಪಟ್ಟಿಯ ಲೆಕ್ಕಪರಿಶೋಧನೆ ಮೇಲಿನ ವರದಿ

ಅರ್ಹ ಅಭಿಪ್ರಾಯ

ನಾವು ಇದರೊಂದಿಗೆ ಲಗತ್ತಿಸಲಾಗಿರುವ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಮತ್ತು ಅದರ ಜಂಟಿ ನಿಯಂತ್ರಿತ ಸಂಸ್ಥೆ ಕರ್ನಾಟಕ ಸೌರ ವಿದ್ಯುತ್ ಅಭಿವೃದ್ಧಿ ನಿಗಮ ನಿಯಮಿತ (ಇಲ್ಲಿಂದ ಮುಂದೆ ಹಿಡುವಳಿ ಕಂಪನಿ ಎಂದು ಉಲ್ಲೇಖಿಸಲಾಗುವುದು) ದ 31ನೇ ಮಾರ್ಚ್, 2020ರಂತೆ ಕ್ರೋಢೀಕೃತ ಲಾಭ ಮತ್ತು ನಷ್ಟಗಳ ವಿವರ ಪಟ್ಟಿ (ಇತರೆ ಸಮಗ್ರ ಆದಾಯವನ್ನು ಒಳಗೊಂಡಂತೆ), ಈಕ್ವಿಟಿಯಲ್ಲಿನ ಬದಲಾವಣೆಗಳ ಕ್ರೋಢೀಕೃತ ಪಟ್ಟಿ ಮತ್ತು ವರ್ಷಾಂತ್ಯದಲ್ಲಿ ನಗದು ಹರಿವಿನ ವಿವರಪಟ್ಟಿ, ಆರ್ಥಿಕ ವಿವರಪಟ್ಟಿಗಳ ಟಿಪ್ಪಣಿ, ಗಣನೀಯ ಲೆಕ್ಕಪತ್ರ ನೀತಿಗಳ ತಾತ್ಪರ್ಯವನ್ನು ಒಳಗೊಂಡೆ ಮತ್ತು ಇತರೆ ವಿವರಣಾತ್ಮಕ ಮಾಹಿತಿ (ಇನ್ನು ಮುಂದೆ ಒಟ್ಟಾಗಿ "ಕ್ರೋಢೀಕೃತ ಆರ್ಥಿಕ ವಿವರಪಟ್ಟಿ" ಎಂದು ಉಲ್ಲೇಖಿಸಲಾಗುವ) ಗಳನ್ನು ಲೆಕ್ಕಪರಿಶೋಧನೆ ಮಾಡಿರುತ್ತೇವೆ ಮತ್ತು ದಿನಾಂಕ 30ನೇ ಸೆಪ್ಟೆಂಬರ್, 2020ರಂದು ವರದಿ ಸಲ್ಲಿಸಿರುತ್ತೇವೆ. ತದನಂತರ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪಾಲರು ಅವಲೋಕಿಸಿದ ಹಿನ್ನೆಲೆಯಲ್ಲಿ ಲೆಕ್ಕಪರಿಶೋಧನಾ ವರದಿಯು ಪರಿಷ್ಕರಣೆಗೊಂಡಿದೆ ಮತ್ತು ಸೆಪ್ಟೆಂಬರ್ 30, 2020ರಂದು ಸಲ್ಲಿಸಿರುವ ವರದಿಯನ್ನು ರದ್ದುಗೊಳಿಸಿ ಪರಿಷ್ಕೃತ ವರದಿಯನ್ನು ಸಲ್ಲಿಸಲಾಗಿದೆ.

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗಿರುವ ಅತ್ಯುತ್ತಮ ಮಾಹಿತಿ ಮತ್ತು ನಮಗೆ ನೀಡಿದ ವಿವರಣೆಗಳ ಪ್ರಕಾರ ನಮ್ಮ ವರದಿಯ ಅರ್ಹ ಅಭಿಪ್ರಾಯದ ಆಧಾರದಲ್ಲಿ ವಿವರಿಸಿದ ವಿಷಯಗಳ ಸಂಭವನೀಯ ಪರಿಣಾಮಗಳನ್ನು ಹೊರತುಪಡಿಸಿ ಮೇಲಿನ ಕ್ರೋಢೀಕೃತ ಹಣಕಾಸು ಹೇಳಿಕೆಗಳು ಕಂಪನಿಗಳ ಅಧಿನಿಯಮ, 2013 (ಅಧಿನಿಯಮ) ಕಂಪನಿಗೆ ಅಗತ್ಯವಾದ ಮಾಹಿತಿಯನ್ನು ಅಗತ್ಯವಿರುವ ರೀತಿಯಲ್ಲಿ ನೀಡುತ್ತವೆ ಮತ್ತು ಕಂಪನಿಗಳ ನಿಯಮಾವಳಿಗಳು 2015ರೊಂದಿಗೆ ತಿದ್ದುಪಡಿ ಮಾಡಿದಂತೆ (ಭಾರತೀಯ ಲೆಕ್ಕಪತ್ರ ಮಾನದಂಡ) ಗಳೊಂದಿಗೆ ಓದಿಕೊಂಡ ಕಾಯಿದೆಯ ಪ್ರಕರಣ 133ರಡಿಯಲ್ಲಿ ಸೂಚಿಸಲಾದ ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಅನುಗುಣವಾಗಿ ನೈಜ ಮತ್ತು ನ್ಯಾಯೋಚಿತ ದೃಷ್ಟಿಕೋನವನ್ನು ನೀಡಿ (ಇಂಡ್ ಎಎಸ್) ಮತ್ತು ಕ್ರೋಢೀಕೃತ ಸ್ಥಿತಿಗತಿಗಳನ್ನು ಮತ್ತು ಅದರ ಜಂಟಿ ನಿಯಂತ್ರಿದ ಘಟಕದ 31ನೇ ಮಾರ್ಚ್, 2020ರಂತೆ ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಇತರ ಲೆಕ್ಕಪರಿಶೋಧಕ ತತ್ವಗಳು, ಅದರ ಕ್ರೋಢೀಕೃತ ಲಾಭ ಮತ್ತು ಕ್ರೋಢೀಕೃತ ಸಮಗ್ರ ಆದಾಯ, ಈಕ್ವಿಟಿಯಲ್ಲಿನ ಕ್ರೋಢೀಕೃತ ಬದಲಾವಣೆಗಳು ಮತ್ತು ಆ ದಿನಾಂಕದಂದು ಕೊನೆಗೊಂಡ ವರ್ಷಕ್ಕೆ ಅದರ ಕ್ರೋಢೀಕೃತ ನಗದು ಹರಿವುಗಳನ್ನು ತೋರಿಸುತ್ತದೆ.

ಪರಿಮಿತ ಅಭಿಪ್ರಾಯಕ್ಕೆ ಆಧಾರ

1. ಟಿಪ್ಪಣಿ ಸಂಖ್ಯೆ 37ಸಿ (ಆದಾಯ) ದಲ್ಲಿ ಕಂಪನಿಯು ಸೇವಾ ಶುಲ್ಕಗಳಿಂದ ಬರುವ ಆದಾಯವನ್ನು ಲೆಕ್ಕ ಹಾಕಲು ತನ್ನ ಲೆಕ್ಕಪತ್ರ ನೀತಿಯನ್ನು ಬಹಿರಂಗಪಡಿಸಿರುವುದಿಲ್ಲ. ಸೇವಾ ಶುಲ್ಕಗಳಿಂದ ಬರುವ ಆದಾಯವು ಆಯಾ ಸಲಹಾ

ಒಪ್ಪಂದಗಳ ನಿಯಮಗಳಿಗನುಗುಣವಾಗಿ ಕಾರ್ಯಗತಗೊಂಡ ಕೆಲಸದ ನೈಜ ಪ್ರಗತಿ/ತಾಂತ್ರಿಕ ಮೌಲ್ಯಮಾಪನವನ್ನು ಉಲ್ಲೇಖಿಸಿ ಮೌಲ್ಯಮಾಪನ ಪೂರ್ಣಗೊಂಡ ಹಂತಕ್ಕೆ ಅನುಗುಣವಾಗಿ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾಗುವುದಿಲ್ಲ. ಕಂಪನಿಯು ಸೇವಾ ಶುಲ್ಕಗಳಿಂದ ಸ್ವೀಕರಿಸಿದ ಆದಾಯವನ್ನು ಸ್ವೀಕರಿಸಿದ ಸಂದರ್ಭಗಳಲ್ಲಿ ಮಾತ್ರ ಆದಾಯದ ಲೆಕ್ಕಹಾಕುತ್ತಿದೆ. ಕಂಪನಿಯು ಎಂ.ಎನ್.ಆರ್.ಇ. ಇಂದ ಸೌರ ವಿದ್ಯುತ್ ಪಂಪುಗಳ ಅನುಸ್ಥಾಪನೆಯಿಂದ ಸೇವಾ ಶುಲ್ಕವಾಗಿ 3% ಸೇವಾ ಶುಲ್ಕವಾಗಿ ರೂ.28,85,850 ಅನ್ನು ಸ್ವೀಕರಿಸಬೇಕಾಗಿದೆ, ಆದಾಗ್ಯೂ ಅದನ್ನು ಲೆಕ್ಕಕ್ಕೆ ತೆಗೆದುಕೊಂಡಿರುವುದಿಲ್ಲ. ಇದು ಪ್ರಸ್ತುತ ಸ್ವತ್ತುಗಳನ್ನು ರೂ.28.85,850 ಗಳಷ್ಟು ಕಡಿಮೆ ಮಾಡುವಲ್ಲಿ ಪರಿಣಮಿಸಿದೆ ಮತ್ತು ಅಷ್ಟು ವರ್ಷಕ್ಕೆ ಲಾಭವಾಗಿದೆ.

2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಕರ್ನಾಟಕ ಸೌರ ವಿದ್ಯುತ್ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ ಜಂಟಿ ಸಹಭಾಗಿತ್ವದ ಉದ್ಯಿಮೆಯಾಗಿದೆ. ಕೆ.ಎಸ್.ಪಿ.ಡಿ.ಸಿ.ಎಲ್. ಸಂಸ್ಥೆಯು ಸೌರ ವಿದ್ಯುತ್ ಅಭಿವರ್ಧಕರುಗಳಿಂದ ವಿಳಂಭವಾಗಿ ಪಾವತಿಸಲಾದ ಸ್ಥಳೀಯ ಪ್ರದೇಶಾಭಿವೃದ್ಧಿ ಶುಲ್ಕಗಳ ಮೇಲೆ ರೂ.39,77,049 ಗಳನ್ನು ದಂಡವಾಗಿ ಸಂಗ್ರಹಿಸಿದೆ. ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯನ್ನು ಪ್ರತ್ಯೇಕವಾದ ಖಾತೆಯಲ್ಲಿ ಇಡಲಾಗಿದೆ ಮತ್ತು ಈ ಮೊತ್ತವನ್ನು ಬಾಧಿತ ಪ್ರದೇಶಾಭಿವೃದ್ಧಿಗೆ ಬಳಸಿಕೊಳ್ಳಲಾಗುವುದು. ಕಂಪನಿ (ಕೆ.ಎಸ್.ಪಿ.ಡಿ.ಸಿ.ಎಲ್.)ಯು ಸಂಗ್ರಹಿಸಲಾದ ದಂಡದ ಮೊತ್ತವನ್ನು ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಗೆ ಸೇರಿಸುವ ಬದಲಾಗಿ ಇತರೆ ಆದಾಯವೆಂದು ಪರಿಗಣಿಸಿದೆ. ಇದರಿಂದಾಗಿ ಕೆ.ಎಸ್.ಪಿ.ಸಿ.ಸಿ.ಎಲ್.ನ ಲಾಭವನ್ನು 39,77,049ರೂ.ಗಳಷ್ಟು ಹೆಚ್ಚಿಗೆಯಾಗಿದೆ ಎಂದು ಹೇಳಲಾಗಿದೆ ಮತ್ತು ಅದೇ ಪ್ರಮಾಣದಲ್ಲಿ ನಿಧಿಯ ಹೊಣೆಗಾರಿಕೆಗಳನ್ನು ಕಡಿಮೆ ಮಾಡಲಾಗಿದೆ. ಇದರ ಪರಿಣಾಮವಾಗಿ ಕ್ರೋಢೀಕೃತ ಹಣಕಾಸು ವಿವರಣಾಪಟ್ಟಿಯಲ್ಲಿ ಕೆ.ಎಸ್.ಪಿ.ಡಿ.ಸಿ.ಎಲ್.ನೊಂದಿಗಿನ ಜಂಟಿ ಉದ್ಯಮದಿಂದ ಲಾಭದ ಪಾಲನ್ನೂ ಸಹ ರೂ.19,88,525 ರಷ್ಟು (ಲಾಭದ ಪಾಲು–50%) ಹೆಚ್ಚಿಗೆ ಎಂದು ಹೇಳಲಾಗಿದೆ.

ಅಧಿನಿಯಮದ ಪ್ರಕರಣ 143(10) ರಡಿಯಲ್ಲಿ ನಿರ್ದಿಷ್ಟಪಡಿಸಿದ ಲೆಕ್ಕಪರಿಶೋಧನಾ ಮಾನಕಗಳ ಪ್ರಕಾರವಾಗಿ ನಾವು ನಮ್ಮ ಕ್ರೋಢೀಕೃತ ಹಣಕಾಸು ವಿವರಗಳ ಲೆಕ್ಕಪರಿಶೋಧನೆಯನ್ನು ನಡೆಸಿರುತ್ತೇವೆ. ಆ ಲೆಕ್ಕಪರಿಶೋಧನಾ ಮಾನಕಗಳಡಿಯಲ್ಲಿ ನಮ್ಮ ಜವಾಬ್ದಾರಿಗಳನ್ನು ನಮ್ಮ ವರದಿಯ ಕ್ರೋಢೀಕೃತ ಹಣಕಾಸು ವಿವರಗಳ ಲೆಕ್ಕಪರಿಶೋಧನೆಯ ವಿಭಾಗದ ಲೆಕ್ಕಪರಿಶೋಧಕರ ಜವಾಬ್ದಾರಿಗಳಲ್ಲಿ ವಿವರಿಸಲಾಗಿದೆ. ನಾವು, ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯಿಂದ ಹೊರಡಿಸಲಾದ ನೀತಿ ಸಂಹಿತೆಯ ಪ್ರಕಾರ ಕ್ರೋಢೀಕೃತ ಆರ್ಥಿಕ ವಿವರ ಪಟ್ಟಿಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಕಾಯಿದೆಯ ಪ್ರಾವಧಾನಗಳು ಮತ್ತು ನಿಯಮಗಳಡಿಯಲ್ಲಿ ನಾವು ಹಿಡುವಳಿ ಕಂಪನಿಯಿಂದ ಮತ್ತು ಅದರ ಜಂಟಿಯಾಗಿ ನಿಯಂತ್ರಿತ ಘಟಕದಿಂದ ಸ್ವತಂತ್ರವಾಗಿದ್ದೇವೆ ಮತ್ತು ಅಗತ್ಯತೆಗಳ ಪ್ರಕಾರ ಮತ್ತು ನೀತಿ ಸಂಹಿತೆಯ ಪ್ರಕಾರ ನಮ್ಮ ನೈತಿಕ ಜವಾಬ್ದಾರಿಯನ್ನು ಪೂರೈಸಿರುತ್ತೇವೆ. ನಾವು ನಮ್ಮ ಲೆಕ್ಕಪರಿಶೋಧನೆಗೆ ಮತ್ತು ಅದರ ಮೇಲೆ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಾಕಷ್ಟು ಮತ್ತು ಸೂಕ್ತವಾದ ಪುರಾವೆಗಳನ್ನು ಪಡೆದುಕೊಂಡಿದ್ದೇವೆಂದು ನಂಬಿರುತ್ತೇವೆ.

ವಿಷಯದ ಒತ್ತು

1. ಕ್ರೋಢೀಕೃತ ಆರ್ಥಿಕ ವಿವರಪಟ್ಟಿಯ ಟಿಪ್ಪಣಿ ಸಂಖ್ಯೆ 16 – ದೃಢೀಕರಣ ಮತ್ತು ಹೊಂದಾಣಿಕೆಗೆ ಒಳಪಟ್ಟು ಕಕ್ಷಿದಾರರ ಲೆಕ್ಕದಲ್ಲಿರುವ ಉಳಿಕೆ ಹಣದ ಬಗ್ಗೆ.

   ಮೇಲೆ ತಿಳಿಸಲಾದ ಉಳಿಕೆ ಬಗ್ಗೆ ದೃಢೀಕರಣ ಲಭ್ಯವಾಗದ ಕಾರಣ, ಕ್ರೋಢೀಕೃತ ಆರ್ಥಿಕ ವಿವರಪಟ್ಟಿಗಳ ಮೇಲೆ ಹೊಂದಾಣಿಕೆಗಳಿಂದ ಉದ್ಭವವಾಗುವ ಹೊಂದಾಣಿಕೆಗಳ ಪ್ರಭಾವ ಯಾವುದಾದರು ಇದ್ದರೆ, ಮತ್ತು ಲೆಕ್ಕದಲ್ಲಿ ಉಳಿಕೆಯ ಇತ್ಯರ್ಥವನ್ನು ಲೆಕ್ಕ ಮಾಡಲು ನಮಗೆ ಸಾಧ್ಯವಾಗಿರುವುದಿಲ್ಲ.

2. ಕ್ರೋಢೀಕೃತ ಆರ್ಥಿಕ ವಿವರಪಟ್ಟಿಯ ಟಿಪ್ಪಣಿ ಸಂಖ್ಯೆ 17ರ ಕಡೆಗೆ ನಾವು ಗಮನ ಸೆಳೆಯುತ್ತೇವೆ. ಹಿಡುವಳಿ ಕಂಪನಿಯು ಅನುದಾನವನ್ನು ಬಳಸಿಕೊಂಡಿರುವುದಿಲ್ಲ ಮತ್ತು ಆಡಳಿತ ಮಂಡಳಿಯು ಅದನ್ನು ಬಳಕೆ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿದೆ ಎಂದು ನಮಗೆ ತಿಳಿಸಲಾಗಿದೆ. ಭವಿಷ್ಯದ ಯೋಜನೆಗಳು ದಾಖಲೆಗಳು ಮತ್ತು ಅನುದಾನವನ್ನು ಬಳಸಿಕೊಳ್ಳುವ

ಯೋಜನೆಗಳ ಮಾಹಿತಿ ಕೊರತೆಯಿಂದಾಗಿ ಕ್ರೋಢೀಕೃತ ಆರ್ಥಿಕ ವಿವರ ಪಟ್ಟಿಯ ಮೇಲೆ ನಾವು ಅದರ ಪ್ರಭಾವ ಯಾವುದಾದರೂ ಇದ್ದರೆ ಅದನ್ನು ಹೇಳಲು ಸಾಧ್ಯವಾಗಿರುವುದಿಲ್ಲ.

ಮೇಲಿನ ವಿಷಯಗಳ ಕುರಿತು ನಮ್ಮ ಅಭಿಪ್ರಾಯವು ಮಾರ್ಪಾಡಾಗಿರುವುದಿಲ್ಲ.

ಇತರೆ ವಿಷಯಗಳು

ಕ್ರೋಢೀಕೃತ ಹಣಕಾಸು ಹೇಳಿಕೆಗಳು ಜಂಟಿ ಸಹಭಾಗಿತ್ವ ಸಂಸ್ಥೆಯ ಅರ್ಥಿಕ ಕಾರ್ಯಕ್ಷಮತೆಯನ್ನೂ ಒಳಗೊಂಡಿದ್ದು, ಇದು 31ನೇ ಮಾರ್ಚ್, 2020ಕ್ಕೆ ಕೊನೆಗೊಂಡಂತೆ ಒಟ್ಟು ರೂ.1282.93 ಕೋಟಿ ಮೌಲ್ಯದ ಆಸ್ತಿ ಮತ್ತು ನಿವ್ವಳ ನಗದು ಹರಿವು ಮೊತ್ತ ರೂ. 84.32 ಕೋಟಿಗಳನ್ನು ಪ್ರತಿಬಿಂಬಿಸುತ್ತದೆ, ಸ್ವತಂತ್ರ ಲೆಕ್ಕಪರಿಶೋಧಕರು ಇದರ ಲೆಕ್ಕಪರಿಶೋಧನೆ ಮಾಡಿರುತ್ತಾರೆ ಮತ್ತು ಅದರ ವರದಿಯನ್ನು ನಮಗೆ ಒದಗಿಸಿರುತ್ತಾರೆ ಮತ್ತು ಅಂತಹ ಲೆಕ್ಕಪರಿಶೋಧಿತ ಹಣಕಾಸು ಹೇಳಿಕೆಗಳ ಆಧಾರದ ಮೇಲೆ ಏಕೀಕೃತ ಹಣಕಾಸು ಹೇಳಿಕೆಗಳಲ್ಲಿ ಪರಿಗಣಿಸಲಾಗುತ್ತದೆ. ಈ ವಿಷಯಗಳ ಕುರಿತು ನಮ್ಮ ಅಭಿಪ್ರಾಯವು ಮಾರ್ಪಾಡಾಗಿರುವುದಿಲ್ಲ.

ಪ್ರಮುಖ ಲೆಕ್ಕಪರಿಶೋಧನಾ ವಿಷಯಗಳು

ನಮ್ಮ ವೃತ್ತಿಪರ ತೀರ್ಪಿನಲ್ಲಿ ಪ್ರಸಕ್ತ ಸಾಲಿನ ಕ್ರೋಢೀಕೃತ ಆರ್ಥಿಕ ವಿವರಪಟ್ಟಿಯ ನಮ್ಮ ಲೆಕ್ಕಪರಿಶೋಧನೆಯಲ್ಲಿ ಪ್ರಮುಖ ಲೆಕ್ಕಪರಿಶೋಧನಾ ವಿಷಯಗಳು ಪ್ರಮುಖವಾದ ಅಂಶವಾಗಿರುತ್ತದೆ. ಈ ವಿಷಯಗಳ ಬಗ್ಗೆ ನಮ್ಮ ಕ್ರೋಢೀಕೃತ ಆರ್ಥಿಕ ವಿವರಪಟ್ಟಿಗಳ ಒಟ್ಟಾರೆ ಲೆಕ್ಕಪರಿಶೋಧನೆಯಲ್ಲಿ ಮತ್ತು ಅದರ ಆಧಾರದ ಮೇಲೆ ನಮ್ಮ ಅಭಿಪ್ರಾಯವನ್ನು ರೂಪಿಸುವಲ್ಲಿ ಗಮನ ಹರಿಸಲಾಗಿದೆ ಮತ್ತು ನಾವು ಈ ವಿಷಯಗಳ ಬಗ್ಗೆ ಪ್ರತ್ಯೇಕವಾದ ಅಭಿಪ್ರಾಯವನ್ನು ಒದಗಿಸುವುದಿಲ್ಲ. ಯಾವುದೇ ವಿಷಯವನ್ನು ನಮ್ಮ ವರದಿಯಲ್ಲಿ ಪ್ರಮುಖ ಲೆಕ್ಕಪರಿಶೋಧನಾ ವಿಷಯವೆಂದು ನಾವು ತೀರ್ಮಾನಿಸಿರುತ್ತೇವೆ.

ಕರೋನಾ ಸೋಂಕಿನ ಪ್ರಭಾವದಿಂದಾಗಿ, ಕಂಪನಿಯ ಅಧಿಕಾರಿಗಳೊಂದಿಗೆ ಚರ್ಚೆಗಳು ಮತ್ತು ವೈಯಕ್ತಿಕ ಸಂವಹನಗಳ ಮೂಲಕ ವೈಯಕ್ತಿಕವಾಗಿ/ದೈಹಿಕವಾಗಿ/ಲೆಕ್ಕಪರಿಶೋಧನಾ ಪುರಾವೆಗಳನ್ನು ಸಂಗ್ರಹಿಸುವುದಕ್ಕೆ ನಿರ್ಬಂಧ ವಿಧಿಸಿಕೊಂಡಿದ್ದೇವೆ, ಹೀಗಾಗಿ, ನಾವು ಮಾರ್ಪಡಿತ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ರೂಪಿಸಿಕೊಳ್ಳಲು ಆಶ್ರಯಿಸಿದ್ದೇವೆ. ಈ ಕುರಿತು ಮಾರ್ಚ್ 2020 ರ ಅವಧಿಯಲ್ಲಿ ಐಸಿಎಐ ಅಕೌಂಟಿಂಗ್ ಮತ್ತು ಆಡಿಟಿಂಗ್ ಅಡ್ವೈಸರಿ ಅವರು ಹೊರಡಿಸಿರುವ ಸೂಕ್ತ ಪರ್ಯಾಯ ವಿಧಾನ ಮತ್ತು ಮಾರ್ಗಸೂಚಿಗಳನ್ನಳವಡಿಸಿಕೊಂಡು ನಾವು ನಮ್ಮ ಲೆಕ್ಕಪರಿಶೋಧನೆ ನಡೆಸಿರುತ್ತೇವೆ. ಜೊತೆಗೆ, ಲೆಕ್ಕಪರಿಶೋಧನೆ, ಯೋಜನೆ ಮತ್ತು ನಿರ್ವಹಣೆಯಲ್ಲಿ ವಸ್ತುನಿಷ್ಠ ತಪ್ಪುಗ್ರಹಿಕೆಯ ಮತ್ತು ಭೌತಿಕತೆಯ ಅಪಾಯವನ್ನು ಗುರುತಿಸಲು ಮತ್ತು ನಿರ್ಣಯಿಸಲು ನಾವು ಪ್ರಯತ್ನಿಸಿದ್ದೇವೆ. ಮುಂದುವರಿದು, ಹಣಕಾಸಿನ ಪ್ರಭಾವ ಮತ್ತು ಅವುಗಳ ಸಮಂಜಸವಾದ ಅಂದಾಜುಗಳನ್ನು ನಿರ್ವಹಿಸುವಲ್ಲಿ ಲೆಕ್ಕಪರಿಶೋಧನೆಯ ಯಾವುದೇ ಕ್ಷೇತ್ರಗಳಲ್ಲಿ ಭೌತಿಕ ಪರಿಷ್ಕರಣೆಯ ಅಗತ್ಯವಿರಲಿಲ್ಲ. ಎಸ್.ಎ. 580 ಪ್ರಕಾರ ಆಡಳಿತ ಮಂಡಳಿಯಿಂದ ವಿವಿಧ ಅಂದಾಜುಗಳು ಮತ್ತು ಊಹೆಗಳ ಕುರಿತಾಗಿ ಲಿಖಿತ ನಿರೂಪಣೆಗಳನ್ನು ಪಡೆದುಕೊಂಡಿದ್ದೇವೆ.

ಭೌತಿಕ ಪ್ರವೇಶ ಸಾಧ್ಯವಾಗದ ಕ್ಷೇತ್ರಗಳಲ್ಲಿ ಕಂಪನಿಯು ಡಿಜಿಟಲ್ ಮಾಧ್ಯಮ, ಇ–ಮೇಲ್‌ಗಳು ಮತ್ತು ಇತರ ಸಂಬಂಧಿತ ಅನ್ವಯಿಕ ತಂತ್ರಾಂಶದ ಮೂಲಕ ಅಗತ್ಯ ದಾಖಲೆಗಳು/ವರದಿಗಳು/ದಾಖಲಾತಿ ಪತ್ರಗಳು/ಪ್ರಮಾಣಪತ್ರಗಳನ್ನು ಡಿಜಿಟಲ್ ಮಾಧ್ಯಮ, ಇ–ಮೇಲ್‌ಗಳು ಮತ್ತು ಇತರ ಸಂಬಂಧಿತ ಅಪ್ಲಿಕೇಶನ್ ಸಾಫ್ಟ್‌ವೇರ್‌ಗಳಿಗೆ ದೂರಸ್ತ ಪ್ರವೇಶದ ಮೂಲಕ ಅಗತ್ಯ ದಾಖಲೆಗಳನ್ನು ನಮಗೆ ಲಭ್ಯಗೊಳಿಸಿದೆ. ನಮಗೆ ಒದಗಿಸಿರುವಂತಹ ದಾಖಲೆಗಳು, ವರದಿಗಳು ಮತ್ತು ದಾಖಲಾತಿ ಪತ್ರಗಳ ಆಧಾರದ ಮೇಲೆ ನಮ್ಮ ಲೆಕ್ಕಪರಿಶೋಧನಾ ಪ್ರಕ್ರಿಯೆ ನಡೆಸಿದ್ದೇವೆ, ಇವುಗಳನ್ನು ಲೆಕ್ಕಪರಿಶೋಧನೆ ನಡೆಸಲು ಮತ್ತು ಪ್ರಸ್ತುತ ಅವಧಿಗೆ ವರದಿ ಮಾಡಲು ಲೆಕ್ಕಪರಿಶೋಧನಾ ಸಾಕ್ಷಿಯನ್ನಾಗಿ ಅವಲಂಭಿಸಿದ್ದೇವೆ. ಆದ್ದರಿಂದ ನಮ್ಮ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ದೂರದಿಂದಲೇ ನಿರ್ವಹಿಸಲು ಮಾರ್ಪಾಡು ಮಾಡಲಾಗಿದೆ. ಮಾರ್ಪಾಡು ಮಾಡಲಾದ ಲೆಕ್ಕಪರಿಶೋಧನಾ ಕಾರ್ಯವಿಧಾನಗಳು ಈ ಕೆಳಕಂಡಂತಿವೆ.

- ಭೌತಿಕ ಪ್ರವೇಶ ಸಾಧ್ಯಗಾಗದ ಕಡೆಗಳಲ್ಲಿ ದೂರಸ್ಥ (ರಿಮೋಟ್) ಪ್ರವೇಶ/ಇ–ಮೇಲ್‌ಗಳ ಮೂಲಕ ಕಂಪನಿಯ ಲೆಕ್ಕಪತ್ರ ತಂತ್ರಾಂಶವನ್ನು ವಿದ್ಯುನ್ಮಾನವಾಗಿ ಪರಿಶೀಲಿಸಲಾಗಿದೆ.
- ಕಂಪನಿಯ ಸುರಕ್ಷಿತ ನೆಟ್‌ವರ್ಕ್ ಮೂಲಕ ಇ–ಮೇಲ್‌ಗಳು ಮತ್ತು ದೂರಸ್ಥ (ರಿಮೋಟ್) ಪ್ರವೇಶದ ಮೂಲಕ ನಮಗೆ ಲಭ್ಯವಿರುವ ದಾಖಲೆಗಳು, ಕರಾರು ಪತ್ರಗಳು, ಪ್ರಮಾಣ ಪತ್ರಗಳು ಮತ್ತು ಸಂಬಂಧಿಸಿದ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳ ಪರಿಶೀಲನೆಯನ್ನು ಕೈಗೊಳ್ಳಲಾಗಿದೆ.
- ವಿಚಾರಣೆಗಳನ್ನು ಮಾಡುವ ಮೂಲಕ ಮತ್ತು ಸಂವಾದಗಳ ಮೂಲಕ ಲೆಕ್ಕಪರಿಶೋಧನಾ ಸಾಕ್ಷಿಗಳನ್ನು ಸಂಗ್ರಹಿಸುವುದು ಮತ್ತು ಇ–ಮೇಲ್‌ಗಳ ಮೂಲಕ ಚರ್ಚೆ ಮಾಡುವುದು ಮತ್ತು ಇಂತಹದೇ ಸಂವಹನ ಚಾನಲ್‌ಗಳ ಬಳಕೆ.
- ಸಂಬಂಧಿಸಿದ ಅಧಿಕಾರಿಗಳೊಂದಿಗೆ ಮುಖಾಮುಖಿ ಸಂವಾದದ ಬದಲು ವಿದ್ಯುನ್ಮಾನ ಮಾಧ್ಯಮದ ಮೂಲಕ ನಮ್ಮ ಲೆಕ್ಕಪರಿಶೋಧನಾ ಅವಲೋಕನಗಳ ನಿರ್ಣಯ

ಕ್ರೋಢೀಕೃತ ಆರ್ಥಿಕ ವಿವರಪಟ್ಟಿಗಳ ಮತ್ತು ಅದರ ಲೆಕ್ಕಪರಿಶೋಧಕರ ವರದಿಯನ್ನು ಹೊರತುಪಡಿಸಿದ ಮಾಹಿತಿ

ಕಂಪನಿಯ ನಿರ್ದೇಶಕ ಮಂಡಳಿಯು ಇತರೆ ಮಾಹಿತಿಯನ್ನು ಸಿದ್ಧಪಡಿಸುವ ಜವಾಬ್ದಾರಿ ಹೊಂದಿರುತ್ತದೆ. ಇತರೆ ಮಾಹಿತಿಯು ನಿರ್ದೇಶಕ ಮಂಡಳಿಯ ವರದಿಗೆ ಅನುಬಂಧವೂ ಸೇರಿದಂತೆ ನಿರ್ದೇಶಕ ಮಂಡಳಿಯು ವರದಿಯಲ್ಲಿ ಸೇರಿಸಲ್ಪಟ್ಟ ಮಾಹಿತಿಯನ್ನು ಒಳಗೊಂಡಿರುತ್ತದೆ. ಆದರೆ ಕ್ರೋಢೀಕೃತ ಆರ್ಥಿಕ ವಿವರಪಟ್ಟಿ ಮತ್ತು ಅದರ ಮೇಲಿನ ನಮ್ಮ ಲೆಕ್ಕಪರಿಶೋಧನಾ ವರದಿಯನ್ನು ಒಳಗೊಂಡಿರುವುದಿಲ್ಲ.

ಕ್ರೋಢೀಕೃತ ಆರ್ಥಿಕ ವಿವರಪಟ್ಟಿಯ ಮೇಲಿನ ನಮ್ಮ ಅಭಿಪ್ರಾಯವು ಇತರೆ ಮಾಹಿತಿಗಳನ್ನು ಪರಿಶೀಲಿಸಿರುವುದಿಲ್ಲ ಮತ್ತು ನಾವು ಅದರ ಮೇಲೆ ಯಾವುದೇ ತರಹದ ಭರವಸೆ ರೂಪದ ತೀರ್ಮಾನವನ್ನು ವ್ಯಕ್ತಪಡಿಸುವುದಿಲ್ಲ.

ಕ್ರೋಢೀಕೃತ ಆರ್ಥಿಕ ವಿವರಪಟ್ಟಿಯು ನಮ್ಮ ವರದಿಗೆ ಸಂಬಂಧಿಸಿದಂತೆ ಲಭ್ಯವಾದ ಮೇಲಿನ ಇತರ ಮಾಹಿತಿಯನ್ನು ಓದುವುದು ಮತ್ತು ಹಾಗೆ ಮಾಡುವಾಗ ಇತರ ಮಾಹಿತಿಯು ಕ್ರೋಢೀಕೃತ ಆರ್ಥಿಕ ವಿವರಪಟ್ಟಿ ಭೌತಿಕವಾಗಿ ತಾಳೆ ಹೊಂದುವುದೇ ಅಥವಾ ಲೆಕ್ಕ ಪರಿಶೋಧನೆಯಲ್ಲಿ ನಮ್ಮ ಗಮನಕ್ಕೆ ಪಡೆದುಕೊಂಡಂತೆ ಅಥವಾ ಇನ್ನು ಬೇರೆ ಯಾವುದೇ ರೀತಿಯಲ್ಲಿ ಭೌತಿಕ ತಪ್ಪಿನಿಂದ ಹೇಳಲ್ಪಟ್ಟಿದೆಯೇ ಎಂಬುದನ್ನು ಪರಿಶೀಲಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ.

ನಾವು ನಿರ್ವಹಿಸಿದ ಕರ್ತವ್ಯದ ಆಧಾರದ ಮೇಲೆ ಇತರೆ ಮಾಹಿತಿಯು ತಪ್ಪಾಗಿ ಹೇಳಲ್ಪಟ್ಟಿದೆಯೇ ಎಂದು ನಾವು ತೀರ್ಮಾನಿಸಿದರೆ, ನಾವು ಆ ಅಂಶವನ್ನು ವರದಿ ಮಾಡಬೇಕಾಗಿರುತ್ತದೆ. ನಾವು ಈ ಬಗ್ಗೆ ವರದಿ ಮಾಡುವ ಯಾವುದೇ ಅಂಶವಿರುವುದಿಲ್ಲ.

ಕ್ರೋಢೀಕೃತ ಆರ್ಥಿಕ ವಿವರಪಟ್ಟಿಗೆ ಆಡಳಿತ ಮಂಡಳಿ ಮತ್ತು ಆಡಳಿತ ಮೇಲ್ವಿಚಾರಣೆ ಹೊಂದಿರುವವರ ಜವಾಬ್ದಾರಿ

ಹಿಡುವಳಿ ಕಂಪನಿಯ ನಿರ್ದೇಶಕ ಮಂಡಳಿಯು ಅಧಿನಿಯಮದ ಪ್ರಕರಣ 134(5)ರ ಪ್ರಕಾರ ಹಿಡುವಳಿ ಕಂಪನಿಯ ಮತ್ತು ಅದರ ಜಂಟಿ ನಿಯಂತ್ರಿತ ಸಂಸ್ಥೆಯ ಆರ್ಥಿಕ ಸ್ಥಿತಿ, ಆರ್ಥಿಕ ಕಾರ್ಯನಿರ್ವಹಣೆ (ಇತರ ಸಮಗ್ರ ಆದಾಯವನ್ನೊಳಗೊಂಡಂತೆ), ಈಕ್ವಿಟಿಯಲ್ಲಿನ ಬದಲಾವಣೆಗಳು ಮತ್ತು ನಗದು ಹರಿವಿನ ಬಗ್ಗೆ ನೈಜ ಮತ್ತು ನ್ಯಾಯಯುತ ಚಿತ್ರಣವನ್ನು ನೀಡುವ ಕ್ರೋಢೀಕೃತ ಆರ್ಥಿಕ ವಿವರಪಟ್ಟಿಯನ್ನು ಸಾಮಾನ್ಯವಾಗಿ ಭಾರತದಲ್ಲಿ ಅಂಗೀಕರಿಸಿರುವ ಲೆಕ್ಕ ತತ್ವಗಳನುಸಾರ, ಇಂಡ್ ಎಎಸ್ ಅನ್ನೂ ಒಳಗೊಂಡು, ತಿದ್ದುಪಡಿಯಾದ ಕಂಪನಿಗಳ (ಲೆಕ್ಕಗಳು) ನಿಯಮ 2015ರ ಜತೆ ಓದಿಕೊಂಡಂತೆ ಕಾಯಿದೆಯ ಪ್ರಕರಣ 133ರಲ್ಲಿ ನಿದಿಪಡಿಸಿರುವಂತೆ ಸಿದ್ಧಪಡಿಸುವ ಹಾಗೂ ಮಂಡಿಸುವ ಜವಾಬ್ದಾರಿ ಹೊಂದಿರುತ್ತದೆ. ಹಿಡುವಳಿ ಕಂಪನಿಯ ಮತ್ತು ಅದರ ಜಂಟಿ ನಿಯಂತ್ರಿತ ಸಂಸ್ಥೆಯ ಆಯಾ ನಿರ್ದೇಶಕ ಮಂಡಳಿಯು ಕಂಪನಿಯ ಆಸ್ತಿ ಸಂರಕ್ಷಣೆ ಮತ್ತು ಮೋಸ ಹಾಗು ಇತರೆ ಅಕ್ರಮಗಳನ್ನು ಪತ್ತೆ ಹಚ್ಚಲು ಅಧಿನಿಯಮದ ಉಪಬಂಧಗಳನುಸಾರ ತಕ್ಕ ಲೆಕ್ಕದ ದಾಖಲೆಗಳನ್ನು ನಿರ್ವಹಣೆ ಮಾಡಲು, ಯುಕ್ತ ಲೆಕ್ಕದ ನೀತಿಗಳ ಆಯ್ಕೆ ಮತ್ತು ಅನ್ವಯಿಸುವಿಕೆ, ಸಮಂಜಸ ಮತ್ತು ದೂರ ದೃಷ್ಟಿಯುಳ್ಳ ತೀರ್ಮಾನ ಮತ್ತು ಅಂದಾಜುಗಳ ತಯಾರಿ, ಲೆಕ್ಕದ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆಯನ್ನು ಖಾತರಿಪಡಿಸಲು ಪರಿಣಾಮಕಾರಿಯಾಗಿ ಜಾರಿಯಲ್ಲಿರುವ ಯುಕ್ತ ಆಂತರಿಕ ಲೆಕ್ಕ ನಿಯಂತ್ರಣದ ಯೋಜನೆ, ಜಾರಿ ಮತ್ತು

ನಿರ್ವಹಣೆ, ಕಂಪನಿಯ ನಿರ್ದೇಶಕರ ಮಂಡಳಿಯಿಂದ ಸುಸಂಬದ್ಧವಾದ ಕ್ರೋಢೀಕೃತ ಆರ್ಥಿಕ ವಿವರಪಟ್ಟಿಗಳನ್ನು ಸಿದ್ಧಪಡಿಸುವ ಮತ್ತು ಮಂಡಿಸುವ ಮತ್ತು ನೈಜ ಹಾಗು ನ್ಯಾಯಯುತವಾದ ದೃಷ್ಟಿಯನ್ನು ನೀಡುವ ಉದ್ದೇಶಕ್ಕಾಗಿ ಉಪಯೋಗಿಸಿದ ಹಾಗು ಸಾರಾಭೂತ ತಪ್ಪು ಹೇಳಿಕೆಗಳಿಂದ ಮುಕ್ತವಾಗಿರುವ, ಮೋಸ ಅಥವಾ ತಪ್ಪಿನಿಂದ ಕೂಡಿರದ ಆರ್ಥಿಕ ವಿವರಪಟ್ಟಿಗಳ ತಯಾರಿಯ ಜವಾಬ್ದಾರಿಗಳನ್ನು ಹೊಂದಿರುತ್ತಾರೆ.

ಕ್ರೋಢೀಕೃತ ಆರ್ಥಿಕ ವಿವರಪಟ್ಟಿಯನ್ನು ಸಿದ್ಧಪಡಿಸುವಾಗ, ಮುಂದುವರೆಯುವ ಸಂಸ್ಥೆಯಾಗಿ ಹೊಂದಿರುವ ಸಾಮರ್ಥ್ಯವನ್ನು ಅಂದಾಜು ಮಾಡುವ, ಮುಂದುವರೆಯುವ ಸಂಸ್ಥೆಗೆ ಸಂಬಂಧಿಸಿದ ಅನ್ವಯವಾಗುವ ವಿಷಯಗಳನ್ನು ಬಹಿರಂಗಪಡಿಸುವ ಮತ್ತು ಕಂಪನಿಯು ದಿವಾಳಿಯಾಗಲು ಅಥವಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವ ಅಥವಾ ಆ ರೀತಿ ಆಗದೇ ಇರಲು ಯಾವುದೇ ವಾಸ್ತವಿಕ ಪರ್ಯಾಯ ಇಲ್ಲದೇ ಮುಂದುವರೆಯುವ ಸಂಸ್ಥೆಯ ಲೆಕ್ಕಾಚಾರದ ಆಧಾರವನ್ನು ಬಳಕೆ ಮಾಡುವುದು ಹಿಡುವಳಿ ಕಂಪನಿ ಮತ್ತು ಅದರ ಜಂಟಿ ನಿಯಂತ್ರಿತ ಸಂಸ್ಥೆಯ ಆಯಾ ನಿರ್ದೇಶಕ ಮಂಡಳಿಯ ಜವಾಬ್ದಾರಿಯಾಗಿದೆ.

ಹಿಡುವಳಿ ಕಂಪನಿ ಮತ್ತು ಅದರ ಜಂಟಿ ನಿಯಂತ್ರಿತ ಸಂಸ್ಥೆಯ ಆಯಾ ನಿರ್ದೇಶಕ ಮಂಡಳಿಯು ಕಂಪನಿಯ ಆರ್ಥಿಕ ವರದಿಗಾರಿಕೆ ಪ್ರಕ್ರಿಯೆಯ ಮೇಲ್ವಿಚಾರಣೆಯ ಜವಾಬ್ದಾರಿಯನ್ನೂ ಸಹ ಹೊಂದಿರುತ್ತದೆ.

ಕ್ರೋಢೀಕೃತ ಆರ್ಥಿಕ ವಿವರಪಟ್ಟಿಯ ಲೆಕ್ಕಪರಿಶೋಧನಾ ವರದಿಗೆ ಲೆಕ್ಕ ಪರಿಶೋಧಕರ ಜವಾಬ್ದಾರಿ

ಕ್ರೋಢೀಕೃತ ಆರ್ಥಿಕ ವಿವರಪಟ್ಟಿಯ ಕುರಿತು ಮೋಸ ಅಥವಾ ತಪ್ಪಿನಿಂದಾಗಿರಬಹುದಾದ ಭೌತಿಕ ತಪ್ಪು ಹೇಳಿಕೆ ಬಗ್ಗೆ ಸಮಂಜಸವಾದ ಭರವಸೆ ಪಡೆಯುವುದು, ನಮ್ಮ ಅಭಿಪ್ರಾಯವನ್ನು ಹೊಂದಿದ ಲೆಕ್ಕ ಪರಿಶೋಧನಾ ವರದಿಯನ್ನು ನೀಡುವುದು ನಮ್ಮ ಉದ್ದೇಶವಾಗಿದೆ. ಸಮಂಜಸವಾದ ಭರವಸೆ ಒಂದು ಉನ್ನತ ಮಟ್ಟದ ಭರವಸೆಯಾಗಿರುತ್ತದೆ. ಆದರೆ, ಎಸ್.ಎಎಸ್ ಪ್ರಕಾರ ನಡೆಸಿದ ಲೆಕ್ಕಪರಿಶೋಧನೆಯು ಭೌತಿಕ ತಪ್ಪು ಹೇಳಿಕೆಯು ಅಸ್ತಿತ್ವದಲ್ಲಿದ್ದಾಗ, ಯಾವಾಗಲೂ ಭೌತಿಕ ತಪ್ಪು ಹೇಳಿಕೆಯನ್ನು ಪತ್ತೆ ಹಚ್ಚುವುದೆಂದು ಖಾತರಿ ಇಲ್ಲ. ಮೋಸ ಅಥವಾ ತಪ್ಪಿನಿಂದಾಗಿ ತಪ್ಪು ಹೇಳಿಕೆಗಳು ಉದ್ಭವವಾಗಬಹುದು ಮತ್ತು ಭೌತಿಕವೆಂದು ಪರಿಗಣಿಸಬಹುದು, ಪ್ರತ್ಯೇಕವಾಗಿ ಅಥವಾ ಒಟ್ಟಾರೆ ಕ್ರೋಢೀಕೃತ ಆರ್ಥಿಕ ವಿವರಪಟ್ಟಿಯ ಆಧಾರದ ಮೇಲೆ ಬಳಕೆದಾರರ ಆರ್ಥಿಕ ನಿರ್ಧಾರಗಳ ಮೇಲೆ ಪ್ರಭಾವ ಬೀರಬಹುದೆಂದು ವಾಸ್ತವಿಕವಾಗಿ ನಿರೀಕ್ಷಿಸಬಹುದಾಗಿದೆ.

ಎಸ್ ಎಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯ ಭಾಗವಾಗಿ ನಾವು ವೃತ್ತಿಪರ ತೀರ್ಪನ್ನು ಚಲಾಯಿಸುತ್ತೇವೆ ಮತ್ತು ಲೆಕ್ಕಪರಿಶೋಧನೆಯ ಉದ್ದಕ್ಕೂ ವೃತ್ತಿಪರ ಸಂದೇಹವನ್ನು ಕಾಪಾಡಿಕೊಳ್ಳುತ್ತೇವೆ. ಹಾಗೂ ನಾವು;

- ವಂಚನೆ ಅಥವಾ ದೋಷದಿಂದಾಗಿ ಕ್ರೋಢೀಕೃತ ಹಣಕಾಸು ವಿವರಣೆಗಳ ವಸ್ತುನಿಷ್ಠ ತಪ್ಪುಹೇಳಿಕೆಗಳ ಅಪಾಯವನ್ನು ಗುರುತಿಸುತ್ತೇವೆ ಮತ್ತು ನಿರ್ಣಯಿಸುತ್ತೇವೆ, ಮತ್ತು ಆ ಅಪಾಯಗಳಿಗೆ ಸ್ಪಂಧಿಸುವ ಲೆಕ್ಕಪರಿಶೋಧನೆಯ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸಿ ನಿರ್ವಹಿಸುತ್ತೇವೆ ಮತ್ತು ನಮ್ಮ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ಸಾಕಷ್ಟು ಮತ್ತು ಸೂಕ್ತವಾದ ಲೆಕ್ಕಪರಿಶೋಧನಾ ಪುರಾವೆಗಳನ್ನು ಪಡೆದುಕೊಳ್ಳುತ್ತೇವೆ. ವಂಚನೆಯಿಂದ ಉಂಟಾಗುವ ವಸ್ತುನಿಷ್ಠ ತಪ್ಪುಗ್ರಹಿಕೆಯನ್ನು ಪತ್ತೆ ಮಾಡದಿರುವ ಅಪಾಯವು ದೋಷದಿಂದ ಉಂಟಾಗುವುದಕ್ಕಿಂತ ಹೆಚ್ಚಾಗಿರುತ್ತದೆ, ಏಕೆಂದರೆ ವಂಚನೆಯು ಒಡನಾಟ, ಖೋಟಾ, ಉದ್ದೇಶಪೂರ್ವಕ ಲೋಪಗಳು, ತಪ್ಪಾಗಿ ನಿರೂಪಣೆ ಅಥವಾ ಆಂತರಿಕ ನಿಯಂತ್ರಣದ ಅತಿಕ್ರಮಣವನ್ನು ಒಳಗೊಂಡಿರಬಹುದು.
- ಸಂದರ್ಭಕ್ಕೆ ಸೂಕ್ತವಾಗುವ ಲೆಕ್ಕಪರಿಶೋಧನೆಯ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸಲು ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಆಂತರಿಕ ಹಣಕಾಸು ನಿಯಂತ್ರಣಗಳ ತಿಳುವಳಿಕೆಯನ್ನು ಪಡೆದುಕೊಳ್ಳುತ್ತೇವೆ. ಅಧಿನಿಯಮದ ಪ್ರಕರಣ 143(3)(ಅ)ರಡಿ ಅಸ್ತಿತ್ವದಲ್ಲಿರುವ ಆರ್ಥಿಕ ವಿವರಪಟ್ಟಿಗಳಿಗೆ ಸಂಬಂಧಿಸಿದಂತೆ ಹಿಡುವಳಿ ಕಂಪನಿ ಮತ್ತು ಅದರ ಜಂಟಿ ನಿಯಂತ್ರಿತ ಘಟಕವು ಸಾಕಷ್ಟು ಆಂತರಿಕ ಆರ್ಥಿಕ ನಿಯಂತ್ರಣಗಳ ವ್ಯವಸ್ಥೆಯನ್ನು ಹೊಂದಿರುವ ಬಗ್ಗೆ ಮತ್ತು ಅಂತಹ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮದ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿ ಹೊಂದಿರುತ್ತೇವೆ.

- ಆಡಳಿತ ಮಂಡಳಿಯು ಉಪಯೋಗಿಸಿದ ಲೆಕ್ಕಾಚಾರ ನೀತಿಗಳ ಸೂಕ್ತತೆ ಮತ್ತು ಲೆಕ್ಕಾಚಾರದ ಅಂದಾಜಿನ ವಾಸ್ತವಿಕತೆ ಮತ್ತು ತತ್ಸಂಬಂಧ ಬಹಿರಂಗಪಡಿಸಿರುವ ಅಂಶಗಳ ಮೌಲ್ಯಮಾಪನ.
- ಆಡಳಿತ ಮಂಡಳಿಯು ಉಪಯೋಗಿಸಿರುವ ಮುಂದುವರೆಯುವ ಸಂಸ್ಥೆ ಆಧಾರದ ಲೆಕ್ಕಾಚಾರದ ಸೂಕ್ತ ಮತ್ತು ಲೆಕ್ಕ ಪರಿಶೋಧನೆಯ ಸಾಕ್ಷ್ಯದ ಆಧಾರದ ಮೇಲೆ ಮುಂದುವರೆದ ಸಂಸ್ಥೆಯ ರೀತಿಯಲ್ಲಿ ಕಂಪನಿಯ ಷರತ್ತುಗಳು ಅಸ್ತಿತ್ವದಲ್ಲಿದೆಯೇ ಎಂಬುದರ ಬಗ್ಗೆ ತೀರ್ಮಾನ ಮಾಡುತ್ತೇವೆ. ಭೌತಿಕ ಅನಿಶ್ಚಿತತೆ ಉದ್ಭವಿಸಿದರೆ ಕ್ರೋಢೀಕೃತ ಆರ್ಥಿಕ ವಿವರಪಟ್ಟಿಯಲ್ಲಿ ಸಂಬಂಧಿಸಿದ ಬಹಿರಂಗ ಮಾಡಿರುವ ಅಂಶದ ಬಗ್ಗೆ ನಾವು ನಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ಗಮನ ಸೆಳೆಯಬೇಕಾಗುತ್ತದೆ ಅಥವಾ ಅಂತಹ ಬಹಿರಂಗಗೊಂಡ ಅಂಶ ಸಾಕಾಗದಿದ್ದರೆ ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಬೇಕಾಗುತ್ತದೆ. ನಮ್ಮ ನಿರ್ಧಾರಗಳು, ನಮ್ಮ ಲೆಕ್ಕಪರಿಶೋಧನಾ ವರದಿ ದಿನಾಂಕದವರೆಗೆ ಪಡೆದ ಲೆಕ್ಕಾಚಾರ ಸಾಕ್ಷ್ಯದ ಆಧಾರದ ಮೇಲೆ ರೂಪುಗೊಂಡಿದೆ. ಆದಾಗ್ಯೂ ಭವಿಷ್ಯದ ಘಟನೆಗಳು ಹಾಗು ಪರಿಸ್ಥಿತಿಗಳು ಕಂಪನಿಯನ್ನು ಮುಂದುವರೆಯುವ ಸಂಸ್ಥೆಯನ್ನಾಗಿ ಮಾಡಲು ನಿಲ್ಲಿಸಬಹುದು.
- ಬಹಿರಂಗಪಡಿಸುವಿಕೆಗಳೂ ಸೇರಿದಂತೆ ಕ್ರೋಢೀಕೃತ ಹಣಕಾಸು ಹೇಳಿಕೆಗಳ ಒಟ್ಟಾರೆ ಪ್ರಸ್ತುತಿ, ರಚನೆ ಮತ್ತು ವಿಷಯವನ್ನು ಮೌಲ್ಯಮಾಪನ ಮಾಡಿ ಕ್ರೋಢೀಕೃತ ಹಣಕಾಸು ಹೇಳಿಕೆಗಳು ನ್ಯಾಯಯುತ ಪ್ರಸ್ತುತಿಯನ್ನು ಸಾಧಿಸುವ ರೀತಿಯಲ್ಲಿ ಆಧಾರವಾಗಿರುವ ವಹಿವಾಟುಗಳು ಮತ್ತು ಘಟನೆಗಳನ್ನು ಪ್ರತಿನಿಧಿಸುತ್ತವೆಯೇ ಎಂದು ಮೌಲ್ಯಮಾಪನ ಮಾಡುತ್ತೇವೆ.
- ಕ್ರೋಢೀಕೃತ ಹಣಕಾಸು ವಿವರಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ಹಿಡುವಳಿ ಕಂಪನಿ ಮತ್ತು ಅದರ ಜಂಟಿ ನಿಯಂತ್ರಿತ ಘಟಕದ ಹಣಕಾಸಿನ ಮಾಹಿತಿಯ ಬಗ್ಗೆ ಸಾಕಷ್ಟು ಮತ್ತು ಸೂಕ್ತವಾದ ಲೆಕ್ಕಪರಿಶೋಧಕ ಪುರಾವೆಗಳನ್ನು ಪಡೆದುಕೊಳ್ಳುತ್ತೇವೆ. ಹಿಡುವಳಿ ಕಂಪನಿಯ ಹಣಕಾಸು ವಿವರಗಳ ಲೆಕ್ಕಪರಿಶೋಧನೆಯ ನಿರ್ದೇಶನ, ಮೇಲ್ವಿಚಾರಣೆ ಮತ್ತು ಕಾರ್ಯಕ್ಷಮತೆಗೆ ನಾವು ಜವಾಬ್ದಾರರಾಗಿರುತ್ತೇವೆ. ಕ್ರೋಢೀಕೃತ ಹಣಕಾಸು ವಿವರಪಟ್ಟಿಯಲ್ಲಿ ಜಂಟಿ ನಿಯಂತ್ರಿತ ಕಂಪನಿಯೂ ಕೂಡ ಒಳಗೊಂಡಿದ್ದರೆ, ಅದನ್ನು ಬೇರೆ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮಾಡಿದ್ದರೆ, ಅಂತಹ ಲೆಕ್ಕಪರಿಶೋಧಕರು ಅವರು ನಡೆಸಿರುವ ಲೆಕ್ಕಪರಿಶೋಧನೆಯ ನಿರ್ದೇಶನ, ಮೇಲ್ವಿಚಾರಣೆ ಮತ್ತು ಕಾರ್ಯಕ್ಷಮತೆಗೆ ಅವರು ಜವಾಬ್ದಾರರಾಗುತ್ತಾರೆ. ನಾವು ನಮ್ಮ ಲೆಕ್ಕಪರಿಶೋಧನೆಗೆ ಮಾತ್ರ ಜವಾಬ್ದಾರಿಯನ್ನು ಹೊಂದಿರುತ್ತೇವೆ.

ಕ್ರೋಢೀಕೃತ ಆರ್ಥಿಕ ವಿವರಪಟ್ಟಿಯಲ್ಲಿ ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ ಆರ್ಥಿಕ ವಿವರಪಟ್ಟಿಯ ವಾಸ್ತವಿಕ ಜ್ಞಾನ ಹೊಂದಿರುವ ಬಳಕೆದಾರ ಪ್ರಭಾವಕ್ಕೊಳಗಾಗಬಹುದಾದ ಆರ್ಥಿಕ ತೀರ್ಮಾನಗಳನ್ನು ಸಮರ್ಪಕವಾಗಿ ಮಾಡುವ ತಪ್ಪು ಹೇಳಿಕೆಗಳ ಪ್ರಮಾಣ ವಾಸ್ತವಿಕವಾಗಿರುತ್ತದೆ. ನಾವು ಪ್ರಮಾಣಾತ್ಮಕ ಭೌತಿಕ ಮತ್ತು ಗುಣಾತ್ಮಕ ಅಂಶಗಳನ್ನು ಈ ಕೆಳಕಂಡಂತೆ ಪರಿಗಣಿಸುತ್ತೇವೆ.

ಅ) ನಮ್ಮ ಲೆಕ್ಕಪರಿಶೋಧನಾ ವರದಿಯ ಕೆಲಸದ ಆಯಾಮವನ್ನು ಯೋಜಿಸುವುದು ಮತ್ತು ನಮ್ಮ ಕೆಲಸದ ಫಲಿತಾಂಶವನ್ನು ಮೌಲ್ಯಮಾಪನ ಮಾಡುವುದು; ಮತ್ತು

ಆ) ಆರ್ಥಿಕ ವಿವರಪಟ್ಟಿಯಲ್ಲಿ ಯಾವುದೇ ಗುರುತಿಸಲ್ಪಟ್ಟ ತಪ್ಪು ಹೇಳಿಕೆಯ ಪ್ರಭಾವವನ್ನು ಮೌಲ್ಯಮಾಪನ ಮಾಡುವುದು.

ನಾವು ಇತರೆ ವಿಷಯಗಳ ಜೊತೆ, ಲೆಕ್ಕಾಚಾರ ಯೋಜಿತ ಆಯಾಮ ಮತ್ತು ಸಂಯಮ ಮತ್ತು ಗಣನೀಯ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು, ಆಂತರಿಕ ನಿಯಂತ್ರಣದಲ್ಲಿ ನಮ್ಮ ಲೆಕ್ಕಪರಿಶೋಧನೆ ಸಮಯದಲ್ಲಿ ಗುರುತಿಸಿರುವ ಗಣನೀಯ ಕೊರತೆಗಳನ್ನು ಒಳಗೊಂಡ ಅಂಶಗಳ ಬಗ್ಗೆ ಆಡಳಿತ ಮಂಡಳಿಯನ್ನು ಸಂಪರ್ಕಿಸುತ್ತೇವೆ.

ಕಂಪನಿಯ ಆಡಳಿತದ ಉಸ್ತುವಾರಿ ಹೊಂದಿರುವವರಿಗೆ ನಾವು ಸ್ವತಂತ್ರತೆಗೆ ಸಂಬಂಧಿಸಿದ ನೈತಿಕ ಅವಶ್ಯಕತೆಗಳನ್ನು ಅನುಸರಿಸಿದ್ದೇವೆ ಎನ್ನುವ ಕುರಿತು ಮಾಹಿತಿಯನ್ನು ಒದಗಿಸುತ್ತೇವೆ ಮತ್ತು ಸಮಂಜಸವಾಗಿ ಭಾವಿಸಬಹುದಾದ ಎಲ್ಲ ಸಂಬಂಧಗಳು ಮತ್ತು ಇತರ ವಿಷಯಗಳನ್ನು ಅವರೊಂದಿಗೆ ಸಂವಹನ ನಡೆಸುತ್ತೇವೆ ಮತ್ತು ಅನ್ವಯವಾಗುವ ಸಂಬಂಧಿತ ಸುರಕ್ಷತೆಗಳನ್ನು ಒದಗಿಸುತ್ತೇವೆ.

ಕಂಪನಿಯ ಆಡಳಿತದ ಉಸ್ತುವಾರಿ ಹೊಂದಿರುವವರೊಂದಿಗೆ ಸಂವಹನ ನಡೆಸಿರುವ ವಿಷಯಗಳಿಂದ, ಪ್ರಸ್ತುತ ಅವಧಿಯ ಕ್ರೋಢೀಕೃತ ಹಣಕಾಸು ವಿವರಗಳ ಲೆಕ್ಕಪರಿಶೋಧನೆಯಲ್ಲಿ ಹೆಚ್ಚು ಮಹತ್ವದ್ದಾಗಿರುವ ವಿಷಯಗಳನ್ನು ನಾವು ನಿರ್ಧರಿಸುತ್ತೇವೆ ಆದ್ದರಿಂದ ಅವು ಪ್ರಮುಖ ಲೆಕ್ಕಪರಿಶೋಧನೆಯ ವಿಷಯಗಳಾಗಿರುತ್ತವೆ. ಕಾನೂನು ಅಥವಾ ನಿಯಂತ್ರಣವು ಈ ವಿಷಯದ ಬಗ್ಗೆ ಸಾರ್ವಜನಿಕ ಬಹಿರಂಗಪಡಿಸುವಿಕೆಯನ್ನು ತಡೆಯದ ಹೊರತು ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ನಾವು ಈ ವಿಷಯಗಳನ್ನು ವಿವರಿಸುತ್ತೇವೆ. ಅತ್ಯಂತ ಅಪರೂಪದ ಸಂದರ್ಭಗಳಲ್ಲಿ, ನಮ್ಮ ವರದಿಯಲ್ಲಿ ಒಂದು ವಿಷಯವನ್ನು ಸಂವಹನ ಮಾಡಬಾರದು ಎಂದು ನಾವು ನಿರ್ಧರಿಸುತ್ತೇವೆ ಏಕೆಂದರೆ ಹಾಗೆ ಮಾಡುವುದರಿಂದ ಉಂಟಾಗುವ ದುಷ್ಪರಿಣಾಮಗಳು ಅಂತಹ ಸಂವಹನದ ಸಾರ್ವಜನಿಕ ಹಿತಾಸಕ್ತಿ ಪ್ರಯೋಜನಗಳನ್ನು ಮೀರಿಸುತ್ತದೆ ಎಂದು ಸಮಂಜಸವಾಗಿ ನಿರೀಕ್ಷಿಸಬಹುದು.

ಇತರೆ ಕಾನೂನು ಮತ್ತು ನಿಯಂತ್ರಣ ಅವಶ್ಯಕತೆಗಳ ಮೇಲೆ ವರದಿ.

1. ಅಧಿನಿಯಮದ ಪ್ರಕರಣ 143(5)ರ ಅನ್ವಯ, ನಾವು ಸೂಕ್ತವೆಂದು ಪರಿಗಣಿಸಿದ ಹಿಡುವಳಿ ಕಂಪನಿಯ ಪುಸ್ತಕಗಳು ಮತ್ತು ದಾಖಲೆಗಳ ಪರಿಶೀಲನೆಯ ಆಧಾರದ ಮೇಲೆ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ನಿರ್ದೇಶನ ಮತ್ತು ಹೆಚ್ಚುವರಿ ನಿರ್ದೇಶನಗಳ ಮೇರೆಗೆ ನಮ್ಮ ವರದಿಯನ್ನು "ಅನುಬಂಧ–ಅ" ರಲ್ಲಿ ಲಗತ್ತಿಸಿದ್ದೇವೆ.
2. ಅಧಿನಿಯಮದ ಪ್ರಕರಣ 143(3)ರ ಅವಶ್ಯಾನುಸಾರ, ನಾವು ಈ ಕೆಳಕಂಡಂತೆ ವರದಿ ಮಾಡುವುದೇನಂದರೆ;

ಎ) ನಾವು ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕೆ ಅಗತ್ಯವಿರುವ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ಸಾಧ್ಯವಾದಷ್ಟು ನಮಗೆ ತಿಳಿದ ಮಟ್ಟಿಗೆ ಕೇಳಿ ಪಡೆದಿರುತ್ತೇವೆ.

ಬಿ) ನಮ್ಮ ವರದಿಯ ಪರಿಮಿತ ಅಭಿಪ್ರಾಯಕ್ಕೆ ಆಧಾರ ವಿಭಾಗದಲ್ಲಿ ವಿವರಿಸಿದ ಸಂಭವನೀಯ ಪರಿಣಾಮಗಳನ್ನು ಹೊರತುಪಡಿಸಿ ನಮ್ಮ ಅಭಿಪ್ರಾಯದಲ್ಲಿ ಮೇಲೆ ತಿಳಿಸಿರುವ ಕ್ರೋಢೀಕೃತ ಹಣಕಾಸು ವಿವರಣಪಟ್ಟಿಯ ತಯಾರಿಕೆಗೆ ಸಂಬಂಧಿಸಿದಂತೆ ಕಾನೂನು ಪ್ರಕಾರ ಸರಿಯಾದ ಲೆಕ್ಕ ಪುಸ್ತಕಗಳನ್ನು ನಮಗೆ ಗೋಚರಿಸುವಂತೆ ಇಲ್ಲಿಯವರೆಗೆ ಇರಿಸಲಾಗಿದೆ.

ಸಿ) ಕ್ರೋಢೀಕೃತ ಆಯವ್ಯಯಪಟ್ಟಿ, ಲಾಭ ಮತ್ತು ನಷ್ಟದ ಕ್ರೋಢೀಕೃತ ವಿವರಣ ಪಟ್ಟಿ (ಇತರೆ ಸಮಗ್ರ ಆದಾಯಗಳನ್ನು ಒಳಗೊಂಡಂತೆ), ಈಕ್ವಿಟಿಯಲ್ಲಿ ಬದಲಾವಣೆಯ ಹೇಳಿಕೆ ಪಟ್ಟಿ ಮತ್ತು ನಗದು ಹರಿವಿನ ವಿವರಪಟ್ಟಿಗಳು ಲೆಕ್ಕಪತ್ರಗಳ ಪುಸ್ತಕದ ಜೊತೆ ತಾಳೆ ಹೊಂದುತ್ತವೆ.

ಡಿ) ನಮ್ಮ ವರದಿಯ ಪರಿಮಿತ ಅಭಿಪ್ರಾಯಕ್ಕೆ ಆಧಾರ ವಿಭಾಗದಲ್ಲಿ ವಿವರಿಸಿದ ಸಂಭವನೀಯ ಪರಿಣಾಮಗಳನ್ನು ಹೊರತುಪಡಿಸಿ ನಮ್ಮ ಅಭಿಪ್ರಾಯದಲ್ಲಿ, ಮೇಲಿನ ಕ್ರೋಢೀಕೃತ ಆರ್ಥಿಕ ವಿವರಪಟ್ಟಿ ತಿದ್ದುಪಡಿಯಾದ ಕಂಪನಿಗಳ (ಭಾರತೀಯ ಲೆಕ್ಕಾಚಾರದ ಗುಣಮಟ್ಟಗಳ) ನಿಯಮಗಳು, 2015ರ ಜೊತೆ ಓದಿಕೊಂಡಂತೆ ಅಧಿನಿಯಮದ ಪ್ರಕರಣ 133ರಲ್ಲಿ ನಿಗದಿಪಡಿಸಿರುವಂತೆ ಭಾರತೀಯ ಲೆಕ್ಕಾಚಾರದ ಗುಣಮಟ್ಟಗಳನ್ನು ಪಾಲಿಸಿದೆ.

ಇ) ಸರ್ಕಾರಿ ಕಂಪನಿಗಳಾಗಿದ್ದು, ಭಾರತ ಸರ್ಕಾರದ ಕಾರ್ಪೋರೇಟ್ ವ್ಯವಹಾರಗಳ ಮಂತ್ರಾಲಯದಿಂದ ಹೊರಡಿಸಲ್ಪಟ್ಟ ಅಧಿಸೂಚನೆ ಸಂಖ್ಯೆ: ಜಿ.ಎಸ್.ಆರ್.643 (ಇ) ದಿನಾಂಕ: 5ನೇ ಜೂನ್ 2015ರನ್ವಯ ಕಂಪನಿಗಳ ಅಧಿನಿಯಮ 2013ರ ಪ್ರಕರಣ 164, ಉಪ ಪ್ರಕರಣ (2)ರ ಪ್ರಾವಧಾನಗಳು ಹಿಡುವಳಿ ಕಂಪನಿ ಮತ್ತು ಅದರ ಜಂಟಿ ನಿಯಂತ್ರಿತ ಘಟಕಕ್ಕೆ ಅನ್ವಯವಾಗುವುದಿಲ್ಲ.

ಎಫ್) ಹಿಡುವಳಿ ಕಂಪನಿ ಮತ್ತು ಅದರ ಜಂಟಿ ನಿಯಂತ್ರಿತ ಘಟಕದ ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ನಿಯಂತ್ರಣಗಳ ಅಗತ್ಯತೆಗೆ ಸಂಬಂಧಿಸಿದಂತೆ ಮತ್ತು ಅಂತಹ ನಿಯಂತ್ರಣಗಳ ಕಾರ್ಯಾಚರಣೆ ಪರಿಣಾಮದ ಬಗ್ಗೆ ಅನುಬಂಧ–ಆ ರಲ್ಲಿ ನಮ್ಮ ಪ್ರತ್ಯೇಕ ವರದಿಯನ್ನು ಪರಾಮರ್ಶಿಸುವುದು.

ಜಿ) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ವಿಷಯಗಳು 2014ರ ನಿಯಮ 11ರ ಪ್ರಕಾರ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾದ ಇತರೆ ವಿಷಯಗಳ ಬಗ್ಗೆ ನಮ್ಮ ಅಭಿಪ್ರಾಯದಲ್ಲಿ ಮತ್ತು ಸಾಧ್ಯವಾದಷ್ಟು ನಮ್ಮ ಮಾಹಿತಿ ಪ್ರಕಾರ ಮತ್ತು ನಮಗೆ ನೀಡಿದ ವಿವರಣೆಗಳ ಪ್ರಕಾರ;

i. ಹಿಡುವಳಿ ಕಂಪನಿಯು ಬಾಕಿ ಇರುವ ದಾವೆಗಳ ಪರಿಣಾಮಗಳನ್ನು ಬಹಿರಂಗಪಡಿಸಿದೆ. ಕ್ರೋಢೀಕೃತ ಆರ್ಥಿಕ ವಿವರ ಪಟ್ಟಿಗೆ ಟಿಪ್ಪಣಿ ಸಂಖ್ಯೆ 26ನ್ನು ಅವಲೋಕಿಸುವುದು. ಜಂಟಿ ನಿಯಂತ್ರಿತ ಘಟಕದ ಆಡಳಿತ ಮಂಡಳಿಯ ಪ್ರಕಾರ, ಅದರ ಆರ್ಥಿಕ ಸ್ಥಿತಿಗತಿಯ ಮೇಲೆ ಪರಿಣಾಮ ಬೀರುವಂತಹ ಯಾವುದೇ ಬಾಕಿ ದಾವೆಗಳಿರುವುದಿಲ್ಲ.

ii. ಕಂಪನಿಯು ಮುಂಗಾಣಬಹುದಾದ ಉತ್ಪಾದಿತ ಒಪಂದಗಳನ್ನು ಒಳಗೊಂಡಂತೆ ಯಾವುದೇ ಭೌತಿಕ ನಷ್ಟವಿರುವ ದೀರ್ಘಾವದಿಯ ಒಪ್ಪಂದಗಳನ್ನು ಹೊಂದಿರುವುದಿಲ್ಲ. ಜಂಟಿ ನಿಯಂತ್ರಿತ ಕಂಪನಿಯ ಆಡಳಿತ ಮಂಡಳಿಯ ಪ್ರಕಾರ ಅನ್ವಯವಾಗುವ ಕಾನೂನು ಅಥವಾ ಲೆಕ್ಕಪರಿಶೋಧಕ ಮಾನದಂಡಗಳಡಿಯಲ್ಲಿ ಅಗತ್ಯವಿರುವಂತೆ ವ್ಯುತ್ಪನ್ನ ಒಪ್ಪಂದಗಳು ಸೇರಿದಂತೆ ದೀರ್ಘಕಾಲೀನ ಒಪ್ಪಂದಗಳಲ್ಲಿ ಯಾವುದೇ ನಿರೀಕ್ಷಿತ ನಷ್ಟಗಳಿಲ್ಲ.

iii. ವರ್ಷಾವಧಿಯಲ್ಲಿ ಜಂಟಿಯಾಗಿ ನಿಯಂತ್ರಿತ ಕಂಪನಿಯಿಂದ ಬಂಡವಾಳ ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ ವರ್ಗಾಯಿಸಬಹುದಾದ ಮೊತ್ತಗಳು ಇರಲಿಲ್ಲ.

iv. ಮೇಲಿನ (1) ರಿಂದ (3) ಐಟಂಗಳಲ್ಲಿ ಕಾಮೆಂಟ್ ಮಾಡಿದ ತೀರ್ಮಾನಕ್ಕೆ ಬರುವಲ್ಲಿ, ನಾವು ಇತರ ಕೆಲವು ಸ್ವತಂತ್ರ ಲೆಕ್ಕಪರಿಶೋಧಕರ ಜಂಟಿ ನಿಯಂತ್ರಿತ ಘಟಕದ ಲೆಕ್ಕಪರಿಶೋಧನಾ ವರದಿಯನ್ನು ಅವಲಂಭಿಸಿದ್ದೇವೆ.

ವಿಷ್ಣು ರಾಜೇಂದ್ರನ್& ಕಂ ಪರವಾಗಿ
ಚಾರ್ಟರ್ಡ್ ಅಕೌಂಟಂಟ್ಸ್
ಸಂಸ್ಥೆಯ ನೋಂದಣಿ ಸಂ.004741ಎಸ್

ಸಹಿ/–
ಸಿಎ ಥಾಮ್ ಜೋಸೆಫ್ ಎಫ್‌ಸಿಎ
ಪಾಲುದಾರರು
ಸದಸ್ಯತ್ವ ಸಂಖ್ಯೆ: 201502

ಸ್ಥಳ : ಬೆಂಗಳೂರು
ದಿನಾಂಕ : 25ನೇ ನವೆಂಬರ್, 2020
UDIN : 20201502AAAABX5046

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ – ಅ

ಕಂಪನಿಗಳ ಅಧಿನಿಯಮ, 2013ರ ಪ್ರಕರಣ 143ರ ಅಡಿ ನಿರ್ದೇಶನಗಳು.

ಜಂಟಿ ನಿಯಂತ್ರಿತ ಘಟಕದ ಲೆಕ್ಕ ಪರಿಶೋಧಕರ ವರದಿಗಳನ್ನು ನಾವು ಮೇಲೆ ತಿಳಿಸಿರುವ ಘಟಕಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಅವಲಂಭಿಸಿದ್ದೇವೆ.

ನಿರ್ದೇಶನಗಳು

ಕ್ರ ಸಂ.	ನಿರ್ದೇಶನಗಳು	ತೆಗೆದುಕೊಂಡ ಕ್ರಮ
1	ಕಂಪನಿಯು ಎಲ್ಲ ವ್ಯವಹಾರಗಳನ್ನು ಐಟಿ ವ್ಯವಸ್ಥೆ ಮೂಲಕ ಪ್ರಕ್ರಿಯೆಗೊಳಿಸುವ ವ್ಯವಸ್ಥೆ ಹೊಂದಿದೆಯೇ? ಹೌದು ಎಂದಾದರೆ, ಆರ್ಥಿಕ ಪರಿಣಾಮದ ಜೊತೆ ಲೆಕಪತ್ರಗಳ ಋಜುತ್ವದ ಮೇಲೆ ಐಟಿ ವ್ಯವಸ್ಥೆ ಹೊರಗಡೆ ಲೆಕ್ಕಾಚಾರದ ವ್ಯವಹಾರಗಳ ಪರಿಣಾಮ, ಯಾವುದಾದರೂ ಇದ್ದರೆ ಹೇಳಬಹುದು.	**ಹಿಡುವಳಿ ಕಂಪನಿ :** ಮಾರಾಟ, ಸಿಬ್ಬಂದಿ ಮಾಹಿತಿ, ವೇತನ ಪಟ್ಟಿ, ಸ್ಥಿರಾಸ್ತಿಗಳು ಮತ್ತು ಇತರೆ ಭೌತಿಕ ಲೆಡ್ಜರ್‌ಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಹಸ್ತಚಾಲಿತವಾಗಿ ದಾಖಲಿಸಲಾಗುತ್ತಿದೆ. ಲೆಕ್ಕಪತ್ರಗಳ ವಹಿಗಳನ್ನು ಸಾಮಾನ್ಯವಾಗಿ ಟ್ಯಾಲಿ ಅಕೌಂಟಿಗ್ ಪ್ಯಾಕೇಜ್‌ನಲ್ಲಿ ನಿರ್ವಹಿಸಲಾಗಿದೆ. ಕಂಪನಿಯು ಕೆಲ ನವೀಕರಿಸಬಹುದಾದ ಇಂಧನ ಯೋಜನೆಗಳಾದ ಪಿ.ಐ.ಸಿ.ಒ., ಸೋಲಾರ್ ವಾಟರ್ ಪಂಪ್ಸ್ ಇತ್ಯಾದಿಗಳ ಅರ್ಜಿಗಳ ಸ್ಥಿತಿಯ ಜಾಡುಗಳ ಪ್ರಕ್ರಿಯೆಯನ್ನು ಗಣಕೀಕರಿಸಿದೆ ಎಂದು ಲೆಕ್ಕಪರಿಶೋಧನಾ ಸಂದರ್ಭದಲ್ಲಿ ತಿಳಿಸಲಾಯಿತು. ಕಂಪನಿಯು ಇನ್ನೂ ಇತರೆ ನವೀಕರಿಸಬಹುದಾದ ವಿದ್ಯುತ್ ಯೋಜನೆಗಳ ಗಣಕೀಕರಣ ಮತ್ತು ಅಭಿವರ್ಧಕರುಗಳ ಉಪಯೋಗಕ್ಕಾಗಿ ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ವೆಬ್ ಆಧಾರಿತ ತಂತ್ರಾಂಶ ವ್ಯವಸ್ಥೆಗೆ ಸಂಯೋಜನೆ ಮತ್ತು ಕೆಲವು ಆಂತರಿಕ ದೈನಂದಿನ ಕಾರ್ಯಗಳ ಗಣಕೀಕರಣ ಪ್ರಕ್ರಿಯೆಯಲ್ಲಿದೆ. **ಜಂಟಿ ನಿಯಂತ್ರಿತ ಘಟಕ:** ಹೌದು, ಎಲ್ಲ ಲೆಕ್ಕಪರಿಶೊಧಕ ವಹಿವಾಟುಗಳನ್ನು ಐಟಿ ವ್ಯವಸ್ಥೆಯ ಮೂಲಕ ಪ್ರಕ್ರಿಯೆಗೊಳಿಸಲು ಕಂಪನಿಯು ವ್ಯವಸ್ಥೆಯನ್ನು ಹೊಂದಿದೆ ಮತ್ತು ಐಟಿ ವ್ಯವಸ್ಥೆಯ ಹೊರಗೆ ಯಾವುದೇ ವಹಿವಾಟುಗಳನ್ನು ಪ್ರಕ್ರಿಯೆಗೊಳಿಸಲಾಗುವುದಿಲ್ಲ.
2	ಕಂಪನಿಗೆ ಸಾಲಗಾರರು ನೀಡಿದ ಸಾಲವನ್ನು ಕಂಪನಿಯು ಸಾಲ ಮರುಪಾವತಿ ಮಾಡಲು ಅಸಮರ್ಥವಾದ ಪ್ರಯುಕ್ತ ಹಾಲಿ ಜಾಲ್ತಿಯಲ್ಲಿರುವ ಸಾಲ ಪುನರ್ರಚನೆ ಅಥವಾ ಮನ್ನಾ ಪ್ರಕರಣ ಅಥವಾ ಲೆಕ್ಕದಿಂದ ತೆಗೆದುಹಾಕುವ ಋಣ, ಸಾಲ, ಬಡ್ಡಿ, ಇತರೆ ಪ್ರಕರಣಗಳು ಯಾವುದಾದರೂ ಇದೆಯೇ? ಹಾಗಿದ್ದಲ್ಲಿ, ಆರ್ಥಿಕ ಪರಿಣಾಮಗಳನ್ನು ಹೇಳಬಹುದು.	**ಹಿಡುವಳಿ ಕಂಪನಿ** ಕಂಪನಿಯ ಸಾಲ ಮರುಪಾವತಿ ಸಾಮರ್ಥ್ಯವಿಲ್ಲದ ಕಾರಣ, ಕಂಪನಿಗೆ ಸಾಲಗಾರರಿಂದ ಹಾಲಿ ಜಾಲ್ತಿಯಲ್ಲಿರುವ ಸಾಲಗಳ ಪುನರ್ರನೆ ಅಥವಾ ಮನ್ನಾ ಪ್ರಕರಣಗಳು ಅಥವಾ ಲೆಕ್ಕದಿಂದ ತೆಗೆದು ಹಾಕುವ ಋಣ, ಸಾಲ, ಬಡ್ಡಿ ಇತರೆ ಪ್ರಕರಣಗಳು ಇರುವುದಿಲ್ಲ.

		ಜಂಟಿ ನಿಯಂತ್ರಿತ ಸಂಸ್ಥೆ ಕಂಪನಿಯ ಸಾಲ ಮರುಪಾವತಿ ಸಾಮರ್ಥ್ಯವಿಲ್ಲದ ಕಾರಣ, ಕಂಪನಿಗೆ ಸಾಲಗಾರರಿಂದ ಹಾಲಿ ಜಾಲ್ತಿಯಲ್ಲಿರುವ ಸಾಲಗಳ ಪುನರ್ರನೆ ಅಥವಾ ಮನ್ನಾ ಪ್ರಕರಣಗಳು ಅಥವಾ ಲೆಕ್ಕದಿಂದ ತೆಗೆದು ಹಾಕುವ ಋಣ, ಸಾಲ, ಬಡ್ಡಿ ಇತರೆ ಪ್ರಕರಣಗಳು ಇರುವುದಿಲ್ಲ.
3	ಕೇಂದ್ರ ಅಥವಾ ರಾಜ್ಯ ಏಜೆನ್ಸಿಗಳಿಂದ ನಿರ್ದಿಷ್ಟ ಯೋಜನೆಗಳಿಗೆ ಸ್ವೀಕೃತಗೊಂಡ ಅಥವಾ ಸ್ವೀಕರಿಸಲ್ಪಡುವ ಅನುದಾನ ಸೂಕ್ತವಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆಯೇ ಅಥವಾ ಅದರ ಷರತ್ತು ನಿಬಂಧನೆಗಳನ್ವಯ ಬಳಕೆ ಮಾಡಲಾಗಿದೆಯೇ? ಉಲ್ಲಂಘನೆಗೊಂಡ ಪ್ರಕರಣಗಳನ್ನು ಪಟ್ಟಿ ಮಾಡಿ.	**ಹಿಡುವಳಿ ಕಂಪನಿ** ನಿರ್ದಿಷ್ಟ ಯೋಜನೆಗಳಿಗೆ ಕೇಂದ್ರ ಅಥವಾ ರಾಜ್ಯ ಏಜೆನ್ಸಿಗಳಿಂದ ಸ್ವೀಕರಿಸಲಾದ ಅನುದಾನವನ್ನು ಸೂಕ್ತವಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ ಮತ್ತು ಅದರ ಷರತ್ತು ಮತ್ತು ನಿಬಂಧನೆಗಳನುಸಾರ ಉಪಯೋಗಿಸಲಾಗಿದೆ. ಬಳಕೆಯಾಗದ ಹಣವನ್ನು ಸಂಬಂಧಪಟ್ಟ ಸರ್ಕಾರಿ ಇಲಾಖೆಗಳಿಗೆ ಹಿಂದಿರುಗಿಸಲಾಗಿದೆ. ಅವುಗಳನ್ನು ಬೇರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿರುವುದಿಲ್ಲ. **ಜಂಟಿ ನಿಯಂತ್ರಿತ ಸಂಸ್ಥೆ** ಕಂಪನಿಯು ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದಿಂದ ಅನುದಾನವನ್ನು ಸ್ವೀಕರಿಸಿದೆ ಮತ್ತು ಅದನ್ನು ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.
4	ಹೊಸ ಯೋಜನೆಗಳ ಸ್ಥಾಪನೆಗೆ ಭೂಸ್ವಾಧೀನ ಮಾಡಲಾಗಿರುವ ಎಲ್ಲ ಪ್ರಕರಣಗಳಲ್ಲಿ ಪರಿಹಾರ ಪಾವತಿ ಮತ್ತು ಪಾರದರ್ಶಕವಾಗಿ ನಡೆದಿರುವ ಬಗ್ಗೆ ವರದಿ ಮಾಡಿ. ಉಲ್ಲಂಘನೆಯಾಗಿರುವ ಪ್ರಕರಣಗಳನ್ನು ದಯವಿಟ್ಟು ವಿವರಿಸಬಹುದು.	**ಹಿಡುವಳಿ ಕಂಪನಿ:** ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯ ಪ್ರಕಾರ ಕಂಪನಿಯು ವರ್ಷಾವಧಿಯಲ್ಲಿ ಹೊಸ ಯೋಜನೆಗಳ ಸ್ಥಾಪನೆಗಾಗಿ ಯಾವುದೇ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವುದಿಲ್ಲ.
5	ಕಂಪನಿಯು ಒಪ್ಪಂದಗಳ ಷರತ್ತಿನ ಪ್ರಕಾರ ಆದಾಯದ ಮರುಪಾವತಿಗೆ ಒಂದು ಪರಿಣಾಮಕಾರಿ ವ್ಯವಸ್ಥೆ ಹೊಂದಿದೆಯೇ ಮತ್ತು ಆದಾಯವನ್ನು ಲೆಕ್ಕಪತ್ರಗಳ ಪುಸ್ತಕದಲ್ಲಿ ಅನ್ವಯವಾಗುವ ಲೆಕ್ಕಾಚಾರದ ಗುಣಮಟ್ಟಗಳ ಪ್ರಕಾರ ಸೂಕ್ತವಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆಯೇ?	**ಹಿಡುವಳಿ ಕಂಪನಿ:** ಕಂಪನಿಯು ಒಪ್ಪಂದದ ಪ್ರಕಾರ ಆದಾಯ ಮರುಪಾವತಿಗೆ ಸೂಕ್ತ ನ್ಯಾಯಯುತ ಪರಿಣಾಮಕಾರಿ ವ್ಯವಸ್ಥೆ ಹೊಂದಿದೆ ಮತ್ತು ಭಾರತೀಯ ಲೆಕ್ಕಾಚಾರ ಗುಣಮಟ್ಟಗಳ ಪ್ರಕಾರ ಆದಾಯವನ್ನು ಲೆಕ್ಕಪತ್ರಗಳ ಪುಸ್ತಕದಲ್ಲಿ ಸೂಕ್ತವಾಗಿ ಲೆಕ್ಕಕ್ಕೆ ತೆಗೆದುಕೊಂಡಿದೆ. ನಮ್ಮ ಅಭಿಪ್ರಾಯದಲ್ಲಿ ಕಂಪನಿಯು ಸಂಪೂರ್ಣ ಪ್ರಕ್ರಿಯೆಯನ್ನು ಸ್ವಯಂಚಾಲಿತಗೊಳಿಸಬೇಕು ಹಾಗೂ ಗಣಕೀಕರಣಗೊಳಿಸಬೇಕು. ಮುಂದುವರೆದು, ಕಂಪನಿಯು ಅದರ ವ್ಯವಹಾರದ ಗಾತ್ರ ಮತ್ತು ಸ್ವರೂಪಕ್ಕೆ ತಕ್ಕಂತೆ ತನ್ನ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಶಕ್ತಿಯುತಗೊಳಿಸಬೇಕು.

6	ಸಾಲಗಳ/ಅನುದಾನ/ಸಹಾಯಧನಗಳ ಪರಿಣಾಮಕಾರಿ ಬಳಕೆಯ ವ್ಯವಸ್ಥೆಯನ್ನು ಪರಿಶೀಲಿಸಿ. ಬೇರೆ ಉದ್ದೇಶಕ್ಕೆ ಅನುದಾನದ ಬಳಕೆ ಪ್ರಕರಣಗಳನ್ನು ಪಟ್ಟಿ ಮಾಡಿ.	**ಹಿಡುವಳಿ ಕಂಪನಿ:** ಕಂಪನಿಯು ಅನುದಾನ ಬಳಕೆಗೆ ಪರಿಣಾಮಕಾರಿ ವ್ಯವಸ್ಥೆ ಹೊಂದಿದೆ. ಸ್ವತಂತ್ರ ಚಾರ್ಟರ್ಡ್ ಅಕೌಂಟಂಟ್ ರವರು ಸರ್ಕಾರಿ ಅನುದಾನವನ್ನು ನಿಗದಿತ ಉದ್ದೇಶಕ್ಕೆ ಬಳಕೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ನೀಡಿರುವ ಬಳಕೆ ಪ್ರಮಾಣ ಪತ್ರದ ಮೇಲೆ ನಾವು ಸಂಪೂರ್ಣವಾಗಿ ಅವಲಂಬಿತರಾಗಿದ್ದೇವೆ. ಆದಾಗ್ಯೂ, ಯೋಜನೆಗಳ ಪ್ರಕಾರ ಅನುದಾನದ ಬಳಕೆಯಲ್ಲಿ ಸಾಕಷ್ಟು ವಿಳಂಭಬವಾಗಿದೆ. ಫಲಾನುಭವಿಗಳನ್ನು ಗುರುತಿಸುವಲ್ಲಿ, ಒಪ್ಪಂದಗಳನ್ನು ಜಾರಿಗೊಳಿಸುವಲ್ಲಿ, ಇತರೆ ವಾಸ್ತವಿಕ ಕಾರಣಗಳಿಂದಾಗಿ ಸಾಕಷ್ಟು ವಿಳಂಬವಾಗಿದೆ. ಆದರೆ, ಇದು ಸಂಪೂರ್ಣವಾಗಿ ಅನುದಾನದ ಉದ್ದೇಶ ಮತ್ತು ಕಾಲಮಿತಿಯೊಳಗೆ ಉದ್ದೇಶ ಈಡೇರಿಕೆ ಸಾಧಿಸುವಲ್ಲಿ ವಿಫಲವಾಗಬಹುದು. ಕಂಪನಿಯು ಭವಿಷ್ಯದಲ್ಲಿ ಅಂತಹ ವಿಳಂಬವನ್ನು ತಡೆಗಟ್ಟಲು ಮತ್ತು ಉದ್ದೇಶವನ್ನು ಪರಿಣಾಮಕಾರಿಯಾಗಿ ಈಡೇರಿಸಲು ನೂತನ ಕಾರ್ಯತಂತ್ರವನ್ನು ರೂಪಿಸಬೇಕು. ಭವಿಷ್ಯದ ಯೋಜನೆಗಳು ಮತ್ತು ಬಳಕೆ ಯೋಜನೆ ಬಗ್ಗೆ ದಾಖಲೀಕರಣದ ಗೈರು ಹಾಜರಿಯ ಕಾರಣದಿಂದಾಗಿ, ನಾವು ಕ್ರೋಢೀಕೃತ ಆರ್ಥಿಕ ವಿವರಪಟ್ಟಿಯ ಮೇಲೆ ಬಳಕೆಯಾಗದ ಅನುದಾನ, ಯಾವುದಾದರೂ ಇದ್ದರೆ, ಅದರ ಪರಿಣಾಮದ ಬಗ್ಗೆ ವ್ಯಾಖ್ಯಾನ ಮಾಡಲು ಸಾಧ್ಯವಾಗುವುದಿಲ್ಲ. ಆದಾಗ್ಯೂ, ಕಂಪನಿಯು ತನ್ನ ಗಾತ್ರ ಮತ್ತು ಸ್ವರೂಪಕ್ಕೆ ತಕ್ಕಂತೆ, ಅದರ ಆಂತರಿಕ ನಿಯಂತ್ರಣ ವ್ಯವಸ್ಥೆ ಮತ್ತು ಅನುದಾನದ ಪ್ರಕ್ರಿಯೆಯ ಮೇಲ್ವಿಚಾರಣೆಯನ್ನು ಶಕ್ತಿಗೊಳಿಸುವ ಅವಶ್ಯಕತೆ ಇದೆ. ಸಹಾಯಧನದ ವಿವರವನ್ನು ಈ ಕೆಳಕಂಡ ಕೋಷ್ಟಕದಲ್ಲಿ ಸಲ್ಲಿಸಿದೆ. ಇಂಧನ ದಕ್ಷತಾ ಸಂಸ್ಥೆಯ ಯೋಜನೆಯ ಬಳಕೆಯಲ್ಲಿ ರೂ.12,211 ಗಳ ವ್ಯತ್ಯಾಸವನ್ನು ಗಮನಿಸಲಾಗಿದೆ.

ಯೋಜನೆಗಳು	01.04.2020 ರಂದು ಇರುವಂತೆ ಪ್ರಾರಂಭಿಕ ಶಿಲ್ಕು	2019–20ನೇ ಆರ್ಥಿಕ ವರ್ಷದಲ್ಲಿ ಸ್ವೀಕರಿಸಲಾದದ್ದು	ಒಟ್ಟು	2019–20ನೇ ಆರ್ಥಿಕ ವರ್ಷದಲ್ಲಿನ ಬಿಡುಗಡೆಗಳು	31ನೇ ಮಾರ್ಚ್ 2020ರಂದು ಇರುವಂತೆ ಮುಕ್ತಾಯದ ಶಿಲ್ಕು	% ಪ್ರಗತಿ
ಎಂಎನ್ಆರ್ಇ	1,34,02,500	11,85,49,984	13,19,52,484	13,19,52,484	–	100.00
ಬಿಇಇ	2,83,55,967	4,21,01,396	7,04,57,363	4,07,73,232	2,96,96,342	57.48
ಕರ್ನಾಟಕ ಸರ್ಕಾರ	3,14,32,58,836	5,29,67,000	3,19,62,25,836	2,50,49,28,259	69,12,97,577	78.37

7	ಐ.ಆರ್.ಆರ್. ಮತ್ತು ಮರುಪಾವತಿ ಅವಧಿ ಸೇರಿದಂತೆ ಪ್ರಮುಖ ಬಂಡವಾಳ ವೆಚ್ಚ ಅಥವಾ ವಿಸ್ತರಣೆಯ ವೆಚ್ಚ ಲಾಭದ ವಿಸ್ತರಣೆಯನ್ನು ಪರೀಕ್ಷಿಸಿ.	**ಹಿಡುವಳಿ ಕಂಪನಿ:** ಕಂಪನಿಯು ಪಾವಗಡದಲ್ಲಿ 50 ಮೆ.ವ್ಯಾ. ನ ಸೌರ ವಿದ್ಯುತ್ ಯೋಜನೆಯನ್ನು ಕಾರ್ಯಾರಂಭಗೊಳಿಸಿದೆ. ಈ ಯೋಜನೆಗೆ ಅನುದಾನಗಳ ಬಳಕೆ ಮತ್ತು ಕಂಪನಿಯು ಪ್ರಸ್ತಾವಿಸಿದ ಬಂಡವಾಳವನ್ನು ಪರಿಗಣನೆಗೆ ತೆಗೆದುಕೊಂಡ ದರವನ್ನು ಕರ್ನಾಟಕ

		ವಿದ್ಯುತ್ ನಿಯಂತ್ರಣ ಆಯೋಗವು ನಿರ್ಧರಿಸಿದೆ. ಅದರಂತೆ, ಅನ್ವಯಿಕ ದರಗಳ ವಿವಿಧ ಹಂತವನ್ನು 19.59% ರಂತೆ ಈಕ್ವಿಟಿ ಮೇಲೆ ಬರುವ ಆದಾಯದ ಮೇಲೆ ನಿರ್ಧರಿಸಿ ಲೆಕ್ಕಹಾಕಲಾಗುತ್ತದೆ. ಆದಕಾರಣ, ಐ.ಆರ್.ಆರ್. ನಿರ್ಧರಿಸಿರುವುದಿಲ್ಲ.
8	ಲೆಕ್ಕಪರಿಶೋಧನೆಗೊಳಪಟ್ಟ ಸಂಸ್ಥೆಯು ಅದರ ಕಾರ್ಯಾಚರಣೆಯನ್ನು ಗಣಕೀಕರಣಗೊಳಿಸಿದ್ದರೆ ಅಥವಾ ಭಾಗಶ: ಗಣಕೀಕರಣಗೊಳಿಸಿದ್ದರೆ, ಕಂಪನಿಯ ಎಷ್ಟು ದತ್ತಾಂಶಗಳು ವಿದ್ಯುನ್ಮಾನ ರೂಪದಲ್ಲಿದೆ, ಲೆಕ್ಕಪತ್ರ, ಮಾರಾಟ, ಸಿಬ್ಬಂಧಿಗಳ ಮಾಹಿತಿ, ವೇತನಪಟ್ಟಿ, ತಪಶೀಲು ಪಟ್ಟಿ, ಇತರೆ ಗಣಕೀಕರಣಗೊಂಡಿದೆಯೇ ಮತ್ತು ಸಂಸ್ಥೆಯು ದತ್ತಾಂಶ/ತಂತ್ರಾಂಶ/ಹಾರ್ಡ್‌ವೇರ್‌ಗಳ ಸೂಕ್ತ ಸುರಕ್ಷಾ ನೀತಿಯನ್ನು ರೂಪಿಸಿದೆಯೇ?	**ಹಿಡುವಳಿ ಕಂಪನಿ:** ಕಂಪನಿಯು ತನ್ನ ಬಾಗಶ: ಕಾರ್ಯಾಚರಣೆಯನ್ನು ಮಾತ್ರ ಗಣಕೀಕರಣಗೊಳಿಸಿದೆ. ಗಣಕಯಂತ್ರಗಳನ್ನು ಪ್ರಮುಖವಾಗಿ ಪತ್ರ ವ್ಯವಹಾರ ಮತ್ತು ದತ್ತಾಂಶ ನಿರ್ವಹಣೆ ಮಾಡುವುದಕ್ಕೆ ಬಳಸಲಾಗುತ್ತಿದೆ. ಮಾರಾಟ, ಸಿಬ್ಬಂಧಿ ಮಾಹಿತಿ, ವೇತನ ಪಟ್ಟಿ ಮತ್ತು ಇತರೆ ಭೌತಿಕ ಲೆಡ್ಜರ್ ಮತ್ತು ಸಬ್ ಲೆಡ್ಜರ್‌ಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಹಸ್ತಚಾಲಿತವಾಗಿ ದಾಖಲಿಸಿಕೊಳ್ಳಲಾಗುತ್ತಿದೆ ಮತ್ತು ನಿರ್ವಹಿಸಲಾಗುತ್ತಿದೆ. ಲೆಕ್ಕಪುಸ್ತಕಗಳನ್ನು ಸಾಮಾನ್ಯವಾಗಿ ಟ್ಯಾಲಿ ಅಕೌಂಟಿಂಗ್ ಪ್ಯಾಕೇಜ್‌ನಲ್ಲಿ ನಿರ್ವಹಿಸಲಾಗುತ್ತಿದೆ. ಕಂಪನಿಯು ಅರ್ಜಿಗಳು, ಸ್ಥಿತಿಯ ಜಾಡು, ಪಿಐಸಿಒ, ಸೌರ ಜಲ ಪಂಪುಗಳು, ಇತರೆ ನವೀಕರಿಸಬಹುದಾದ ವಿದ್ಯುತ್ ಯೋಜನೆಗಳ ಅರ್ಜಿ ಸ್ಥಿತಿಯ ಜಾಡುಗಳ ತರಹದ ಪ್ರಕ್ರಿಯೆಯನ್ನು ಗಣಕೀಕರಿಸಿದೆ ಎಂದು ಲೆಕ್ಕಪರಿಶೋಧನಾ ಸಂದರ್ಭದಲ್ಲಿ ತಿಳಿಸಲಾಯಿತು. ಕಂಪನಿಯು ಇನ್ನೂ ಇತರೆ ನವೀಕರಿಸಬಹುದಾದ ವಿದ್ಯುತ್ ಯೋಜನೆಗಳ ಗಣಕೀಕರಣ ಮತ್ತು ಅಭಿವರ್ಧಕರುಗಳ ಉಪಯೋಗಕ್ಕಾಗಿ ನವೀಕರಿಸಬಹುದಾದ ಯೋಜನೆಗಳನ್ನು ವೆಬ್ ಆಧಾರಿತ ತಂತ್ರಾಂಶ ವ್ಯವಸ್ಥೆಗೆ ಸಂಯೋಜನೆ ಮತ್ತು ಕೆಲವು ದೈನಂದಿನ ಆಂತರಿಕ ಕಾರ್ಯಗಳ ಗಣಕೀಕರಣ ಪ್ರಕ್ರಿಯೆಯಲ್ಲಿದೆ. ಆದಾಗ್ಯೂ, ಕಂಪನಿಯು ತನ್ನ ವ್ಯವಹಾರಗಳ ಗಾತ್ರ ಮತ್ತು ಸ್ವರೂಪಕ್ಕೆ ತಕ್ಕಂತೆ ಅದರ ವ್ಯವಸ್ಥೆಯನ್ನು ಗಣಕೀಕರಿಸಿಕೊಳ್ಳುವ ಅವಶ್ಯಕತೆ ಇದೆ. ದತ್ತಾಂಶ/ತಂತ್ರಾಂಶ/ಹಾರ್ಡ್‌ವೇರ್‌ಗಳ ಸೂಕ್ತ ಸುರಕ್ಷಾ ನೀತಿಗಳ ಬಗ್ಗೆ ಕಂಪನಿಯು ಈ ಕ್ಷೇತ್ರದಲ್ಲಿ ಪರಿಣಿತ ಸಮರ್ಥರಿಂದ ಅಭಿಪ್ರಾಯವನ್ನು ಪಡೆಯಲು ನಾವು ಸಲಹೆ ನೀಡುತ್ತೇವೆ.

ವಿಷ್ಣು ರಾಜೇಂದ್ರನ್ & ಕಂ ಪರವಾಗಿ
ಚಾರ್ಟರ್ಡ್ ಅಕೌಂಟಂಟ್ಸ್
ಸಂಸ್ಥೆಯ ನೋಂದಣಿ ಸಂ.004741ಎಸ್

ಸಹಿ/–
ಸಿಎ ಥಾಮ್ ಜೋಸೆಫ್ ಎಫ್‌ಸಿಎ
ಪಾಲುದಾರರು
ಸದಸ್ಯತ್ವ ಸಂಖ್ಯೆ: 201502

ಸ್ಥಳ : ಬೆಂಗಳೂರು
ದಿನಾಂಕ : 25ನೇ ನವೆಂಬರ್, 2020
UDIN : 20201502AAAABX5046

ಸ್ವತಂತ್ರ ಲೆಕ್ಕಪರಿಶೋಧಕರ ವರದಿ ಅನುಬಂಧ – ಆ

(ನಮ್ಮ ಸಮ ದಿನಾಂಕದ ವರದಿಯ "ಇತರೆ ಕಾನೂನು ಮತ್ತು ನಿಯಂತ್ರಣ ಅವಶ್ಯಕತೆಗಳ ಮೇಲೆ ವರದಿ"ಯ ವಿಭಾಗದಲ್ಲಿನ ಕಂಡಿಕೆ 2ಎಫ್ ರಲ್ಲಿ ಉಲ್ಲೇಖಿಸಲಾಗಿದೆ)

ಕಂಪನಿಗಳ ಕಾಯಿದೆ, 2013ರ ಪ್ರಕರಣ 143, ಉಪ ಪ್ರಕರಣ 3 ಖಂಡ(1)ರನ್ವಯ ಆಂತರಿಕ ಆರ್ಥಿಕ ನಿಯಂತ್ರಣಗಳ ಮೇಲೆ ವರದಿ.

31ನೇ ಮಾರ್ಚ್, 2020ರಂದು ಕೊನೆಗೊಂಡ ವರ್ಷದ "ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ" (ಹಿಡುವಳಿ ಕಂಪನಿ) ಮತ್ತು ಅದರ ಜಂಟಿ ನಿಯಂತ್ರಿತ ಘಟಕದ ಆರ್ಥಿಕ ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳನ್ನು ಹಿಡುವಳಿ ಕಂಪನಿಯ ಕ್ರೋಢೀಕೃತ ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಯೊಂದಿಗೆ ಲೆಕ್ಕಪರಿಶೋಧನೆ ಮಾಡಿದ್ದೇವೆ.

ಆಂತರಿಕ ಆರ್ಥಿಕ ನಿಯಂತ್ರಣಗಳಿಗೆ ಆಡಳಿತ ಮಂಡಳಿಯ ಜವಾಬ್ದಾರಿ.

ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯು (ಐಸಿಎಐ) ಹೊರಡಿಸಿದ ಆಂತರಿಕ ಆರ್ಥಿಕ ವರದಿಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣದ ಮಾರ್ಗದರ್ಶನದ ಟಿಪ್ಪಣಿಯಲ್ಲಿ ತಿಳಿಸಿರುವಂತೆ ಆಂತರಿಕ ಆರ್ಥಿಕ ನಿಯಂತ್ರಣದ ಅವಶ್ಯಕ ಅಂಶಗಳನ್ನು ಪರಿಗಣಿಸಿ ಕಂಪನಿಯು ಪ್ರಾರಂಭಿಸಿದ ಆಂತರಿಕ ನಿಯಂತ್ರಣದ ಆರ್ಥಿಕ ವರದಿಯ ಆಧಾರದ ಮೇಲೆ ಸ್ಥಾಪಿಸುವುದಕ್ಕೆ ಮತ್ತು ನಿರ್ವಹಣೆ ಮಾಡುವುದಕ್ಕೆ ಹಿಡುವಳಿ ಕಂಪನಿ ಮತ್ತು ಅದರ ಜಂಟಿ ನಿಯಂತ್ರಿತ ಘಟಕದ ಆಯಾ ನಿರ್ದೇಶಕರ ಮಂಡಳಿಯು ಜವಾಬ್ದಾರರಾಗಿರುತ್ತಾರೆ. ಈ ಜವಾಬ್ದಾರಿಗಳು ವಿನ್ಯಾಸ, ವ್ಯವಹಾರದ ವ್ಯವಸ್ಥಿತ ಮತ್ತು ದಕ್ಷ ನಿಯಂತ್ರಣವನ್ನು ಖಾತರಿ ಮಾಡಲು, ಪರಿಣಾಮಕಾರಿಯಾಗಿ ಕಾರ್ಯಾಚರಣೆಯಲ್ಲಿರುವ ಸಾಕಷ್ಟು ಆಂತರಿಕ ಆರ್ಥಿಕ ನಿಯಂತ್ರಣಗಳನ್ನು ಜಾರಿ ಮತ್ತು ನಿರ್ವಹಣೆ, ಸಂಸ್ಥೆಯ ನೀತಿಗೆ ಅನುಗುಣವಾಗಿರುವುದನ್ನು ಒಳಗೊಂಡಂತೆ, ಅದರ ಆಸ್ತಿಗಳನ್ನು ಸಂರಕ್ಷಿಸುವುದು, ಮೋಸ ಮತ್ತು ದೋಷಗಳನ್ನು ತಡೆಯುವುದು ಮತ್ತು ಪತ್ತೆ ಹಚ್ಚುವುದು, ಲೆಕ್ಕದ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ ಮತ್ತು ಕಾಯಿದೆ ಅನ್ವಯ ನಂಬಲರ್ಹವಾದ ಆರ್ಥಿಕ ಮಾಹಿತಿಯನ್ನು ಸಕಾಲದಲ್ಲಿ ಸಿದ್ಧಪಡಿಸುವುದು ಮತ್ತು ಮಂಡಿಸುವುದನ್ನು ಒಳಗೊಂಡಿರುತ್ತವೆ.

ಲೆಕ್ಕಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯ ಆಧಾರದನ್ವಯ ಕಂಪನಿಯ ಆರ್ಥಿಕ ವರದಿ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿ. ಕಂಪನಿಗಳ ಕಾಯಿದೆಯ ಪ್ರಕರಣ 143(10)ರಡಿಯಲ್ಲಿ ಐಸಿಎಐನಿಂದ ಹೊರಡಿಸಲಾದ ಮಾರ್ಗದರ್ಶನ ಟಿಪ್ಪಣಿ ಮತ್ತು ಗುಣಮಟ್ಟದ ಲೆಕ್ಕಪರಿಶೋಧನೆ ಅನುಸಾರ ನಾವು ನಮ್ಮ ಲೆಕ್ಕಪರಿಶೋಧನೆ ಕಾರ್ಯವನ್ನು ನಡೆಸಿರುತ್ತೇವೆ. ಆ ಗುಣಮಟ್ಟಗಳು ಮತ್ತು ಮಾರ್ಗಸೂಚಿ ಟಿಪ್ಪಣಿ ನಾವು ನೈತಿಕ ಅವಶ್ಯಕತೆಗಳನ್ನು ಅನುಸರಿಸಬೇಕು ಮತ್ತು ಆರ್ಥಿಕ ವರದಿಗಾರಿಕೆಯ ಮೇಲೆ ಸಾಕಷ್ಟು ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ಸ್ಥಾಪಿಸಲಾಗಿದೆಯೇ ಮತ್ತು ನಿರ್ವಹಿಸಲಾಗಿದೆಯೇ ಮತ್ತು ಅಂತಹ ನಿಯಂತ್ರಣಗಳು ಎಲ್ಲ ಭೌತಿಕ ವಿಷಯಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತವೆಯೇ ಎಂಬ ಬಗ್ಗೆ ಸಮಂಜಸವಾದ ಭರವಸೆ ಪಡೆಯಲು ಲೆಕ್ಕಪರಿಶೋಧನೆಯನ್ನು ಯೋಜಿಸಿ ನಿರ್ವಹಿಸಬೇಕು. ನಮ್ಮ ಲೆಕ್ಕಪರಿಶೋಧನೆಯು ಆರ್ಥಿಕ ವರದಿಗಾರಿಕೆ ಮೇಲೆ ಮತ್ತು ಅವುಗಳ ಪರಿಣಾಮಕಾರಿ ಕಾರ್ಯಾಚರಣೆ ಮೇಲೆ ಸಾಕಷ್ಟು ಲೆಕ್ಕಪರಿಶೋಧನಾ ಸಾಕ್ಷ್ಯವನ್ನು ಪಡೆಯಲು ಕಾರ್ಯನಿರ್ವಹಣಾ ಪ್ರಕ್ರಿಯೆಯನ್ನು ಒಳಗೊಂಡಿರುತ್ತದೆ. ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ನಮ್ಮ ಲೆಕ್ಕಪರಿಶೋಧನೆ, ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳನ್ನು ಅರ್ಥಮಾಡಿಕೊಳ್ಳುವುದು, ಸಾರಾಬೂತವಾದ ದೌರ್ಬಲ್ಯದ ಅಸ್ತಿತ್ವದ ಅಪಾಯವನ್ನು ಅಂದಾಜುಮಾಡುವುದು ಮತ್ತು ಅಂದಾಜು ಮಾಡಿದ ಅಪಾಯದ ಆಧಾರದ ಮೇಲೆ ಆಂತರಿಕ ನಿಯಂತ್ರಣದ

ಕಾರ್ಯಾಚರಣೆಯ ಪರಿಣಾಮದ ಪರೀಕ್ಷೆ ಮತ್ತು ಸ್ಥೂಲ ಕಲ್ಪನೆಯ ಮೌಲ್ಯ ನಿರ್ಧರಿಸುವುದನ್ನು ಒಳಗೊಂಡಿರುತ್ತದೆ. ಆಯ್ಕೆ ಮಾಡಿದ ಕಾರ್ಯವಿಧಾನವು ಮೋಸ ಅಥವಾ ದೋಷದಿಂದುಂಟಾದ ಪ್ರತ್ಯೇಕ ಆರ್ಥಿಕ ವಿವರಪಟ್ಟಿಯ ಸಾರಾಭೂತ ತಪ್ಪು ಹೇಳಿಕೆಯ ಅಪಾಯವನ್ನು ಅಂದಾಜು ಮಾಡುವುದೂ ಸೇರಿದಂತೆ, ಲೆಕ್ಕಪರಿಶೋಧಕರ ತೀರ್ಮಾನದ ಮೇಲೆ ಅವಲಂಬಿತವಾಗಿದೆ. ಹಿಡುವಳಿ ಕಂಪನಿಯ ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ಬಗ್ಗೆ ನಮ್ಮ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ಸಾಕಷ್ಟು ಯುಕ್ತವಾದ ಲೆಕ್ಕಪರಿಶೋಧನಾ ಪುರಾವೆಗಳನ್ನು ಪಡೆದುಕೊಂಡಿರುತ್ತೇವೆಂದು ನಾವು ನಂಬಿರುತ್ತೇವೆ.

ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ಅರ್ಥ

ಆರ್ಥಿಕ ವರದಿಯ ಮೇಲೆ ಕಂಪನಿಯ ಆಂತರಿಕ ಆರ್ಥಿಕ ನಿಯಂತ್ರಣವು; ಆರ್ಥಿಕ ವರದಿಯ ವಿಶ್ವಾಸಾರ್ಹತೆ ಮತ್ತು ಸಾಮಾನ್ಯವಾಗಿ ಅಂಗೀಕರಿಸಲಾದ ಲೆಕ್ಕಪರಿಶೋಧಕ ತತ್ವಗಳಿಗನುಸಾರವಾಗಿ ಹೊರಗಿನ ಉದ್ದೇಶಗಳಿಗಾಗಿ ಆರ್ಥಿಕ ವಿವರಗಳನ್ನು ಸಿದ್ಧಪಡಿಸುವ ಬಗ್ಗೆ ಸಮಂಜಸವಾದ ಭರವಸೆ ನೀಡಲು ವಿನ್ಯಾಸಗೊಳಿಸಲಾದ ಪ್ರಕ್ರಿಯೆಯಾಗಿದೆ. ಒಂದು ಕಂಪನಿಯ ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ನೀತಿ ಮತ್ತು ಕಾರ್ಯವಿಧಾನಗಳೆಂದರೆ; (1) ಕಂಪನಿಯ ಆಸ್ತಿಗಳ ವ್ಯವಹಾರಗಳನ್ನು ಮತ್ತು ಪಾಲು ಹಂಚಿಕೆಗಳನ್ನು ಯುಕ್ತವಾದ ವಿವರಗಳನ್ನೊಳಗೊಂಡ ನಿಖರ ಮತ್ತು ನ್ಯಾಯಯುತವಾದ ದಾಖಲೆಗಳನ್ನು ನಿರ್ವಹಿಸುವುದಕ್ಕೆ ಸೇರಿರುತ್ತದೆ; (2) ವ್ಯವಹಾರಗಳನ್ನು ಅವಶ್ಯವೆಂದು ದಾಖಲು ಮಾಡಲು ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಲೆಕ್ಕಾಚಾರದ ನೀತಿಗಳಿಗನುಸಾರವಾಗಿ ಆರ್ಥಿಕ ವಿವರಪಟ್ಟಿಗಳನ್ನು ಸಿದ್ಧಪಡಿಸಲು ಅನುಮತಿ ನೀಡಲು ಯುಕ್ತವಾದ ಭರವಸೆ ಒದಗಿಸುವುದು ಮತ್ತು ಕಂಪನಿಯ ಸ್ವೀಕೃತಿ ಹಾಗೂ ವೆಚ್ಚಗಳನ್ನು ಆಡಳಿತವರ್ಗ ಮತ್ತು ನಿರ್ದೇಶಕರ ಆದೇಶಾನುಸಾರ ಮಾತ್ರ ನಡೆಸುವುದು; ಮತ್ತು (3) ಕಂಪನಿಯ ಆಸ್ತಿಗಳ ಪ್ರತ್ಯೇಕ ಆರ್ಥಿಕ ವಿವರಪಟ್ಟಿಗಳ ಮೇಲೆ ಸಾರಾಭೂತ ಪರಿಣಾಮ ಬೀರಬಹುದಾದ ಅಕ್ರಮ ಸ್ವಾಧೀನ, ಉಪಯೋಗ ಅಥವಾ ಪಾಲು ಹಂಚಿಕೆಯನ್ನು ತಡೆಯುವ ಬಗ್ಗೆ ಅಥವಾ ಸಕಾಲಿಕ ಪತ್ತೆ ಹಚ್ಚುವ ಬಗ್ಗೆ ಯುಕ್ತ ಭರವಸೆ ಒದಗಿಸುವುದು.

ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ಅಂತರ್ನಿಹಿತ ನಿರ್ಬಂಧ:

ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ಅಂತರ್ನಿಹಿತ ನಿರ್ಬಂಧದಿಂದಾಗಿ, ಸಂಭಾವ್ಯ ಒಳಸಂಚು ಅಥವಾ ನಿಯಂತ್ರಣಗಳ ಬಗ್ಗೆ ಆಡಳಿತ ವರ್ಗದ ಅಸಮರ್ಪಕ ಅಧ್ಯಾರೋಹಿಯನ್ನು ಒಳಗೊಂಡಂತೆ, ದೋಷ ಅಥವಾ ಮೋಸದಿಂದ ಸಾರಾಭೂತ ತಪ್ಪುಹೇಳಿಕೆಗಳು ಸಂಭವಿಸಬಹುದು ಹಾಗೂ ಪತ್ತೆ ಹಚ್ಚಲು ಸಾಧ್ಯವಾಗದೇ ಹೋಗಬಹುದು. ಹಾಗೂ ಭವಿಷ್ಯದ ಅವಧಿಗೆ ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ಯಾವುದೇ ಅಂದಾಜಿಸಲ್ಪಟ್ಟ ಮೌಲ್ಯಮಾಪನವು, ಪರಿಸ್ಥಿತಿಯಲ್ಲಿನ ಬದಲಾವಣೆಯಿಂದಾಗಿ ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣವು ಸಾಕಾಗದೇ ಇರಬಹುದಾದ ಅಪಾಯಕ್ಕೆ ಒಳಪಟ್ಟಿರುತ್ತದೆ ಅಥವಾ ನೀತಿಗಳ ಮತ್ತು ಕಾರ್ಯವಿಧಾನಗಳ ಪಾಲನೆಯ ಮಟ್ಟವು ಕಡಿಮೆಯಾಗಬಹುದು.

ಅಭಿಪ್ರಾಯ

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗಿರುವ ಮಾಹಿತಿ ಮತ್ತು ನಮಗೆ ನೀಡಿದ ವಿವರಣೆಗಳ ಪ್ರಕಾರ, ಹಿಡುವಳಿ ಕಂಪನಿ ಮತ್ತು ಅದರ ಜಂಟಿ ನಿಯಂತ್ರಿತ ಸಂಸ್ಥೆಯ ಎಲ್ಲಾ ಸಾರಾಭೂತ ವಿಷಯಗಳಲ್ಲಿ ಆಂತರಿಕ ಆರ್ಥಿಕ ವರದಿಗಾರಿಕೆ ಮೇಲೆ ಯುಕ್ತವಾಗಿ ಸಾಕಷ್ಟು ಆಂತರಿಕ ನಿಯಂತ್ರಣಗಳ ವ್ಯವಸ್ಥೆಯನ್ನು ಹೊಂದಿದೆ ಮತ್ತು ಅಂತಹ ಆರ್ಥಿಕ ವರದಿಗಾರಿಕೆ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ಅಳತೆಗೋಲಿನ ಆಧಾರದನ್ವಯ ಐಸಿಐಸಿಐ ನಿಂದ ಹೊರಡಿಸಲಾದ ಆರ್ಥಿಕ ವರದಿಗಾರಿಕೆ ಮೇಲೆ ಆಂತರಿಕ ನಿಯಂತ್ರಣಗಳ ಲೆಕ್ಕಪರಿಶೋಧನೆಯ ಮಾರ್ಗದರ್ಶನ ಟಿಪ್ಪಣಿಯಲ್ಲಿ ತಿಳಿಸಿರುವಂತೆ ಹಿಡುವಳಿ ಕಂಪನಿ ಮತ್ತು ಅದರ ಜಂಟಿ ನಿಯಂತ್ರಿತ ಕಂಪನಿಯಿಂದ ಸ್ಥಾಪಿತವಾದ ಆಂತರಿಕ ನಿಯಂತ್ರಣದ ಮುಖ್ಯ ಅಂಶಗಳನ್ನು ಪರಿಗಣಿಸಿದರೆ, 31ನೇ ಮಾರ್ಚ್, 2020ರಂದು ಇದ್ದಂತೆ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಲ್ಲಿದೆ.

ಇತರೆ ವಿಷಯಗಳು

ಭಾರತದಲ್ಲಿ ಸಂಯೋಜಿಸಲ್ಪಟ್ಟ ಒಂದು ಜಂಟಿ ನಿಯಂತ್ರಿತ ಘಟಕಕ್ಕೆ ಸಂಬಂಧಿಸಿದಂತೆ, ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆ ಮತ್ತು ಕಾರ್ಯಾಚರಣೆಯ ಪರಿಣಾಮಕಾರಿತ್ವದ ಕುರಿತು ಕಾಯಿದೆಯ ಪ್ರಕರಣ 143 (3) (ಐ) ಅಡಿಯಲ್ಲಿ ನಮ್ಮ ಮೇಲಿನ ವರದಿಗಳು ಆಧರಿಸಿವೆ. ಅಂತಹ ಕಂಪನಿಯ ಲೆಕ್ಕಪರಿಶೋಧಕರ ವರದಿಗಳು ಭಾರತದಲ್ಲಿ ಸಂಯೋಜಿಸಲ್ಪಟ್ಟಿವೆ.

ವಿಷ್ಣು ರಾಜೇಂದ್ರನ್ & ಕಂ ಪರವಾಗಿ
ಚಾರ್ಟರ್ಡ್ ಅಕೌಂಟಂಟ್ಸ್
ಸಂಸ್ಥೆಯ ನೋಂದಣಿ ಸಂ.004741ಎಸ್

ಸಹಿ/–
ಸಿಎ ಥಾಮ್ ಜೋಸೆಫ್ ಎಫ್‌ಸಿಎ
ಪಾಲುದಾರರು
ಸದಸ್ಯತ್ವ ಸಂಖ್ಯೆ: 201502

ಸ್ಥಳ : ಬೆಂಗಳೂರು
ದಿನಾಂಕ : 25ನೇ ನವೆಂಬರ್, 2020
UDIN : 20201502AAAABX5046

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

CIN No. : U75112KA1996SGC020020

#39, "ಶಾಂತಿ ಗೃಹ" ಭಾರತ್ ಸ್ಕೌಟ್ಸ್ & ಗೈಡ್ಸ್, ಅರಮನೆ ರಸ್ತೆ, ಬೆಂಗಳೂರು–560001

PH: 080-22282220, website: kredlinfo.in

31ನೇ ಮಾರ್ಚ್, 2020ಕ್ಕೆ ಕ್ರೋಢೀಕೃತ ಆಯವ್ಯಯ ಪಟ್ಟಿ

ಮೊತ್ತ ರೂ.ಗಳಲ್ಲಿ

ವಿವರಗಳು	ಟಿಪ್ಪಣಿ ಸಂಖ್ಯೆ	31.03.2020 ರಲ್ಲಿ	31.03.2019 ರಲ್ಲಿ
I. ಆಸ್ತಿಗಳು			
1. ಚಾಲ್ತಿಯಲ್ಲದ ಸ್ವತ್ತುಗಳು			
ಸ್ಥಾವರ, ಯಂತ್ರೋಪಕರಣಗಳು	1	3,24,68,42,887	57,37,55,666
ಬಂಡವಾಳ ಪ್ರಗತಿಯಲ್ಲಿರುವ ಕಾಮಗಾರಿಗಳು	2	67,39,74,444	37,99,12,905
ಇತರ ಅಸ್ಪಷ್ಟ ಸ್ವತ್ತುಗಳು		–	–
ಹಣಕಾಸು ಸ್ವತ್ತುಗಳು			
1) ಹೂಡಿಕೆಗಳು	3	32,20,48,176	14,40,58,957
2) ಸ್ವೀಕರಾರ್ಹ ವ್ಯಾಪಾರ		–	–
3) ಸಾಲಗಳು		–	–
4) ಇತರ ಹಣಕಾಸು ಹೊಣೆಗಳು	4	1,29,31,825	85,03,845
ಮುಂದೂಡಲಾದ ತೆರಿಗೆ ಸ್ವತ್ತುಗಳು		–	–
ಇತರ ಚಾಲ್ತಿಯಲ್ಲದ ಸ್ವತ್ತುಗಳು	4 A	9,46,53,476	157,078,228
ಒಟ್ಟು ಚಾಲ್ತಿಯಲ್ಲದ ಸ್ವತ್ತುಗಳು		**4,35,04,50,808**	**1,26,33,09,601**
2 ಚಾಲ್ತಿಯ ಸ್ವತ್ತುಗಳು			
ದಾಸ್ತಾನುಗಳು		–	–
ಹಣಕಾಸು ಸ್ವತ್ತುಗಳು			
1) ಹೂಡಿಕೆಗಳು		–	–
2) ಸ್ವೀಕರಾರ್ಹ ವ್ಯಾಪಾರ	5	3,29,04,436	2,91,29,129
3) ನಗದು ಮತ್ತು ನಗದಿಗೆ ಸಮಾನಗಳು	6	4,05,43,635	11,52,73,108
4) ನಗದು ಮತ್ತು ನಗದಿಗೆ ಸಮಾನಗಳು ಬ್ಯಾಂಕ್ ಬಾಕಿಯಿಂದ ಹೊರತು ಪಡಿಸಿರುವುದು	7	1,33,72,96,266	3,23,31,96,960
5) ಸಾಲಗಳು	8	2,10,77,42,338	2,50,68,95,161
6) ಇತರ ಹಣಕಾಸು ಸ್ವತ್ತುಗಳು	9	10,48,77,973	31,98,67,553
ಇತರ ಚಾಲ್ತಿಯ ಸ್ವತ್ತುಗಳು	10	28,83,55,796	27,53,10,462
ಒಟ್ಟು ಚಾಲ್ತಿಯ ಸ್ವತ್ತುಗಳು		**3,91,17,20,443**	**6,47,96,72,373**
ಒಟ್ಟು ಸ್ವತ್ತುಗಳು		**8,26,21,71,251**	**7,74,29,81,973**

ವಿವರಗಳು	ಟಿಪ್ಪಣಿ ಸಂಖ್ಯೆ	31.03.2020 ರಲ್ಲಿ	31.03.2019 ರಲ್ಲಿ
II. ಈಕ್ವಿಟಿ ಮತ್ತು ಹೊಣೆಗಳು			
ಈಕ್ವಿಟಿ			
ಈಕ್ವಿಟಿ ಷೇರು ಬಂಡವಾಳ	11	50,00,300	50,00,300
ಇತರ ಈಕ್ವಿಟಿ	12	3,14,84,33,439	2,76,96,01,510
III. ಹೊಣೆಗಳು			
1. ಚಾಲ್ತಿಯಲ್ಲಿಲ್ಲದ ಹೊಣೆಗಳು			
ಹಣಕಾಸು ಹೊಣೆಗಳು			
i) ಸಾಲಗಳು		–	–
ii) ವ್ಯಾಪಾರ ಸಂದಾಯ		–	–
iii) ಇತರ ಹಣಕಾಸು ಹೊಣೆಗಳು	13	29,38,325	37,15,768
ನಿಬಂಧನೆಗಳು	14	5,59,23,058	2,82,43,024
ಮುಂದೂಡಲಾದ ತೆರಿಗೆ ಹೊಣೆಗಳು (ನಿವ್ವಳ)	15	11,80,50,172	9,19,31,108
ಇತರ ಚಾಲ್ತಿಯಲ್ಲಿಲ್ಲದ ಹೊಣೆಗಳು	15A	2,52,79,18,957	5,00,000
ಒಟ್ಟು ಚಾಲ್ತಿಯಲ್ಲಿಲ್ಲದ ಹೊಣೆಗಳು		**2,70,48,30,512**	**12,43,89,900**
2 ಚಾಲ್ತಿಯ ಹೊಣೆಗಳು			
ಹಣಕಾಸು ಹೊಣೆಗಳು			
i) ಸಾಲಗಳು		–	–
ii) ವ್ಯಾಪಾರ ಸಂದಾಯ			
ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳ ಒಟ್ಟು ಬಾಕಿ		–	
ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳನ್ನು ಹೊರತು ಪಡಿಸಿ ಸಾಲಗಾರರಿಂದ ಒಟ್ಟು ಬಾಕಿ	16	28,02,01,172	3,92,49,974
ಇತರ ಹಣಕಾಸು ಹೊಣೆಗಳು	17	2,11,05,59,355	4,78,87,00,001
ಇತರ ಚಾಲ್ತಿಯ ಹೊಣೆಗಳು	18	81,04,468	52,48,799
ನಿಬಂಧನೆಗಳು	19	50,42,005	1,07,91,490
ಒಟ್ಟು ಚಾಲ್ತಿಯ ಹೊಣೆಗಳು		**2,40,39,06,999**	**4,84,39,90,264**
ಒಟ್ಟು ಈಕ್ವೀಟಿ ಮತ್ತು ಹೊಣೆಗಳು		**8,26,21,71,251**	**7,74,29,81,973**

ಲೆಕ್ಕಗಳಿಗೆ ಟಿಪ್ಪಣಿಗಳು ಮತ್ತು ಪ್ರಮುಖ ಲೆಕ್ಕಪತ್ರ ಕಾರ್ಯನೀತಿಗಳು
1 ರಿಂದ 38ರ ವರೆಗಿನ ಟಿಪ್ಪಣಿ ಸಂಖ್ಯೆಗಳು ಲೆಕ್ಕಪತ್ರ ವಿವರಣಾ ಪಟ್ಟಿಗಳ ಅವಿಭಾಜ್ಯ ಭಾಗಗಳಾಗಿವೆ.

ನಮ್ಮ ಸಮ ದಿನಾಂಕದ ವರದಿಯಂತೆ

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಪರವಾಗಿ

ವಿಷ್ಣು ರಾಜೇಂದ್ರನ್ & ಕಂಪನಿ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ನಂ. 004741S

ಸಹಿ/–
(ಡಾ। ಹೆಚ್. ಬಿ. ಬೂದೆಪ್ಪ)
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 08661664

ಸಹಿ/–
(ಮಹೇಂದ್ರ ಜೈನ್)
ಅಧ್ಯಕ್ಷರು
ಡಿಐಎನ್: 01660388

ಸಹಿ/–
(ಥಾಮ್ ಜೋಸೆಫ್)
ಪಾಲುದಾರ
ಸದಸ್ಯತ್ವ ಸಂಖ್ಯೆ: 201502

ಸ್ಥಳ : ಬೆಂಗಳೂರು
ದಿನಾಂಕ : 28.09.2020

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

CIN No. : U75112KA1996SGC020020

#39, "ಶಾಂತಿ ಗೃಹ" ಭಾರತ್ ಸ್ಕೌಟ್ಸ್ & ಗೈಡ್ಸ್, ಅರಮನೆ ರಸ್ತೆ, ಬೆಂಗಳೂರು–560001
PH: 080-22282220, website: kredlinfo.in

31ನೇ ಮಾರ್ಚ್ 2020 ರ ಲಾಭ ಮತ್ತು ನಷ್ಟದ ಕ್ರೋಢೀಕೃತ ವಿವರಣ ಪಟ್ಟಿ

ಮೊತ್ತ ರೂ.ಗಳಲ್ಲಿ

ವಿವರಗಳು	ಟಿಪ್ಪಣಿ ಸಂಖ್ಯೆ	31.03.2020 ರಲ್ಲಿ	31.03.2019 ರಲ್ಲಿ
I ಆದಾಯ			
ಕಾರ್ಯಪಾಲನೆಯಿಂದ ಆದಾಯ	20	33,96,97,921	52,79,23,628
ಇತರ ಆದಾಯ	21	29,72,12,288	28,02,60,972
ಒಟ್ಟು ಆದಾಯ		**63,69,10,209**	**80,81,84,600**
II ವೆಚ್ಚಗಳು			
ನೌಕರರ ಸೌಲಭ್ಯ ವೆಚ್ಚಗಳು	22	11,38,90,462	7,97,03,831
ಹಣಕಾಸು ವೆಚ್ಚಗಳು	1	8,07,73,914	2,79,05,653
ಸವಕಳಿ ಮತ್ತು ಇಳಿನಿಧಿಯ ಮೂಲಕ ಸಾಲ ತೀರಿಸುವಿಕೆ ವೆಚ್ಚ	23	4,40,07,168	6,88,42,138
ಇತರ ವೆಚ್ಚಗಳು	24	15,21,96,529	3,74,67,542
ಒಟ್ಟು ವೆಚ್ಚಗಳು		**39,08,68,073**	**21,39,19,164**
ಲಾಭ/(ನಷ್ಟ)–ಅಸಾಧಾರಣ ವಸ್ತುಗಳ ಮುಂಚಿನ, ಸಹಭಾಗಿತ್ವದಿಂದ ಲಾಭ/(ನಷ್ಟ)ದ ತೆರಿಗೆ ಮತ್ತು ಷೇರುಗಳು (I - II)		**24,60,42,137**	**59,42,65,436**
ಸಹಭಾಗಿತ್ವ ದಿಂದ ಲಾಭ/(ನಷ್ಟ)ದ ಷೇರುಗಳು		22,07,89,219	14,26,62,612
III ಅಸಾಧಾರಣ ವಸ್ತುಗಳ ಮತ್ತು ತೆರಿಗೆ ಮುಂಚಿನ ಲಾಭ/(ನಷ್ಟ)		**46,68,31,356**	**73,69,28,048**
IV ಅಸಾಧಾರಣ ಅಂಶಗಳು			
V ತೆರಿಗೆ ಮುಂಚಿನ ಲಾಭ/(ನಷ್ಟ) (III-IV)		46,68,31,356	73,69,28,048
VI ತೆರಿಗೆ ವೆಚ್ಚಗಳು:			
ಚಾಲ್ತಿ ತೆರಿಗೆ		5,70,00,000	12,99,15,155
ಮುಂದೂಡಲಾದ ತೆರಿಗೆ		2,61,19,065	3,01,98,804
ಮುಂದೂಡಲಾದ ತೆರಿಗೆ ಸ್ವತ್ತುಗಳು		–	–
ಹಿಂದಿನ ವರ್ಷದ ಆದಾಯ ತೆರಿಗೆ		(16,56,329)	–
ಒಟ್ಟು ತೆರಿಗೆ ವೆಚ್ಚಗಳು		**8,14,62,736**	**16,01,13,959**
VII ಕಾರ್ಯಾಚರಣೆಯ ಅವಧಿಯಲ್ಲಿ ಲಾಭ/ (ನಷ್ಟ) (V-VI)		**38,53,68,620**	**57,68,14,090**
VIII ಕಾರ್ಯಾಚರಣೆ ಸ್ಥಗಿತದ ಅವಧಿಯಲ್ಲಿ ಲಾಭ/ (ನಷ್ಟ)		–	–
IX ಕಾರ್ಯಾಚರಣೆ ಸ್ಥಗಿತದ ತೆರಿಗೆ ವೆಚ್ಚ		–	–

ವಿವರಗಳು	ಟಿಪ್ಪಣಿ ಸಂಖ್ಯೆ	31.03.2020 ರಲ್ಲಿ	31.03.2019 ರಲ್ಲಿ
X ಕಾರ್ಯಾಚರಣೆ ಸ್ಥಗಿತದಿಂದ ಲಾಭ/(ನಷ್ಟ) ತೆರಿಗೆ ನಂತರ)(VII-VIII)		–	–
XI ವಾರ್ಷಿಕ ಲಾಭ/(ನಷ್ಟ) (VII +X)		**38,53,68,620**	**57,68,14,090**
XII ಇತರ ವಿಸ್ತಾರ ಆದಾಯ			
A(i) ಲಾಭ ಅಥವಾ ನಷ್ಟಕ್ಕ ಮರುಸಂಯೋಜನೆಯಾಗದ ವಸ್ತುಗಳು		–	–
FVOCI ಲಾಭ ಈಕ್ವೀಟಿ ಉಪಕರಣಗಳ ನ್ಯಾಯೋಚಿತ ಮೌಲ್ಯದ ಬದಲಾವಣೆ		–	–
(ii) ಲಾಭ ಅಥವಾ ನಷ್ಟಕ್ಕ ಮರುಸಂಯೋಜನೆಯಾಗದ ವಸ್ತುಗಳು ಸಂಬಂಧ ಆದಾಯ ತೆರಿಗೆ		–	–
(B)(i) ವ್ಯಾಖ್ಯಾನಿಸಲಾದ ಲಾಭ ಯೋಜನೆ ಮೇಲಿನ ಮರು ಮಾಪನವನ್ನು oci ಗೆ ವರ್ಗಾಯಿಸುವುದು	32	(65,36,690)	(51,267)
(ii) ಲಾಭ ಅಥವಾ ನಷ್ಟಕ್ಕ ಮರುಸಂಯೋಜನೆಯಾಗುವ ವಸ್ತುಗಳು ಸಂಬಂಧ ಆದಾಯ ತೆರಿಗೆ		–	–
XIIIಒಟ್ಟು ವಾರ್ಷಿಕ ವಿಸ್ತಾರ ಆದಾಯ (XI+XII)(ಈ ಅವಧಿಯಲ್ಲಿನ ಲಾಭ/(ನಷ್ಟ) ಮತ್ತು ಇತರ ಸಮಗ್ರ ಆದಾಯ ಇಳಗೊಂಡಿರುತ್ತದೆ.		**37,88,31,930**	**57,67,62,823**
XIVಪ್ರತಿ ಈಕ್ವೀಟಿ ಷೇರಿನ ಗಳಿಕೆ (ಮುಂದುವರೆಯುತ್ತಿರುವ ಕಾರ್ಯಾಚರಣೆಗೆ)			
1) ಮೂಲ	25	757.62	1,153.46
2) ದುರ್ಬಲಗೊಳಿಸಿದ		757.62	1,153.46
XV ಪ್ರತಿ ಈಕ್ವೀಟಿ ಷೇರಿನ ಗಳಿಕೆ (ಸ್ಥಗಿತಗೊಂಡ ಕಾರ್ಯಾಚರಣೆಗೆ)			
1) ಮೂಲ		–	–
2) ದುರ್ಬಲಗೊಳಿಸಿದ		–	–
XVIಪ್ರತಿ ಈಕ್ವೀಟಿ ಷೇರಿನ ಗಳಿಕೆ (ಮುಂದುವರೆದ ಹಾಗೂ ಮುಂದುವರೆಯುತ್ತಿರುವ ಕಾರ್ಯಾಚರಣೆಗೆ)			
1) ಮೂಲ		757.62	1,153.46
2) ದುರ್ಬಲಗೊಳಿಸಿದ		757.62	1,153.46

ಲೆಕ್ಕಗಳಿಗೆ ಟಿಪ್ಪಣಿಗಳು ಮತ್ತು ಪ್ರಮುಖ ಲೆಕ್ಕಪತ್ರ ಕಾರ್ಯನೀತಿಗಳು
1 ರಿಂದ 38ರ ವರೆಗಿನ ಟಿಪ್ಪಣಿ ಸಂಖ್ಯೆಗಳು ಲೆಕ್ಕಪತ್ರ ವಿವರಣಾ ಪಟ್ಟಿಗಳ ಅವಿಭಾಜ್ಯ ಭಾಗಗಳಾಗಿವೆ.

ನಮ್ಮ ಸಮ ದಿನಾಂಕದ ವರದಿಯಂತೆ

ವಿಷ್ಣು ರಾಜೇಂದ್ರನ್ & ಕಂಪನಿ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ನಂ. 004741S

ಕರ್ನಾಟಕ ನವೀಕರಿಸಬಹುದಾದ
ಇಂಧನ ಅಭಿವೃದ್ಧಿ ನಿಯಮಿತದ ಪರವಾಗಿ

ಸಹಿ/–
(ಡಾ। ಹೆಚ್. ಬಿ. ಬೂದೆಪ್ಪ)
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 08661664

ಸಹಿ/–
(ಮಹೇಂದ್ರ ಜೈನ್)
ಅಧ್ಯಕ್ಷರು
ಡಿಐಎನ್: 01660388

ಸಹಿ/–
(ಥಾಮ್ ಜೋಸೆಫ್)
ಪಾಲುದಾರ
ಸದಸ್ಯತ್ವ ಸಂಖ್ಯೆ: 201502

ಸ್ಥಳ : ಬೆಂಗಳೂರು
ದಿನಾಂಕ : 28.09.2020

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

CIN No. : U75112KA1996SGC020020

#39, "ಶಾಂತಿ ಗೃಹ" ಭಾರತ್ ಸ್ಕೌಟ್ಸ್ & ಗೈಡ್ಸ್, ಅರಮನೆ ರಸ್ತೆ, ಬೆಂಗಳೂರು–560001
PH: 080-22282220, website: kredlinfo.in

31ನೇ ಮಾರ್ಚ್ 2020 ರಲ್ಲಿ ನಗದು ಹರಿವಿನ ಕ್ರೋಢೀಕೃತ ವಿವರಣಾ ಪಟ್ಟಿ

ಮೊತ್ತ ರೂ.ಗಳಲ್ಲಿ

ವಿವರಗಳು	ಕೊನೆಗೊಂಡ ವರ್ಷ 31.03.2020	ಕೊನೆಗೊಂಡ ವರ್ಷ 31.03.2019
A ಕಾರ್ಯಪಾಲನಾ ಚಟುವಟಿಕೆಗಳಿಂದ ನಗದಿನ ಹರಿವು		
ತೆರಿಗೆಗೆ ಮುಂಚಿನ ಲಾಭ	46,02,94,666	73,68,76,781
ಕಾರ್ಯಾಚರಣೆಯ ಚಟುವಟಿಕೆಗಳಿಂದ ಉತ್ಪತ್ತಿಯಾಗುವ ನಿವ್ವಳ ನಗದಿಗೆ ವರ್ಷದ ಲಾಭವನ್ನು ಸಮನ್ವಯಗೊಳಿಸುವ ಹೊಂದಾಣಿಕೆಗಳು:		
ಸವಕಳಿ	8,07,73,914	2,79,05,653
ಮುಂಗಡ/ ಸಾಲಗಳಿಗೆ ಪಾರ್ವ ಸಿದ್ಧತೆ	–	–
(ಲಾಭ)/ಸ್ಥರಾಸ್ತಿಯ ಮೇಲೆನ ನಷ್ಟ(ನಿವ್ವಳ)	–	(3,19,891)
ಬಡ್ಡಿಯ ಖರ್ಚು	–	–
ಬಡ್ಡಿಯ ಆದಾಯ	(22,76,20,178)	(15,09,16,032)
ಕೆಲಸದ ಬಂಡವಾಳ ಬದಲಾವಣೆಯ ಮೊದಲು ಹಣದ ಹರಿವನ್ನು ನಿರ್ವಹಿಸುವುದು	**31,34,48,401**	**61,35,46,511**
ಕೆಲಸದ ಬಂಡವಾಳದಲ್ಲಿ ಬದಲಾವಣೆ		
ಸ್ವೀಕರಾರ್ಹ ವ್ಯಾಪಾರ ಏರಿಕೆ /ಇಳಿಕೆ	(37,75,307)	(2,80,77,439)
ಚಾಲ್ತಿಯ ಸ್ವತ್ತುಗಳು ಏರಿಕೆ/ಇಳಿಕೆ	22,49,44,247	(3,20,11,369)
ಚಾಲ್ತಿಯಲ್ಲಿಲ್ಲದ ಹೊಣೆಗಳು ಏರಿಕೆ/ಇಳಿಕೆ	(11,99,92,448)	(1,94,49,273)
ವ್ಯಾಪಾರ ಸಂದಾಯ ಏರಿಕೆ/ ಇಳಿಕೆ	24,09,51,198	(4,43,94,104)
ಹಣಕಾಸಿನ ಹೊಣೆಗಾರಿಕೆಗಳು ಇತರ ಹೊಣೆಗಾರಿಕೆಗಳು ಮತ್ತು ನಿಬಂಧನೆಗಳಲ್ಲಿ ಹೆಚ್ಚಳ / ಇಳಿಕೆ	(12,67,12,914)	(59,25,24,203)
ಕಾರ್ಯಚರಣೆಯಿಂದ/ಕಾರ್ಯಚರಣೆಗೆ ಬಳಸಲಾದ ಉತ್ಪತ್ತಿಯಾದ ನಗದು	**52,88,63,177**	**(10,29,09,877)**
ಕಾರ್ಯಚರಣೆಗಳಲ್ಲಿ ಬಳಸುವ ನಗದು		
ಆದಾಯ ತೆರಿಗೆ ಪಾವತಿ	7,83,43,671	15,00,00,000
ಹೂಡಿಕೆ ಚಟುವಟಿಕೆಗಳಲಿನ ನಿವ್ವಳ ನಗದು ಹರಿವು	**45,05,19,506**	**(25,29,09,877)**
B ಹೂಡಿಕೆ ಚಟುವಟಿಕೆಗಳಿಂದ ನಗದು ಹರಿವು		
ಸ್ವತ್ತುಗಳು, ಪೀಠೋಪಕರಣಗಳು, ಹಾಗೂ ಅಸ್ಪಷ್ಟ ಸ್ವತ್ತುಗಳ ಖರೀದಿ (ನಿವ್ವಳ)	(2,75,38,76,170)	(39,92,775)
ಕೆಲಸ–ಪ್ರಗತಿಗಾಗಿ ಬಂಡವಾಳ ಖರೀದಿ	(29,40,61,539)	(8,80,19,865)

	ವಿವರಗಳು	ಕೊನೆಗೊಂಡ ವರ್ಷ 31.03.2020	ಕೊನೆಗೊಂಡ ವರ್ಷ 31.03.2019
	ಸ್ವತ್ತುಗಳು, ಪೀಠೋಪಕರಣಗಳು, ಹಾಗೂ ಅಸ್ಪಷ್ಟ ಸ್ವತ್ತುಗಳ ಮಾರಾಟ	15,035	3,21,859
	ಸ್ಥಿರ ಠೇವಣಿಗಳಲ್ಲಿನ ಹೂಡಿಕೆಗಳ ಮಾರಡದಿಂದ ಬರುವ ಆದಾಯ (ನಿವ್ವಳ)	1,89,59,00,694	1,39,58,73,313
	ಹೆಸ್ಕಾಂ ಗೆ ನೀಡಲಾಗಿರುವ ಅಸುರಕ್ಷಿತ ಸಾಲ	(2,10,77,42,338)	(2,50,68,95,161)
	ಸ್ವೀಕೃತ ಬಡ್ಡಿ	22,76,20,178	15,09,16,032
	ಹೂಡಿಕೆ ಚಟುವಟಿಕೆಗಳಿಂದ/ಅದರಲ್ಲಿನ ನಿವ್ವಳ ನಗದು ಹರಿವು	**(3,03,21,44,140)**	**(1,05,17,96,597)**
C	**ಹಣಕಾಸು ಚಟುವಟಿಕೆಗಳಿಂದ ನಿವ್ವಳ ನಗದು ಹರಿವು**		
	ಕೆಎಸ್‌ಪಿಡಿಸಿಎಲ್ ನಿಂದ /ಹೆಸ್ಕಾಂ ನಿಂದ ಸಾಲ ಮರುಪಾವತಿಯಿಂದ ಸ್ವೀಕೃತಿ	2,50,68,95,161	1,26,99,70,878
	ಬಡ್ಡಿ ಪಾವತಿ	–	–
	ಹಣಕಾಸು ಚಟುವಟಿಕೆಗಳಿಂದ/ಅದರಲ್ಲಿನ ನಿವ್ವಳ ನಗದು ಹರಿವು	**2,50,68,95,161**	**1,26,99,70,878**
	ನಗದು ಮತ್ತು ನಗದಿಗೆ ಸಮನಾದುವುಗಳಲ್ಲಿ ನಿವ್ವಳ ಏರಿಕೆ/ ಇಳಿಕೆ	**(7,47,29,473)**	**(3,47,35,596)**
	ನಗದು ಮತ್ತು ನಗದಿಗೆ ಸಮನಾದುವುಗಳು		
	ವರ್ಷದ ಪ್ರರಂಭದಲ್ಲಿ (ಟಿಪ್ಪಣಿ 6)	11,52,73,108	15,00,08,703
	ವರ್ಷಾಂತ್ಯದಲ್ಲಿ (ಟಿಪ್ಪಣಿ 6)	4,05,43,635	11,52,73,108

ಲೆಕ್ಕಗಳಿಗೆ ಟಿಪ್ಪಣಿಗಳು ಮತ್ತು ಪ್ರಮುಖ ಲೆಕ್ಕಪತ್ರ ಕಾರ್ಯನೀತಿಗಳು
1 ರಿಂದ 38ರ ವರೆಗಿನ ಟಿಪ್ಪಣಿ ಸಂಖ್ಯೆಗಳು ಲೆಕ್ಕಪತ್ರ ವಿವರಣಪಟ್ಟಿಗಳ ಅವಿಭಾಜ್ಯ ಭಾಗಗಳಾಗಿವೆ.

ಕರ್ನಾಟಕ ನವೀಕರಿಸಬಹುದಾದ
ಇಂಧನ ಅಭಿವೃದ್ಧಿ ನಿಯಮಿತದ ಪರವಾಗಿ

ನಮ್ಮ ಸಮ ದಿನಾಂಕದ ವರದಿಯಂತೆ
ವಿಷ್ಣು ರಾಜೇಂದ್ರನ್ & ಕಂಪನಿ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ನಂ. 004741S

ಸಹಿ/–
(ಡಾ। ಹೆಚ್. ಬಿ. ಬೂದೆಪ್ಪ)
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 08661664

ಸಹಿ/–
(ಮಹೇಂದ್ರ ಜೈನ್)
ಅಧ್ಯಕ್ಷರು
ಡಿಐಎನ್: 01660388

ಸಹಿ/–
(ಥಾಮ್ ಜೋಸೆಫ್)
ಪಾಲುದಾರ
ಸದಸ್ಯತ್ವ ಸಂಖ್ಯೆ: 201502

ಸ್ಥಳ : ಬೆಂಗಳೂರು
ದಿನಾಂಕ : 28.09.2020

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

CIN No. : U75112KA1996SGC020020

#39, "ಶಾಂತಿ ಗೃಹ" ಭಾರತ್ ಸ್ಕೌಟ್ಸ್ & ಗೈಡ್ಸ್, ಅರಮನೆ ರಸ್ತೆ, ಬೆಂಗಳೂರು–560001

PH: 080-22282220, website: kredlinfo.in

ವರ್ಷಾಂತ್ಯ 31ನೇ ಮಾರ್ಚ್ 2020 ರಲ್ಲಿ ಈಕ್ವೀಟಿ ಷೇರು ಬಂಡವಾಳ ಕ್ರೋಢೀಕೃತ ಬದಲಾಣೆ ಪಟ್ಟಿ

A ಈಕ್ವೀಟಿ ಷೇರು ಬಂಡವಾಳ

ಮೊತ್ತ ರೂ.ಗಳಲ್ಲಿ

ವರ್ಷದ ಆರಂಭದಲ್ಲಿ ಬಾಕಿ ಉಳಿದ ಷೇರುಗಳು	ವರ್ಷಾವಧಿಯಲ್ಲಿ ಬಿಡುಗಡೆಗೊಳಿಸಿದ ಷೇರುಗಳು	ವರ್ಷದ ಕೊನೆಯಲ್ಲಿ ಬಾಕಿ ಉಳಿದ ಷೇರುಗಳು
50,00,300	-	50,00,300

B. ಇತರ ಈಕ್ವೀಟಿ

ವಿವರಗಳು	ಮೀಸಲು ಮತ್ತು ಹೆಚ್ಚುವರಿ		
	ಉಳಿಸಿದ ಗಳಿಕೆ	ಸೆಕ್ಯುರೀಟಿಸ್ ಪ್ರಿಮಿಯಮ್	ಒಟ್ಟು
ವರದಿ ಮಾಡುವ ಅವಧಿಯ ಕೊನೆಯ ಸಮತೋಲನ	**2,76,96,01,510**	–	**2,76,96,01,510**
ವಾರ್ಷಿಕ ಲಾಭ	38,53,68,620	–	38,53,68,620
ಇತರ ಸಮಗ್ರ ಆದಾಯ	(65,36,690)	–	(65,36,690)
ಒಟ್ಟು ವಾರ್ಷಿಕ ಸಮಗ್ರ ಆದಾಯ	**37,88,31,930**	–	**37,88,31,930**
ಮೀಸಲು ಮತ್ತು ಹೆಚ್ಚುವರಿ		–	–
ನಗದು ಲಾಭಾಂಶದ ಮೇಲಿನ ಲಾಭಾಂಶ ವಿತರಣಾ ತೆರಿಗೆ	–	–	–
ವರ್ಷಕ್ಕೆ ಪ್ರಸ್ತಾವಿತ ಲಾಭಾಂಶ	–	–	–
ಷೇರು ಬಂಡವಾಳ ಸಂಚಿಕೆ	–	–	–
ಅಂಗಸಂಸ್ಥೆ ಮತ್ತು ಜಂಟಿ ಉದ್ಯಮದ ಷೇರುಗಳಲ್ಲಿನ ಹೂಡಿಕೆಯ ಮರುಸ್ಥಾಪನೆ	–	–	–
ವರ್ಷದಲ್ಲಿ ಅನುದಾನವನ್ನು ಸ್ವೀಕರಿಸಲಾಗಿದೆ	–	–	–
ವರದಿ ಮಾಡುವ ಅವಧಿಯ ಕೊನೆಯ ಸಮತೋಲನ	**3,14,84,33,440**	–	**3,14,84,33,440**

31ನೇ ಮಾರ್ಚ್ 2019 ರಲ್ಲಿ ಕ್ರೋಢೀಕೃತ ಈಕ್ವೀಟಿ ಷೇರು ಬಂಡವಾಳ ಬದಲಾಣೆ ಪಟ್ಟಿ

A ಈಕ್ವೀಟಿ ಷೇರು ಬಂಡವಾಳ

ಮೊತ್ತ ರೂ.ಗಳಲ್ಲಿ

ವರ್ಷದ ಆರಂಭದಲ್ಲಿ ಬಾಕಿ ಉಳಿದ ಷೇರುಗಳು	ಕೂಡು:–ವರ್ಷಾವಧಿಯಲ್ಲಿ ಬಿಡುಗಡೆಗೊಳಿಸಿದ ಷೇರುಗಳು	ವರ್ಷದ ಕೊನೆಯಲ್ಲಿ ಬಾಕಿ ಉಳಿದ ಷೇರುಗಳು
50,00,300	-	50,00,300

B. ಇತರ ಈಕ್ವೀಟಿ

ವಿವರಗಳು	ಮೀಸಲು ಮತ್ತು ಹೆಚ್ಚುವರಿ		
	ಉಳಿಸಿದ ಗಳಿಕೆ	ಸೆಕ್ಯುರೀಟಿಸ್ ಪ್ರಿಮಿಯಮ್	ಒಟ್ಟು
ವರದಿ ಮಾಡುವ ಅವಧಿಯ ಕೊನೆಯ ಸಮತೋಲನ	**2,19,28,38,687**	–	**2,19,28,38,687**
ವಾರ್ಷಿಕ ಲಾಭ	57,68,14,090	–	57,68,14,090
ಇತರ ಸಮಗ್ರ ಆದಾಯ	(51,267)	–	(51,267)
ಒಟ್ಟು ವಾರ್ಷಿಕ ಸಮಗ್ರ ಆದಾಯ	**57,67,62,823**	–	**57,67,62,823**
ಮೀಸಲು ಮತ್ತು ಹೆಚ್ಚುವರಿ		–	–
ನಗದು ಲಾಭಾಂಶದ ಮೇಲಿನ ಲಾಭಾಂಶ ವಿತರಣಾ ತೆರಿಗೆ	–	–	–
ವರ್ಷಕ್ಕೆ ಪ್ರಸ್ತಾವಿತ ಲಾಭಾಂಶ	–	–	–
ಷೇರು ಬಂಡವಾಳ ಸಂಚಿಕೆ	–	–	–
ಅಂಗಸಂಸ್ಥೆ ಮತ್ತು ಜಂಟಿ ಉದ್ಯಮದ ಷೇರುಗಳಲ್ಲಿನ ಹೂಡಿಕೆಯ ಮರುಸ್ಥಾಪನೆ	–	–	–
ವರ್ಷದಲ್ಲಿ ಅನುದಾನವನ್ನು ಸ್ವೀಕರಿಸಲಾಗಿದೆ	–	–	–
ವರದಿ ಮಾಡುವ ಅವಧಿಯ ಕೊನೆಯ ಸಮತೋಲನ	**2,76,96,01,510**	–	**2,76,96,01,510**

ಲೆಕ್ಕಗಳಿಗೆ ಟಿಪ್ಪಣಿಗಳು ಮತ್ತು ಪ್ರಮುಖ ಲೆಕ್ಕಪತ್ರ ಕಾರ್ಯನೀತಿಗಳು
1 ರಿಂದ 38ರ ವರೆಗಿನ ಟಿಪ್ಪಣಿ ಸಂಖ್ಯೆಗಳು ಲೆಕ್ಕಪತ್ರ ವಿವರಣಪಟ್ಟಿಗಳ ಅವಿಭಾಜ್ಯ ಭಾಗಗಳಾಗಿವೆ.

ಕರ್ನಾಟಕ ನವೀಕರಿಸಬಹುದಾದ
ಇಂಧನ ಅಭಿವೃದ್ಧಿ ನಿಯಮಿತದ ಪರವಾಗಿ

ಸಹಿ/–
(ಡಾ। ಹೆಚ್. ಬಿ. ಬೂದೆಪ್ಪ)
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 08661664

ಸಹಿ/–
(ಮಹೇಂದ್ರ ಜೈನ್)
ಅಧ್ಯಕ್ಷರು
ಡಿಐಎನ್: 01660388

ಸ್ಥಳ : ಬೆಂಗಳೂರು
ದಿನಾಂಕ : 28.09.2020

ನಮ್ಮ ಸಮ ದಿನಾಂಕದ ವರದಿಯಂತೆ
ವಿಷ್ಣು ರಾಜೇಂದ್ರನ್ & ಕಂಪನಿ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ನಂ. 004741S
ಸಹಿ/–
(ಥಾಮ್ ಜೋಸೆಫ್)
ಪಾಲುದಾರ
ಸದಸ್ಯತ್ವ ಸಂಖ್ಯೆ: 201502

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

CIN No. : U75112KA1996SGC020020

#39, "ಶಾಂತಿ ಗೃಹ" ಭಾರತ್ ಸ್ಕೌಟ್ಸ್ & ಗೈಡ್ಸ್, ಅರಮನೆ ರಸ್ತೆ, ಬೆಂಗಳೂರು–560001
PH: 080-22282220, website: kredlinfo.in

ಕ್ರೋಢೀಕೃತ ಹಣಕಾಸು ಹೇಳಿಕೆಗಳಿಗೆ ಟಿಪ್ಪಣಿಗಳು (ಮುಂದುವರಿದು)

ಟಿಪ್ಪಣಿ. 1 ಸ್ವತ್ತು ಸ್ಥಾವರ ಮತ್ತು ಉಪಕರಣಗಳು

ಮಾರ್ಚ್ 31, 2020 ಕ್ಕೆ ಕೊನೆಗೊಂಡ ವರ್ಷದ ಆಸ್ತಿ, ಸಸ್ಯ ಮತ್ತು ಸಲಕರಣೆಗಳ ಸಾಗಿಸುವ ಮೌಲ್ಯದಲ್ಲಿನ ಬದಲಾವಣೆಗಳು ಹೀಗಿವೆ

ಮೊತ್ತ ರೂ.ಗಳಲ್ಲಿ

ವಿವರಣೆಗಳು	ಒಟ್ಟು ಸಾಗಿಸುವ ಮೌಲ್ಯ				ಸಂಗ್ರಹವಾದ ಸವಕಳಿ					ನಿವ್ವಳ ಸಾಗಿಸುವ ಮೌಲ್ಯ	
	01.04.2019 ರಲ್ಲಿ	ಸೇರ್ಪಡೆಗಳು	ಮಾರಾಟ/ ಹೊಂದಣಿಕೆಗಳು	ಒಟ್ಟು 31.03.2020 ರಲ್ಲಿ	01.04.2019 ರಲ್ಲಿ	ವರ್ಷಕ್ಕೆ	ಹೊಂದಾಣಿಕೆಗಳು	ವರ್ಷದಲ್ಲಿನ ಅಳಿಸುವಿಕೆಗಳು	ಒಟ್ಟು 31.03.2020 ರಲ್ಲಿ	31.03.2020 ರಲ್ಲಿ	31.03.2019 ರಲ್ಲಿ
ಮಾಲಿಕತ್ವದ (ಸ್ವಾಮ್ಯದ) ಸ್ವತ್ತುಗಳು											
ಅ. ಸ್ಪಷ್ಟವಾದ											
ಪೀಠೋಪಕರಣ ಮತ್ತು ನೆಲೆವಸ್ತುಗಳು	1,18,93,908	1,07,031	–	1,20,00,939	62,36,397	9,71,532	–	–	72,07,929	47,93,010	56,57,511
ಕಛೇರಿ ಉಪಕರಣಗಳು	52,96,518	3,28,823	–	56,25,341	43,57,931	2,94,463	–	–	46,52,394	9,72,947	9,38,587
ಸಂಪರ್ಕ ಸಾಧನಗಳು	18,46,846	99,690	15,035	19,31,501	16,58,287	77,183	–	–	17,35,470	1,96,031	1,88,559
ಮೋಟರ್ ವಾಹನಗಳು	1,04,03,598	–	–	1,04,03,598	53,69,115	10,61,980	–	–	64,31,095	39,72,503	50,34,483
ಗಣಕಯಂತ್ರಗಳು –ಅಂತಿಮ ಬಳಕೆದಾರ ಸಾಧನಗಳು	59,38,726	8,11,193	–	67,49,919	49,32,011	6,37,817	–	–	55,69,828	11,80,091	10,06,715
ಸ್ಥಾವರ ಮತ್ತು ಯಂತ್ರೋಪಕರಣಗಳು	393	–	–	393	–	–	–	–	–	393	393
ಸೌರ ವಿದ್ಯುತ್ ಸ್ಥಾವರ	2,902	–	–	2,902	–	–	–	–	–	2,902	2,902
ಹೊಸ ಪವನ ವಿದ್ಯುತ್ ಮೇಲ್ವಿಚಾರಣ ಕೇಂದ್ರವನ್ನು ಸ್ಥಾಪಿಸುವುದು	–			–	–	–			–	–	
ಉಪಕರಣಗಳು	4,257	–	–	4,257	–	–	–	–	–	4,257	4,257
ಸಿವಿಲ್ ಕಾರ್ಯಗಳು	567	–	–	567	–	–	–	–	–	567	567
ಮಾವಿನ ಹುಂಡ, ಬೆಳಗಾವಿಯ ಪವನ ವಿದ್ಯುತ್ ಯೋಜನೆ	–			–	–	–					

ವಿವರಣೆಗಳು	ಒಟ್ಟು ಸಾಗಿಸುವ ಮೌಲ್ಯ				ಸಂಗ್ರಹವಾದ ಸವಕಳಿ					ನಿವ್ವಳ ಸಾಗಿಸುವ ಮೌಲ್ಯ	
	01.04.2019 ರಲ್ಲಿ	ಸೇರ್ಪಡೆಗಳು	ಮಾರಾಟ/ ಹೊಂದಣಿಕೆ ಗಳು	ಒಟ್ಟು 31.03.2020 ರಲ್ಲಿ	01.04.2019 ರಲ್ಲಿ	ವರ್ಷಕ್ಕೆ	ಹೊಂದಾಣಿಕೆ ಗಳು	ವರ್ಷದಲ್ಲಿನ ಅಳಿಸುವಿಕೆ ಗಳು	ಒಟ್ಟು 31.03.2020 ರಲ್ಲಿ	31.03.2020 ರಲ್ಲಿ	31.03.2019 ರಲ್ಲಿ
